ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಮಾರ್ಚ್ 25, 2021

ಸಂಪುಟ : 47 ಸಂಚಿಕೆ : 325 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com



## ಕಂಡ ಕನಸನ್ನು ನನಸಾಗಿಸುವ ಛಲ ಬೆಳೆಸಿಕೊಳ್ಳಿ: ಬೀಳಗಿ

ದಾವಣಗೆರೆ, ಮಾ. 24- ಪ್ರತಿ ವಿದ್ಯಾರ್ಥಿ ಮಹತ್ವಾಕಾಂಕ್ಷೆಯ ಕನಸು ಕಾಣಬೇಕು, ಆ ಕನಸನ್ನು ನನಸು ಮಾಡುವ ಛಲ ಬೆಳೆಸಿಕೊಳ್ಳಬೇಕು. ಗುರಿ ತಲುಪುವವರೆಗೂ ಯಾರೂ ವಿರಮಿಸಬಾರದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಫಲಿತಾಂಶ ಸುಧಾರಣೆಗಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯು ನ್ಯಾಮತಿ ತಾಲ್ಲೂಕಿನ ಬೆಳಗುತ್ತಿ-ಮಲ್ಲಿಗೇನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಬುಧವಾರ ಏರ್ಪಡಿಸಿದ್ದ 'ಕನಸು ಬಿತ್ತುವ ಕೆಲಸ-ರಾಷ್ಟ್ರ ಕಟ್ಟುವ ಕೆಲಸ' ವಿದ್ಯಾರ್ಥಿಗಳೊಂದಿಗೆ ಶೈಕ್ಷಣಿಕ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರಲ್ಲೂ ಅಗಾಧ ಶಕ್ತಿ ಇರುತ್ತದೆ, ಕಷ್ಟ ಪಡುವವರೇ ಜೀವನದಲ್ಲಿ ಉನ್ನತ ಸ್ಥಾನ ಪಡೆಯಲು ಸಾಧ್ಯ. 16 ರಿಂದ 22 ರೊಳಗಿನ ವಯಸ್ಸು ಕಂಡ ಕನಸನ್ನು ಸಾಕಾರಗೊಳಿಸಿಕೊಳ್ಳುವ ಪರಿಪಕ್ವವಾದ ಅವಧಿ ಎಂದು ಹೇಳಿದರು.

ನಕಾರಾತ್ಮಕ ಭಾವನೆ ಹೊಂದುವುದು ಒಳ್ಳೆಯದಲ್ಲ, ಆದಷ್ಟು ಧನಾತ್ಮಕವಾಗಿ ಚಿಂತಿಸಿ. ಬದಲಾವಣೆ ಜಗದ ನಿಯಮ, (2ನೇ ಪುಟಕ್ಕೆ)



### ಸೈನ್ಯಕ್ಕೆ ಸೇರುವಾಸೆ ಎಂದ ವಿದ್ಯಾರ್ಥಿನಿಗೆ ಡಿಸಿ ಪ್ರಶಂಸೆ

**ವಿದ್ಯಾರ್ಥಿಗಳ ಗುರಿ ಏನು ಎಂದು ಚಿಕ್ಕದಾಗಿ ಬರೆದು ತೋರಿಸಿ ಎಂದು ಜಿಲ್ಲಾಧಿಕಾರಿ ನೀಡಿದ ಆಹ್ವಾನಕ್ಕೆ ವಿದ್ಯಾರ್ಥಿನಿ ಜ್ಯೋತಿ ಸಿ.ಆರ್. 'ನಾನು ನನ್ನ ಅಪ್ಪನ ಆಸೆ ಈಡೇರಿಸಲು ಸೇನೆಗೆ ಸೇರಬೇಕು' ಎಂಬ ಬರಹಕ್ಕೆ ಮೆಚ್ಚಿದ ಜಿಲ್ಲಾಧಿಕಾರಿ, ವಿದ್ಯಾರ್ಥಿನಿಗೆ 2 ಸಾವಿರ ರೂ. ನಗದು ಬಹುಮಾನ ನೀಡಿ, ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ಕೆಲ ವಿದ್ಯಾರ್ಥಿಗಳು ತಾನು ಡಾಕ್ಟರ್ ಆಗುವ ಕನಸು ಇದೆ ಎಂದು ಬರೆದಿದ್ದರು.**

# ಪಾಲಿಕೆ ಖಾಲಿ ಜಾಗಗಳಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ

## ಸರ್ಕಾರಿ ಹುದ್ದೆ ಭರ್ತಿ ಸದ್ಯಕ್ಕಿಲ್ಲ : ಯಡಿಯೂರಪ್ಪ ಸ್ಪಷ್ಟನೆ

ಬೆಂಗಳೂರು, ಮಾ. 24 - ಖಾಲಿ ಇರುವ ಸರ್ಕಾರಿ ಹುದ್ದೆಗಳ ಭರ್ತಿ ಸದ್ಯಕ್ಕಿಲ್ಲ ಎಂದಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಈ ಹುದ್ದೆಗಳನ್ನು ಭರ್ತಿ ಮಾಡಿದರೆ, ಬೊಕ್ಕಸಕ್ಕೆ ವಾರ್ಷಿಕ 12,000 ಕೋಟಿ ರೂ. ಹೊರೆ ಬೀಳುತ್ತದೆ ಎಂದು ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಕೊರೊನಾ ಸಂಕಷ್ಟದಿಂದ ಜರ್ಝರಿತಗೊಂಡಿರುವ ನಮ್ಮ ಆರ್ಥಿಕ ಸ್ಥಿತಿಯನ್ನು ಪುನಃಶ್ಚೇತನಗೊಳಿಸಬೇಕಿದೆ. ಅನಗತ್ಯ ದುಂದು ವೆಚ್ಚಗಳಿಗೆ ಕಡಿವಾಣ ಹಾಕಿ, ಸೋರಿಕೆ ತಡೆಗಟ್ಟಿ, ಆದಾಯ ಮೂಲವನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.



ಬೆಂಗಳೂರು, ಮೈಸೂರು, ದಾವಣಗೆರೆ, ಮಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಖಾಲಿ ಜಾಗಗಳನ್ನು ಗುರುತಿಸಿ, ಅಲ್ಲಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸುವುದಾಗಿ ಹೇಳಿದ್ದಾರೆ.

ಈ ಹಿಂದೆ, ವಿವಿಧ ಸರ್ಕಾರಿ, ಸರ್ಕಾರೇತರ ಸಂಸ್ಥೆಗಳಿಗೆ ನೀಡಿರುವ ಸಾಲವನ್ನು ವಸೂಲಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಈ ಕ್ರಮಗಳಿಂದ ಸರ್ಕಾರದ ಸಾಲೇತರ ಬಂಡವಾಳ ಸ್ವೀಕೃತಿಗಳನ್ನು ಹೆಚ್ಚಿಸಬಹುದು ಹಾಗೂ ಸರ್ಕಾರವು ಬಂಡವಾಳ (2ನೇ ಪುಟಕ್ಕೆ)

### ಎಲ್ಲ ಕ್ಷೇತ್ರಗಳಿಗೂ ನ್ಯಾಯ

**ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ಮತ್ತು ಒಕ್ಕಲಿಗ ಅಭಿವೃದ್ಧಿ ನಿಗಮಕ್ಕೆ ತಲಾ 500 ಕೋಟಿ ರೂ. ಅನುದಾನ ಒದಗಿಸಿದ್ದರಿಂದ ನನ್ನನ್ನು ಹಿಂದುಳಿದ ವರ್ಗಗಳ ವಿರೋಧಿ ಎಂದು ಬಿಂಬಿಸಲಾಯಿತು. ಪ್ರಸಕ್ತ ಸಾಲಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆಗೆ 2,316 ಕೋಟಿ ರೂ. ಅನುದಾನ ಒದಗಿಸಲಾಗಿದೆ, ಇತರೆ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೂ 1,000 ಕೋಟಿ ರೂ. ಅನುದಾನ ನೀಡುತ್ತೇವೆ.**

**ಹಿಂದುಳಿದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸಕ್ತ ಸಾಲಿನಲ್ಲಿ 1,500 ಕೋಟಿ ರೂ. ಹಾಗೂ ವಿಶೇಷ ಅಭಿವೃದ್ಧಿ ಯೋಜನೆಯಡಿ 3,000 ಕೋಟಿ ರೂ. ಒದಗಿಸಲಾಗಿದೆ, ಇದರೊಂದಿಗೆ ಎಲ್ಲ ಕ್ಷೇತ್ರಗಳಿಗೂ ನ್ಯಾಯ ಒದಗಿಸಿದ್ದೇವೆ ಎಂದು ಯಡಿಯೂರಪ್ಪ ಸಮರ್ಥಿಸಿಕೊಂಡರು.**

## ದಾವಣಗೆರೆ ಜಿ.ಪಂ. ಕ್ಷೇತ್ರ 34, ತಾ.ಪಂ. ಕ್ಷೇತ್ರ 90

ದಾವಣಗೆರೆ, ಮಾ.24- ಪಂಚಾಯತ್‌ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ– 2015ರಂತೆ ಜಿ.ಪಂ. ಮತ್ತು ತಾ.ಪಂ.ಗಳ ಪುನರ್‌ವಿಂಗಡನೆ ಮಾಡಿ ಸರ್ಕಾರ ಆದೇಶಿಸಿದೆ.

ನೂತನ ಆದೇಶದಂತೆ ಜಿ.ಪಂ. ಕ್ಷೇತ್ರಗಳ ಸಂಖ್ಯೆ 34 ಆದರೆ, ತಾ. ಪಂ. ಕ್ಷೇತ್ರಗಳ ಸಂಖ್ಯೆ 90 ಆಗಿದೆ. ಈ ಹಿಂದೆ ಜಿಲ್ಲೆಯಲ್ಲಿ 36 ಜಿ.ಪಂ. ಕ್ಷೇತ್ರಗಳಿದ್ದವು. ಹರಪನಹಳ್ಳಿ ತಾಲ್ಲೂಕು ದಾವಣಗೆರೆಯಿಂದ ಬಳ್ಳಾರಿಗೆ ಹೋಗಿದ್ದರಿಂದ 7 ಕ್ಷೇತ್ರಗಳು ಕಡಿಮೆಯಾಗಿ 29 ಆಗಿತ್ತು. ಹಿಂದೆ ಪ್ರತಿ 40 ಸಾವಿರ ಮಂದಿಗೆ ಒಂದು ಜಿ.ಪಂ. ಕ್ಷೇತ್ರ ಎಂದು ವಿಂಗಡನೆ ಮಾಡಲಾಗಿತ್ತು. ಅದನ್ನು 2015ರ ತಿದ್ದಪಡಿಯಲ್ಲಿ 35 ಸಾವಿರಕ್ಕೆ ಇಳಿಸಲಾಗಿತ್ತು. 2011ರ ಜನಗಣತಿಯನ್ನೇ ಆಧಾರವಾಗಿಟ್ಟುಕೊಂಡು ಈಗ ಪುನರ್‌ವಿಂಗಡನೆ ಮಾಡಲಾಗಿದೆ. ಅದರಂತೆ ನ್ಯಾಮತಿ ಹೊರತುಪಡಿಸಿ ಉಳಿದ 5 ತಾಲ್ಲೂಕುಗಳಲ್ಲಿ ಒಂದೊಂದು ಕ್ಷೇತ್ರಗಳು ಹೆಚ್ಚಾಗಲಿವೆ. ಒಟ್ಟು ಕ್ಷೇತ್ರಗಳ ಸಂಖ್ಯೆ 29ರ ಬದಲು 34 ಆಗಿದೆ.

ಇನ್ನು 10 ಸಾವಿರ ಜನಸಂಖ್ಯೆಗೆ ಒಂದು ತಾ.ಪಂ. ಕ್ಷೇತ್ರ ಮಾಡಬೇಕು ಎಂದು ಹಿಂದೆ ನಿಯಮ ಇತ್ತು. ಅದನ್ನು 12,500ಕ್ಕೆ ಒಂದು ಎಂದು ತಿದ್ದುಪಡಿ ಮಾಡಲಾಗಿದೆ. ಇದರಿಂದಾಗಿ ಜಿಲ್ಲೆಯಲ್ಲಿ ಒಟ್ಟು ತಾ. ಪಂ. ಕ್ಷೇತ್ರಗಳ ಸಂಖ್ಯೆ 104ರ ಬದಲು 90ಕ್ಕೆ ಇಳಿದಿದೆ.

## ಶಾಸಕರು ಏಕಪತ್ನಿ ವ್ರತಸ್ಥರೇ? ಎಂದು ಡಾ.ಸುಧಾಕರ್ ಲೇವಡಿ

ಬೆಂಗಳೂರು, ಮಾ. 24 - ವಿಧಾನಸಭೆಯ 225 ಸದಸ್ಯರು ಏಕಪತ್ನಿ ವ್ರತಸ್ಥರೇ ಎಂದು ಪ್ರಶ್ನಿಸಿರುವ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ತಮ್ಮನ್ನೂ ಸೇರಿದಂತೆ ಎಲ್ಲಾ ಸದಸ್ಯರ ಚಾರಿತ್ರ್ಯದ ಬಗ್ಗೆ ತನಿಖೆಯಾಗಲಿ ಎಂದು ಸವಾಲು ಹಾಕಿದ್ದಾರಾದರೂ, ತಮ್ಮ ಹೇಳಿಕೆಯಿಂದ ಪರಿಸ್ಥಿತಿ ವಿಕೋಪಕ್ಕೆ ಹೋದ ನಂತರ ಆಡಿದ ಮಾತುಗಳನ್ನು ವಾಪಸ್ ಪಡೆದಿದ್ದಾರೆ.

**ಸಿಎಂ ಸೂಚನೆ ನಂತರ ಕ್ಷಮೆ ಯಾಚನೆ**

ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಮೇಶ್ ಕುಮಾರ್, ಹೆಚ್. ಡಿ.ಕುಮಾರಸ್ವಾಮಿ, ಕೆ.ಎಚ್.ಮುನಿಯಪ್ಪ ಸತ್ಯಹರಿಶ್ಚಂದ್ರರೇ, ಶ್ರೀರಾಮಚಂದ್ರರೇ, ಇವರೆಲ್ಲರೂ ಏಕಪತ್ನಿ ವ್ರತಸ್ಥರೇ ತನಿಖೆಯಾಗಲಿ, ಎಲ್ಲರ ಬಣ್ಣ ಬಯಲಾಗುತ್ತದೆ ಎಂದು ಪತ್ರಕರ್ತರೊಂದಿಗೆ ಮಾತನಾಡಿದ್ದ ಸುಧಾಕರ್ ಹೇಳಿದ್ದರು.

ಕಾಂಗ್ರೆಸ್‌ನವರು ವಿಧಾನಸಭೆಯಲ್ಲಿ ಕಳೆದ ಮೂರು ದಿನಗಳಿಂದ ಸಿ.ಡಿ. ಗುಮ್ಮ ಇಟ್ಟುಕೊಂಡು ಕಲಾಪದ ಸಮಯ ಹಾಳು (2ನೇ ಪುಟಕ್ಕೆ)

### 30ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ನಲ್ಲೂರು ಗೌರಮ್ಮ ನರಹರಿ ರೇವಣಕರ್**

ಜನನ : 11.11.1917 ನಿಧನ : 25.2.1991

ನೀವು ನಮ್ಮನ್ನಗಲಿ 30 ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ,

**ನಲ್ಲೂರು ಬಿ.ಎನ್ ಸರ್ವೋತ್ತಮ್ ರಾವ್ ಮತ್ತು ಸಹೋದರರು, ಸಹೋದರಿಯರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಬಂಧು-ಮಿತ್ರರು.**

ಶ್ರೀ ಎಸ್.ಎಲ್. ಆನಂದಪ್ಪ, ಸಿವಿಲ್ ಇಂಜಿನಿಯರ್ ಇವರಿಂದ ಉದ್ಘಾಟನೆಯಾಗಿರುವ

ಶ್ರೀ ವೀರಭದ್ರೇಶ್ವರ ಸಾಲಿಡ್ ಬ್ರಿಕ್ಸ್ ಮತ್ತು ಪೇವರ್ಸ್

ಶಾಮನೂರು ರಸ್ತೆ, ಸಂಭ್ರಮ್ ಹೋಟೆಲ್ ಪಕ್ಕ, ದಾವಣಗೆರೆ.

ಫೋನ್ : 99648 48433, 80959 63636, 88614 62469, 95388 29143









ಸಂಪರ್ಕಿಸಿ :
ಶಂಕರ್ ಹೆಚ್. ಗಡ್ಡದ
ಮಾಲೀಕರು
ಮಂಗಳ ಕನ್‌ಸ್ಟ್ರಕ್ಷನ್
ನಂ. 1758/24, ಸರಸ್ವತಿ ನಗರ, ದಾವಣಗೆರೆ.

ನಮ್ಮಲ್ಲಿ ಎಲ್ಲಾ ತರಹದ
'ಸಿಮೆಂಟ್ ಬ್ರಿಕ್ಸ್‌ಗಳು'
ದೊರೆಯುತ್ತವೆ...

## ಕಾಂಗ್ರೆಸ್‌ನಿಂದ ಉಚ್ಛಾಟನೆ ನಿಯಮ ಬಾಹಿರ: ಮುಜಾಹಿದ್ ಪಾಷಾ

ದಾವಣಗೆರೆ, ಮಾ.24- ಕಾಂಗ್ರೆಸ್ ಪಕ್ಷದಿಂದ ನನ್ನನ್ನು ಉಚ್ಛಾಟಿಸಿರುವುದು ನಿಯಮ ಬಾಹಿರ ಎಂದು ಮಹಾನಗರ ಪಾಲಿಕೆ 22ನೇ ವಾರ್ಡ್ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಮಹಮ್ಮದ್ ಮುಜಾಹಿದ್ ಪಾಷ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಮೇಯರ್ ಚುನಾವಣೆಯಲ್ಲಿ ವಿಪ್ ಜಾರಿ ಮಾಡಿದ್ದನ್ನು ಉಲ್ಲಂಘಿಸಿದ ಪಾಲಿಕೆ ಸದಸ್ಯರ ವಿರುದ್ಧವೇ ಕ್ರಮ ಕೈಗೊಳ್ಳದ ಕಾಂಗ್ರೆಸ್ ನಾಯಕರು ಸಾಮಾನ್ಯ ಕಾರ್ಯಕರ್ತನಾಗಿರುವ ನನ್ನನ್ನು ಪಕ್ಷದಿಂದ ಉಚ್ಛಾಟಿಸಿದ್ದಾರೆ.

ಯುವ ಕಾಂಗ್ರೆಸ್ ಪದಾಧಿಕಾರಿಗಳನ್ನು ಉಚ್ಛಾಟಿಸುವ ಅಧಿಕಾರ ಜಿಲ್ಲಾ ಕಾಂಗ್ರೆಸ್‌ಗೆ ಇರುವುದಿಲ್ಲ. ಆದರೆ ಉಚ್ಛಾಟನೆ ಮಾಡಲು ಶಿಫಾರಸ್ಸು ಮಾಡಬಹುದಷ್ಟೇ. ಹೀಗಾಗಿ ಉಚ್ಛಾಟನೆಯೇ ನಿಯಮ ಬಾಹಿರ ಎಂದರು. ಪತ್ರಿಕಾಗೋಷ್ಠಿಯಲ್ಲಿ ಓ.ಎಸ್. ಶಫಿ, ಅಸ್ಲಾಂ, ಇಸ್ಮಾಯಿಲ್, ಸದ್ದಾಂ, ಅನ್ಸರ್ ಉಪಸ್ಥಿತರಿದ್ದರು.

## ನ್ಯಾಯಮೂರ್ತಿ ರಮಣ ಮುಂದಿನ ಸಿಜೆಐ

ನವದೆಹಲಿ, ಮಾ. 24 – ನ್ಯಾಯಮೂರ್ತಿ ಎನ್.ವಿ. ರಮಣ ಅವರನ್ನು ತಮ್ಮ ಉತ್ತರಾಧಿಕಾರಿಯಾಗಿ ಹಾಗೂ 48ನೇ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಆಗಿ ನೇಮಿಸುವಂತೆ ಹಾಲಿ ಸಿಜೆಐ ಆಗಿರುವ ಎಸ್.ಎ. ಬೊಬ್ಡೆ ಶಿಫಾರಸ್ಸು ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಿಜೆಐ ಬೊಬ್ಡೆ ಅವರು ಏಪ್ರಿಲ್ 23ರಂದು ನಿವೃತ್ತರಾಗಲಿದ್ದಾರೆ. ಅವರು ತಮ್ಮ ಶಿಫಾರಸ್ಸನ್ನು ಸರ್ಕಾರಕ್ಕೆ ರವಾನಿಸಿದ್ದು, ಅದರ ಪ್ರತಿಯೊಂದನ್ನು ನ್ಯಾಯಮೂರ್ತಿ ರಮಣಗೆ ಕಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಂಪ್ರದಾಯದ ಅನ್ವಯ ಅವರು ನಿವೃತ್ತಿಗೆ ಒಂದು ತಿಂಗಳಿರುವಾಗ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿದ್ದಾರೆ. ನ್ಯಾಯಮೂರ್ತಿ ರಮಣ ಅವರು ಮುಂದಿನ ಏಪ್ರಿಲ್ 24ರಂದು ಅಧಿಕಾರ ವಹಿಸಿಕೊಳ್ಳಲಿದ್ದು, ಆಗಸ್ಟ್ 26, 2022ರಂದು ನಿವೃತ್ತರಾಗಲಿದ್ದಾರೆ.

# ಜೀವಜಲ ರಕ್ಷಣೆ ಪ್ರತಿಯೊಬ್ಬರ ಹೊಣೆ

ಹರಪನಹಳ್ಳಿ, ಮಾ.24- ಸಕಲ ಜೀವಿಗಳು ಬದುಕಲು ಅಗತ್ಯವಾಗಿರುವ ಜೀವ ಜಲವನ್ನು ರಕ್ಷಿಸುವುದು ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಉಂಡಿ ಮಂಜುಳ ಶಿವಪ್ಪ ಹೇಳಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವಿಶ್ವ ಜಲ ದಿನಾಚರಣೆಯಲ್ಲಿ ಕಾನೂನು ಅರಿವು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ನೀರನ್ನು ಹೆಚ್ಚು ಹೆಚ್ಚು ಪೋಲು ಮಾಡುವ ಬದಲು ಹಿತ ಮಿತವಾಗಿ ಬಳಕೆ ಮಾಡಿ ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡಬೇಕು ಎಂದು ತಿಳಿ ಹೇಳಿದರು. ಗಿಡಮರಗಳ ಮಾರಣಹೋಮದಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದ್ದು, ಅಂತರ್ಜಲ ಮಟ್ಟ ಕುಸಿಯುತ್ತಿದೆ. ಇದೇ ಪರಿಸ್ಥಿತಿ ಮುಂದುವರೆದಲ್ಲಿ ಮುಂದೊಂದು ದಿನ ಹನಿ ನೀರಿಗಾಗಿ ಪರದಾಡುವ ಸ್ಥಿತಿ ಎದುರಾಗುವ ಸಾಧ್ಯತೆ ಹೆಚ್ಚಾಗಲಿದೆ ಎಂದರು.

ಅಂತಸ್ತು, ಐಷಾರಾಮಿ ಜೀವನ, ಬಂಗಾರ, ಬ್ಯಾಂಕಿನಲ್ಲಿ ಕೋಟಿ ಕೋಟಿ ಹಣ ಇದ್ದವರು ಶ್ರೀಮಂತರಲ್ಲ ಶುದ್ಧ ಗಾಳಿ, ನೀರು, ಆಹಾರ ಸೇವಿಸುವವರೇ ನಿಜವಾದ ಶ್ರೀಮಂತರು. ಪರಿಸರ



**ಹರಪನಹಳ್ಳಿಯಲ್ಲಿ ನ್ಯಾ. ಉಂಡಿ ಮಂಜುಳ**

ಸ್ನೇಹಿಗಳಾಗಿ ಜೊತೆಗೆ ಪ್ರಾಣಿ, ಪಕ್ಷಿಗಳನ್ನು ಪ್ರೀತಿಸಿ. ಬೇಸಿಗೆಯಲ್ಲಿ ಅವುಗಳಿಗೆ ಒಂದು ಹಿಡಿ ಧಾನ್ಯ ಹಾಕಿ ನೀರನ್ನು ಉಣಿಸುವ ಮೂಲಕ ಮಾನವೀಯತೆ ಮೆರೆಯಿರಿ ಎಂದು ಕರೆ ನೀಡಿದರು.

ಪುರಸಭೆಯ ಕಛೇರಿ ವ್ಯವಸ್ಥಾಪಕ ಅಶೋಕ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಪರ ಸರ್ಕಾರಿ ವಕೀಲರಾದ ಮಂಜುನಾಥ್ ಕಣಿವಿಹಳ್ಳಿ ಮಾತನಾಡಿದರು.

ಈ ಸಂದರ್ಭದಲ್ಲಿ ಸಿವಿಲ್ ಕಿರಿಯ ನ್ಯಾಯಾಧೀಶೆ ಬಿ.ಜಿ.ಶೋಭಾ, ಪುರಸಭೆ ಅಧ್ಯಕ್ಷ ಮಂಜುನಾಥ್ ಇಜಂತಕರ್, ಪುರಸಭೆ ಮುಖ್ಯಾಧಿಕಾರಿ ಬಿ.ಆರ್. ನಾಗರಾಜ್ ನಾಯ್ಕ, ಸದಸ್ಯರಾದ ಅಬ್ದುಲ್ ರೆಹಮಾನ್ ಸಾಬ್, ಟಿ. ವೆಂಕಟೇಶ್, ಸತ್ತೂರು ಎಲ್ಲಮ್ಮ, ಎಸ್. ತಾರಾ ಉಪಸ್ಥಿತರಿದ್ದರು.

ಎಂ. ಮೃತ್ಯುಂಜಯ, ಎಸ್.ಎಂ. ರುದ್ರಮುನಿ, ಶ್ರೀನಿವಾಸ್, ವಕೀಲರ ಸಂಘದ ಕಾರ್ಯದರ್ಶಿ ಬಸವರಾಜ್, ಹಿರಿಯ ಆರೋಗ್ಯ ನಿರೀಕ್ಷಕ ಪಿ. ಮಂಜುನಾಥ, ಸಮುದಾಯ ಸಂಘಟನಾಧಿಕಾರಿ ಸಿ. ಲೋಕ್ಯಾನಾಯ್ಕ, ಇಂಜಿನಿಯರ್ ಪ್ರಭು ಬಿರಾದಾರ್, ಆರ್. ಓ. ಸವಿತಾ, ಜಬೀಲ್, ಚನ್ನಬಸಪ್ಪ, ಕೌಟಿ ವಾಗೀಶ್, ನಾಮನಿರ್ದೇಶಿತ ಸದಸ್ಯರಾದ ಎಂ. ರುದ್ರಪ್ಪ, ಬಿದ್ದಪ್ಪ, ಅಮಾನುಲ್ಲಾ, ತಿಮ್ಮಪ್ಪ, ಬಸವರಾಜ್, ಬಾಗಳಿ ಹೆಚ್. ಕೊಟ್ರೇಶ್ ಸೇರಿದಂತೆ ಪುರಸಭೆ ಸಿಬ್ಬಂದಿಗಳು ಹಾಗೂ ಕೋರ್ಟ್ ಸಿಬ್ಬಂದಿಗಳು ಹಾಜರಿದ್ದರು.

## ಹಡಗಲಿ ತಹಶೀಲ್ದಾರ್ ಗ್ರಾಮ ವಾಸ್ತವ್ಯ : 48 ಅರ್ಜಿಗಳಿಗೆ ಮುಕ್ತಿ

ಹೂವಿನಹಡಗಲಿ,ಮಾ.24- ತಾಲ್ಲೂಕಿನ ಮಹಾಜನದಹಳ್ಳಿಯಲ್ಲಿ ಕಂದಾಯ ಇಲಾಖೆ ಆಯೋಜಿಸಿದ್ದ 'ಅಧಿಕಾರಿಗಳ ನಡೆ ಗ್ರಾಮದ ಕಡೆ' ಕಾರ್ಯಕ್ರಮದ ಸಂದರ್ಭದಲ್ಲಿ ಸಲ್ಲಿಕೆಯಾಗಿದ್ದ 172 ಅರ್ಜಿಗಳ ಪೈಕಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ 48 ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥ ಪಡಿಸಲಾಗಿದೆ. ಸಾಮಾಜಿಕ ಭದ್ರತಾ ಯೋಜನೆಯಡಿ 24 ಮಂದಿ ಫಲಾನುಭವಿಗಳಿಗೆ ಪಿಂಚಣಿ ಮಂಜೂರಾತಿ ಆದೇಶ ಪತ್ರವನ್ನು ವಿತರಿಸಲಾಗಿದೆ ತಾಲ್ಲೂಕು ಪಂಚಾಯಿತಿ 12 ಮತ್ತು ತೋಟಗಾರಿಕೆ ಇಲಾಖೆಯಿಂದ 8, ಭೂಮಾಪನ ಇಲಾಖೆ ಸಂಬಂಧಿಸಿದ 4 ಅರ್ಜಿಗಳ ಸಮಸ್ಯೆಯನ್ನು ಅಧಿಕಾರಿಗಳು ಸ್ಥಳದಲ್ಲಿಯೇ ಪರಿಹರಿಸಿದ್ದಾರೆ.

ಹರಪನಹಳ್ಳಿ ಉಪವಿಭಾಗಾಧಿಕಾರಿ ಚಂದ್ರಶೇಖರಯ್ಯ ಮಾತನಾಡಿ, ವೈಯಕ್ತಿಕ ಸಮಸ್ಯೆಗಳ ಬಗ್ಗೆ ಜನರು ಅರ್ಜಿ ಸಲ್ಲಿಸಬಹುದಾಗಿದೆ. ಈ ಕಾರ್ಯಕ್ರಮ ಬಳಕೆ ಮಾಡಿಕೊಳ್ಳಬೇಕೆಂದು ಅವರು ಸಲಹೆ ನೀಡಿದರು. ವಿವಿಧ ಅಧಿಕಾರಿಗಳು, ಕಂದಾಯ ಇಲಾಖೆ ಸಿಬ್ಬಂದಿ, ಕಾರ್ಯಕರ್ತರು ಮತ್ತು ಅಂಗನವಾಡಿ ಕಾರ್ಯಕರ್ತರು ಹಾಜರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

ಮಲೇಬೆನ್ನೂರು ಮತ್ತು ನಂದಿಗುಡಿಯಲ್ಲಿರುವ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿ ಇರುವುದರಿಂದ ಇಂದು ಬೆಳಿಗ್ಗೆ 11 ರಿಂದ ಸಂಜೆ 5 ರವರೆಗೆ ಮಲೇಬೆನ್ನೂರು, ಕುಂಬಳೂರು, ನಿಟ್ಟೂರು, ಕುಣೆಬೆಳಕೆರೆ, ನಂದಿತಾವರೆ, ಬೂದಿಹಾಳ್, ಸಂಕ್ಲಿಪುರ, ಜಿಗಳಿ, ಜಿ. ಬೇವಿನಹಳ್ಳಿ, ವಿನಾಯನಗರ ಕ್ಯಾಂಪ್, ಹಾಲಿವಾಣ, ಹರಳಹಳ್ಳಿ, ಕೊಮಾರನಹಳ್ಳಿ, ಕೊಪ್ಪ, ದಿಬ್ಬದಹಳ್ಳಿ ಹಾಗೂ ಕೊಕ್ಕನೂರು, ಜಿ.ಟಿ. ಕಟ್ಟೆ, ಮೂಗಿನಗೊಂದಿ, ಗೋವಿನಹಾಳ್, ನಂದಿಗುಡಿ, ವಾಸನ, ಹಿಂಡಸಘಟ್ಟ, ಕೆ.ಎನ್. ಹಳ್ಳಿ, ಪಾಳ್ಯ ಸೇರಿದಂತೆ ಮತ್ತಿತರೆ ಹಳ್ಳಿಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಉಂಟಾಗಲಿದೆ.

# ಹರಿಹರ ತಾಲ್ಲೂಕಿನ 17 ಕೆರೆಗಳಿಗೆ ನೀರು ತುಂಬಿಸುವ ಯೋಜನೆ : ಸರ್ಕಾರದ ಗಮನ ಸಳೆದ ಶಾಸಕ ರಾಮಪ್ಪ



ಮಲೇಬೆನ್ನೂರು, ಮಾ.24 - ಹರಿಹರ ತಾಲ್ಲೂಕಿನ 17 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆಯ ಬಗ್ಗೆ ಶಾಸಕ ಎಸ್. ರಾಮಪ್ಪ ಅವರು ಮಂಗಳವಾರ ವಿಧಾನಸಭೆಯಲ್ಲಿ ಸರ್ಕಾರದ ಗಮನ ಸೆಳೆದಿದ್ದಾರೆ. 17 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಪ್ರಕ್ರಿಯೆ ಪ್ರಾರಂಭವಾಗಿದೆಯೇ ಮತ್ತು ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ಎಷ್ಟು ಎಂದು ಶಾಸಕ ರಾಮಪ್ಪ ಅವರು ಕೇಳಿದ ಚುಕ್ಕಿ ಗುರುತಿನ ಪ್ರಶ್ನೆಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಉತ್ತರ ನೀಡಿದ್ದಾರೆ.

ಹರಿಹರ ತಾಲ್ಲೂಕಿನ 17 ಕೆರೆಗಳ ಪೈಕಿ ಕೊಮಾರನಹಳ್ಳಿಯ ಹೆಳವನಕಟ್ಟೆಯ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಕೆರೆಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸಲು ಈಗಾಗಲೇ 48 ಕೋಟಿ ರೂ ಅಂದಾಜಿನಲ್ಲಿ ಕೈಗೊಂಡಿರುವ ಹೊನ್ನಾಳಿ ತಾಲ್ಲೂಕಿನ ಬೆನಕನಹಳ್ಳಿ ಮತ್ತು ಇತರೆ 19 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಡಿ ಸೇರ್ಪಡೆಗೊಂಡಿದ್ದು ಯೋಜನೆಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ ಹರಿಹರ ತಾಲ್ಲೂಕಿನ ಇನ್ನುಳಿದ 16 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಕಾಮಗಾರಿಯ ಕಾರ್ಯ ಸಾಧ್ಯತೆ ಬಗ್ಗೆ ಕರ್ನಾಟಕ ನೀರಾವರಿ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ ಎಂದು ಯಡಿಯೂರಪ್ಪ ಅವರು ಉತ್ತರ ನೀಡದ್ದಾರೆ.

ಶಾಸಕ ಎಸ್.ರಾಮಪ್ಪ ಮತ್ತು ನಮ್ಮ ನಿರಂತರ ಪ್ರಯತ್ನದಿಂದಾಗಿ ಕೊಮಾರನಹಳ್ಳಿ ಕೆರೆಗೆ ನೀರು ತುಂಬಿಸುವ ಯೋಜನೆ ಒಂದು ಹಂತಕ್ಕೆ ಬಂದಿರುವುದು ಸಂತಸ ತಂದಿದೆ ಎಂದು ಹರಿಹರ ಎಪಿಎಂಸಿ ಸದಸ್ಯ ಜಿ. ಮಂಜುನಾಥ್ ಪಟೇಲ್ ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಐತಿಹಾಸಿಕ ಕೊಮಾರನಹಳ್ಳಿ ಕೆರೆಯನ್ನು ಅಭಿವೃದ್ದಿ ಪಡಿಸುವ ಕಾಮಗಾರಿ ಶೀಘ್ರ ಪ್ರಾರಂಭವಾಗುವ ವಿಶ್ವಾಸವಿದ್ದು ಉಳಿದ 16 ಕೆರೆಗಳಿಗೆ ತುಂಗಭದ್ರಾ ನದಿ ನೀರು ತುಂಬಿಸಲು ಸಂಸದ ಜಿ.ಎಮ್. ಸಿದ್ದೇಶ್ವರ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ ಅವರು ಶಾಸಕ ಎಸ್. ರಾಮಪ್ಪ ಅವರಿಗೆ ಬೆಂಬಲ ನೀಡಿ ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಬೇಕೆಂದು ಕೊಮಾರನಹಳ್ಳಿಯ ಜಿ.ಮಂಜುನಾಥ್ ಪಟೇಲ್ ಮನವಿ ಮಾಡಿದ್ದಾರೆ.

# ಏಕಪತ್ನಿ ವ್ರತಸ್ಥರೇ? ಎಂದು ಡಾ.ಸುಧಾಕರ್ ಲೇವಡಿ

**(1ನೇ ಪುಟದಿಂದ)** ಮಾಡಿದ್ದಾರೆ. ನಾವು ಆರು ಸಚಿವರು ನಮ್ಮ ರಕ್ಷಣೆಗಾಗಿ ನ್ಯಾಯಾಲಯದ ಮೊರೆ ಹೋಗಿದ್ದೇವೆ, ಮಾನ ಹೋದ ಮೇಲೆ ಅದನ್ನು ಮತ್ತೆ ಸರಿಪಡಿಸಲು ಸಾಧ್ಯವಿಲ್ಲ. ನಮ್ಮ ಮೇಲೆ ಆರೋಪ ಮಾಡುವ ಈ ಮಹಾನ್ ನಾಯಕರೆಲ್ಲಾ ಸತ್ಯಹರಿಶ್ಚಂದ್ರರೇ, ಇವರು ಏಕಪತ್ನೀ ವ್ರತಸ್ಥರೇ, ಯಾರಿಗೂ ಅನೈತಿಕ ಸಂಬಂಧ ಇಲ್ಲವೇ, ನಾನಿದನ್ನು ಸವಾಲಾಗಿ ಸ್ವೀಕರಿಸುತ್ತೇನೆ, ತನಿಖೆಯಾಗಲಿ ಎಂದಿದ್ದರು.

ಮಾಜಿ ಮುಖ್ಯಮಂತ್ರಿಗಳು, ಯಾರ್ಯಾರು ಏನೇನು ಮಾಡಿದ್ದಾರೆ ಎಂಬುದು ತಿಳಿದಿದೆ, ಕಾಂಗ್ರೆಸ್, ಜೆಡಿಎಸ್‌ನವರು ಮರ್ಯಾದಾ ಪುರುಷರೇ, ಶ್ರೀರಾಮಚಂದ್ರರೇ, ಇವರಿಗೇನು ಅನೈತಿಕ ಸಂಬಂಧ ಇಲ್ಲವೇ? ಎಂದು ಪ್ರಶ್ನಿಸಿರುವ ಡಾ.ಸುಧಾಕರ್, ಆತ್ಮಸಾಕ್ಷಿ ಇದ್ದರೆ ತನಿಖೆ ಎದುರಿಸಲಿ, ಎಲ್ಲರ ಚರಿತ್ರೆ ಬಯಲಾಗುತ್ತದೆ, ಯಾರು ಮರ್ಯಾದ ಪುರುಷರು ಎಂದು ಗೊತ್ತಾಗುತ್ತದೆ ಎಂದು ಸವಾಲೆಸೆದಿದ್ದರು.

**ಯಡಿಯೂರಪ್ಪ ಸೂಚನೆ :** ಡಾ.ಸುಧಾಕರ್ ಹೇಳಿಕೆಯಿಂದ ಪರಿಸ್ಥಿತಿ ಕೈಮೀರಿ ಹೋಗುತ್ತಿರುವುದನ್ನು ಗಮನಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬುದ್ಧಿವಾದ ಹೇಳಿ, ಯಾವುದೇ ಹೇಳಿಕೆ ನೀಡುವ ಮುನ್ನ ವಿಚಾರ ಮಾಡಿ, ಈಗ ನೀಡಿರುವ ಹೇಳಿಕೆಯನ್ನು ಹಿಂದಕ್ಕೆ ಪಡೆಯಿರಿ ಎಂದು ಆದೇಶಿಸಿದರು.

ನಂತರ ತಮ್ಮ ಹೇಳಿಕೆ ಬಗ್ಗೆ ಟ್ವೀಟ್ ಮಾಡಿರುವ ಡಾ. ಸುಧಾಕರ್, ನನ್ನ ಹೇಳಿಕೆಯನ್ನು ಅರ್ಥ ಮಾಡಿಕೊಳ್ಳಬೇಕಿರುವ ಮಹಾನ್ ನಾಯಕರುಗಳು ಅರ್ಥ ಮಾಡಿಕೊಂಡರೆ ಸಾಕು, ಇಡೀ ರಾಜ್ಯದ ಜನರನ್ನು ತಪ್ಪು ದಾರಿಗೆ ಎಳೆದು, ರಾಜಕೀಯ ದ್ವೇಷ ಸಾಧಿಸಲು ಹೊರಟಿರುವ ಮಹಾ ನಾಯಕರ ಮುಖವಾಡ ಕಳಚುವ ಉದ್ದೇಶ ನನ್ನ ಹೇಳಿಕೆ ಹಿಂದೆ ಇತ್ತು ಅಷ್ಟೆ. ನಮ್ಮಗಳ ತೇಜೋವಧೆ ಮಾಡಲು ಹೊರಟವರ ಉದ್ದೇಶ ಈಡೇರಲ್ಲ ಎಂದಿದ್ದಾರೆ.

**ಹೇಳಿಕೆಗೆ ಆಕ್ರೋಶ :** ಡಾ. ಸುಧಾಕರ್ ಎಲ್ಲ ಶಾಸಕರ ಕುರಿತು ಹೇಳಿಕೆ ನೀಡುತ್ತಿದ್ದಂತೆ, ಇಡೀ ರಾಜಕೀಯ ವಲಯ ಸಿಡಿಮಿಡಿಗೊಂಡಿದ್ದು ಆಡಳಿತ ಪಕ್ಷದ ಸಚಿವರೂ ಅಸಮಾಧಾನಗೊಂಡಿದ್ದರು.

ಡಾ. ಸುಧಾಕರ್ ಹೇಳಿಕೆ ಗಮನಿಸಿದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅವರ ಸಂಪುಟ ಸಹೋದ್ಯೋಗಿಗಳು, ಪ್ರತಿಪಕ್ಷದಲ್ಲಿರುವ ಹೆಚ್.ಕೆ. ಪಾಟೀಲ್, ಹೆಚ್.ಡಿ. ರೇವಣ್ಣ ಸೇರಿದಂತೆ ವಿಧಾನಸಭೆಯ ಎಲ್ಲಾ ಸದಸ್ಯರು ತನಿಖೆಗೆ ಒಳಪಡಬೇಕಾಗುತ್ತದೆ.

ಇಂತಹ ಹೇಳಿಕೆಯಿಂದ ಸರ್ಕಾರ ಮತ್ತು ಪಕ್ಷ ಮುಜುಗರಕ್ಕೆ ಒಳಗಾಗುತ್ತದೆ, ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗುವುದು ಸರಿಯಲ್ಲ, ಇದರಿಂದ ಸಮಾಜಕ್ಕೆ ಕೆಟ್ಟ ಸಂದೇಶ ನೀಡಿದಂತಾಗುತ್ತದೆ ಎಂದು ಹಲವು ಸದಸ್ಯರು ಡಾ.ಸುಧಾಕರ್ ವಿರುದ್ಧ ತಿರುಗಿಬಿದ್ದರು.

ಈ ನಡುವೆ, ಸಚಿವರ ಹೇಳಿಕೆ ಪಕ್ಷಾತೀತವಾಗಿ ಟೀಕೆಗೆ ಒಳಪಟ್ಟು ವಿಧಾನಸಭೆಯಲ್ಲೂ ಚರ್ಚೆಗೆ ಗ್ರಾಸವಾಗಿ ಸರ್ಕಾರವನ್ನೇ ಇಕ್ಕಟ್ಟಿಗೆ ಸಿಲುಕಿಸುವ ಪರಿಸ್ಥಿತಿ ನಿರ್ಮಾಣವಾಯಿತು.

**ಒಬ್ಬಳೇ ಹೆಂಡತಿ ಎಂದ ಡಿಕೆಶಿ :** ಡಾ.ಸುಧಾಕರ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ನನಗೆ ಒಬ್ಬಳೇ ಹೆಂಡತಿ, ಒಂದೇ ಸಂಸಾರ ಎಂದಿದ್ದಾರೆ.

ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಸುದ್ದಿಗಾರರೊಂದಿಗೆ ಮಾತನಾಡಿ, ಹೆಣ್ಣಿನ ವಿಷಯದಲ್ಲಿ ನಾನೂ ಸೇರಿದಂತೆ ಯಾರೂ ಹರಿಶ್ಚಂದ್ರರಲ್ಲ, ಆದರೆ ನೀವು ಮಾಡಿಕೊಂಡಿರುವ ರಾಡಿಗೆ ನಮ್ಮನ್ನು ಏಕೆ ಎಳೆಯುತ್ತೀರಿ. ಹಿಂದೆ ಮಾಡಿದ ತಪ್ಪನ್ನು ನಾನು ವಿಧಾನಸಭೆಯಲ್ಲೇ ಒಪ್ಪಿಕೊಂಡಿದ್ದೇನೆ, ನೀವು (ಡಾ.ಸುಧಾಕರ್) ತಪ್ಪು ಮಾಡಿಲ್ಲವೆಂದರೆ, ನ್ಯಾಯಾಲಯದಿಂದ ತಡೆಯಾಜ್ಞೆ ಯಾಕೆ ತಂದಿರಿ? ಎಂದು ಖಾರವಾಗಿ ಪ್ರಶ್ನಿಸಿದರು.

ಬಿಜೆಪಿಯ ರಾಜೂಗೌಡ ಸೇರಿದಂತೆ ಹಲವು ಶಾಸಕರು ಪ್ರತಿಕ್ರಿಯಿಸಿ, ಬಾಯಿಗೆ ಬಂದಂತೆ ಮಾತನಾಡುವುದನ್ನು ಬಿಡಬೇಕು ಮತ್ತು ನೀಡಿರುವ ಹೇಳಿಕೆಯನ್ನು ಹಿಂತೆಗೆದುಕೊಳ್ಳಬೇಕು ಎಂದಿದ್ದರು. ಜೆಡಿಎಸ್‌ನ ಶಿವಲಿಂಗೇಗೌಡ, ಬಾಯಿಗೆ ಬಂದಂತೆ ಮಾತನಾಡ ಬೇಡಿ, ಇದು ನಿಮ್ಮ ವೃತ್ತಿಗೆ ಘನತೆ ತರುವುದಿಲ್ಲ ಎಂದಿದ್ದರು.

## ದೊಡ್ಡಬಾತಿ : ರೇವಣಸಿದ್ದೇಶ್ವರ ಮಹಾರಥೋತ್ಸವದಲ್ಲಿ ಇಂದು



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದಲ್ಲಿ ದಿನಾಂಕ 27 ರ ಶನಿವಾರ ನಡೆಯಲಿರುವ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ಇಂದು ಬಣಕಾರ ಮನೆತನದವರಿಂದ ಶ್ರೀ ಸ್ವಾಮಿಗೆ ಅರಿಶಿಣ ಎಣ್ಣೆ ಮತ್ತು ಉಚ್ಚಯ ಕಾರ್ಯವು ನಡೆಯುವುದು.

## ಛಲ ಬೆಳೆಸಿಕೊಳ್ಳಿ : ಡಿಸಿ ಬೀಳಗಿ

**(1ನೇ ಪುಟದಿಂದ)** ಹೀಗಾಗಿ ಕಲಿಕಾ ಮಟ್ಟದಲ್ಲಿ ಸಾಮರ್ಥ್ಯ ಕಡಿಮೆ ಇರುವವರು ಕೀಳರಿಮೆ ಹೊಂದಬಾರದು. ಜೀವನವನ್ನು ಯಾರೊಂದಿಗೂ ಹೋಲಿಕೆ ಮಾಡಿಕೊಳ್ಳಬಾರದು ಎಂದು ಕಿವಿ ಮಾತು ಹೇಳಿದರು.

ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ ಮಾತನಾಡುತ್ತಾ, 'ಕನಸು ಬಿತ್ತುವ ಕೆಲಸ-ರಾಷ್ಟ್ರ ಕಟ್ಟುವ ಕೆಲಸ' ಕಾರ್ಯಕ್ರಮ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಕನಸಿನ ಕೂಸು. ಇಂತಹ ಕಾರ್ಯಕ್ರಮ ರಾಜ್ಯದ ಯಾವುದೇ ಜಿಲ್ಲೆಯಲ್ಲಿಯೂ ನಡೆದಿಲ್ಲ ಎಂದರು.

ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ, ತಮ್ಮ ವಿದ್ಯಾರ್ಥಿ ಜೀವನವನ್ನು ಸ್ಮರಿಸಿ, 15 ರಿಂದ 18 ರ ವಯಸ್ಸು ಮಕ್ಕಳಲ್ಲಿ ಕನಸನ್ನು ಬಿತ್ತಲು ಒಳ್ಳೆಯ ಸಮಯ. ಈ ಸಮಯದಲ್ಲಿ ಕನಸನ್ನು ಯಶಸ್ವಿಯಾಗಿ ಬಿತ್ತಿದಲ್ಲಿ ಮುಂದೆ ಒಳ್ಳೆಯ ಬೆಳೆ ಬೆಳೆಯಬಹುದು ಎಂದರು.

ತಹಶೀಲ್ದಾರ್ ಬಸನಗೌಡ ಕೋಟೂರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ತಮಗೆ ಆಗ ಗುರುಗಳಾಗಿದ್ದರು, ಅವರು ತಮ್ಮ ಜೀವನದಲ್ಲಿ ಹಚ್ಚಿಸಿದ ಆಸೆಯ ಕಿಚ್ಚು, ತಾವು ತಹಶೀಲ್ದಾರ್ ಹುದ್ದೆಗೇರಲು ಸಹಕಾರಿಯಾಯಿತು ಎಂದರು.

ವೈದ್ಯಾಧಿಕಾರಿ ಡಾ. ಮಲ್ಲಪ್ಪ, ಮಕ್ಕಳ ಜೀವನದಲ್ಲಿ ಶಿಕ್ಷಕರ ಪಾತ್ರ ಬಹು ಮುಖ್ಯ, ಅವರು ಜೀವನದಲ್ಲಿ ಪ್ರತಿ ಹಂತದಲ್ಲೂ ಮಕ್ಕಳ ಮೇಲೆ ಪ್ರಭಾವ ಬೀರುತ್ತಾರೆ ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯಕುಮಾರ್, ಗ್ರಾ.ಪಂ. ಅಧ್ಯಕ್ಷೆ ಪ್ರೇಮಮ್ಮ, ಉಪಾಧ್ಯಕ್ಷ ರವಿಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ಕುಬೇರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ರಾಜು, ಆಹಾರ ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ, ನ್ಯಾಮತಿ ತಹಶೀಲ್ದಾರ್ ತನುಜಾ ಮುಂತಾದವರು ಉಪಸ್ಥಿತರಿದ್ದರು.

## ಉಪಚುನಾವಣೆ : ಎಡಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿ ಬಳಕೆ

ದಾವಣಗೆರೆ, ಮಾ.24 - ಇದೇ ದಿನಾಂಕ 29 ರಂದು ನಡೆಯುತ್ತಿರುವ ಪಾಲಿಕೆ ಉಪ ಚುನಾವಣೆ ಮತ್ತು ಅವಧಿ ಪೂರ್ಣಗೊಂಡ/ ತೆರವಾದ ಸ್ಥಾನಗಳಿಗೆ ನಡೆಯುತ್ತಿರುವ ಗ್ರಾ.ಪಂ ಚುನಾವಣೆಯಲ್ಲಿ ಮತದಾರರ 'ಎಡಗೈ ತೋರು ಬೆರಳಿಗೆ' ಅಳಿಸಲಾಗದ ಶಾಯಿಯನ್ನು ಹಾಕುವಂತೆ ರಾಜ್ಯ ಚುನಾವಣಾ ಆಯೋಗ ನಿರ್ದೇಶನ ನೀಡಿದೆ.

ಮಹಾನಗರಪಾಲಿಕೆ ವಾರ್ಡ್ ನಂ.20 ಮತ್ತು 22 ರ ಉಪಚುನಾವಣೆ ಹಾಗೂ 2021 ರ ಮೇ ಮಾಹೆಯವರೆಗೆ ಅವಧಿ ಮುಕ್ತಾಯವಾಗುತ್ತಿರುವ ದಾವಣಗೆರೆ ತಾಲ್ಲೂಕಿನ 37-ಬೇತೂರು, 40-ಕನಗೊಂಡನಹಳ್ಳಿ ಮತ್ತು 41-ಕುಕ್ಕುವಾಡ ಗ್ರಾಮ ಪಂಚಾಯಿತಿಗಳ ಚುನಾವಣೆ ಹಾಗೂ ವಿವಿಧ ಕಾರಣಗಳಿಂದ ಹೊನ್ನಾಳಿ ತಾಲ್ಲೂಕಿನ 7-ಅರಬಗಟ್ಟೆ ಗ್ರಾಮ ಪಂಚಾಯಿತಿಯ 3-ಸುಂಕದಕಟ್ಟೆ ಕ್ಷೇತ್ರದ ಉಪ ಚುನಾವಣೆ-2021 ರ ಸಂಬಂಧ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿದ್ದು, ಮಾರ್ಚ್ 29 ರಂದು ಮತದಾನ ನಡೆಯಲಿದೆ. ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆ/ಉಪ ಚುನಾವಣೆಯಲ್ಲಿ ಮತದಾರರ ಎಡಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕುವಂತೆ ಚುನಾವಣಾ ಆಯೋಗ ನಿರ್ದೇಶಿಸಿದೆ ಎಂದು ಎಡಿಸಿ ಪೂಜಾರ ವೀರಮಲ್ಲಪ್ಪ ತಿಳಿಸಿದ್ದಾರೆ.

## ಇಂದು 'ಚಿನ್ನದ ಗೊಂಬೆ' ನಾಟಕ ಪ್ರದರ್ಶನ

ಶ್ರೀ ಕಲಾವಿಕಾಸ ನಾಟಕ ಸಂಘ (ಎಸ್.ಟಿ) ದಾವಣಗೆರೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಶ್ರೀ ಬೋಳಚೆಟ್ಟಿ ಚೌಡೇಶ್ವರಿ ದೇವಿ ಜಾತ್ರೆಯ ಅಂಗವಾಗಿ ನಗರದ ಶಿವಾಜಿ ವೃತ್ತದಲ್ಲಿ 'ನಾಟಕೋತ್ಸವ' ಮತ್ತು 'ರಂಗಗೀತೆಗಳ' ಉದ್ಘಾಟನೆ ನಡೆಯಲಿದೆ.

ಸಂಜೆ 5.30 ಕ್ಕೆ ನೇತ್ರಾ, ಕೆ.ಪಿ. ಮಂಜುಳ, ಎಸ್. ಪ್ರೇಮ ಸಂಗಡಿಗರು ರಂಗಗೀತೆಗಳನ್ನು ಹಾಡಲಿದ್ದು, 6.30 ಕ್ಕೆ ನಡೆಯಲಿರುವ ಕಾರ್ಯಕ್ರಮವನ್ನು ಪಿಎಸ್ಐ ಟಿ.ಆರ್. ಕೃಷ್ಣಪ್ಪ ಉದ್ಘಾಟಿಸಲಿದ್ದು, ಬಸವಪ್ರಭು ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ. ದೇವಸ್ಥಾನದ ಅಧ್ಯಕ್ಷ ಮಾಲತೇಶರಾವ್ ಜಾಧವ್ ಅಧ್ಯಕ್ಷತೆ ವಹಿಸಲಿದ್ದಾರೆ.

ಅತಿಥಿಗಳು : ಎಸ್.ಟಿ. ವೀರೇಶ್, ಹೆಚ್.ಕೆ. ರಾಮಚಂದ್ರಪ್ಪ, ರವಿಚಂದ್ರ, ಜೆ.ಡಿ. ಪ್ರಕಾಶ್, ಹೆಚ್.ಸಿ. ಜಯಮ್ಮ, ಎಲ್.ಡಿ. ಗೋಣೆಪ್ಪ, ಎ.ಭದ್ರಪ್ಪ, ತಿಪ್ಪೇಶ್‌ರಾವ್ ಚವ್ಹಾಣ್, ಗೋಪಾಲರಾವ್ ಮಾನೆ, ಹೆಚ್.ಎಸ್. ರಾಜು.

ಸನ್ಮಾನಿತರು : ಬಸವರಾಜ ಐರಣಿ, ಹನುಮಂತರಾವ್ ಪವಾರ್, ಸಿದ್ದನಮಠದ ಶ್ರೀ ವೀರಭದ್ರಯ್ಯ ಸ್ವಾಮಿ. ಸಂಜೆ 7.30 ಕ್ಕೆ 'ಚಿನ್ನದ ಗೊಂಬೆ' ನಾಟಕ ಪ್ರದರ್ಶನಗೊಳ್ಳಲಿದೆ.

## ಅರ್ಜಿ ಆಹ್ವಾನ

ದಾವಣಗೆರೆ, ಮಾ. 24- ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಉಚಿತ ಹೈನುಗಾರಿಕೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನಗರದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ಏಪ್ರಿಲ್ 5 ರಿಂದ ಮೇ 4ರವರೆಗೆ ಕೇಂದ್ರದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಅರ್ಜಿ ಸಲ್ಲಿಸುವ ಆಸಕ್ತರು ಕನಿಷ್ಠ 5 ನೇ ತರಗತಿ ಪಾಸಾಗಿರಬೇಕು. ವಯೋಮಿತಿ 18-40 ವರ್ಷ ಸೂಕ್ತವಾಗಿರುತ್ತದೆ. ಆಸಕ್ತರು ತಮ್ಮ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯ ಜತೆಗೆ ಮರುಪಾವತಿಸಲಾಗುವ ಮುಂಗಡ ಹಣ ರೂ. 500 ನೀಡಿ ಅರ್ಜಿಯನ್ನು ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಇದೇ ದಿನಾಂಕ 31ರೊಳಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಡಾ. ಜಿ.ಕೆ. ಜಯದೇವಪ್ಪ, ವಿಷಯ ತಜ್ಞರು (ಪಶು ವಿಜ್ಞಾನ), ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಇವರನ್ನು ಸಂಪರ್ಕಿಸಬಹುದಾಗಿದೆ. (ದೂರವಾಣಿ 9591426179, 9449856876).

## ಸಾರಿಗೆ ಇಲಾಖೆ ಅಧಿಕಾರಿಗಳಿಂದ ಲಾರಿ ಮಾಲೀಕರು, ಚಾಲಕರಿಗೆ ಕಿರುಕುಳ

ದಾವಣಗೆರೆ, ಮಾ.24-ಹದಿನೈದು ದಿನದೊಳಗೆ ಲಾರಿ ತಪಾಸಣೆ ನೆಪದಲ್ಲಿ ಸಾರಿಗೆ ಇಲಾಖೆ ಅಧಿಕಾರಿಗಳು ನಡೆಸುತ್ತಿರುವ ಸುಲಿಗೆ ನಿಲ್ಲಿಸದೇ ಇದ್ದಲ್ಲಿ ತಪಾಸಣೆ ನಡೆಸುವ ಸ್ಥಳಗಳಲ್ಲಿಯೇ ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾ ಲಾರಿ ಮಾಲೀಕರು ಮತ್ತು ಟ್ರಾನ್ಸ್‌ಪೋರ್ಟ್ ಏಜೆಂಟರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಇಂಧನ ಬೆಲೆ ಏರಿಕೆಯಿಂದ ಲಾರಿ ಮಾಲೀಕರು ಸಂಕಷ್ಟದಲ್ಲಿದ್ದಾರೆ. ಈ ನಡುವೆ ದಾಖಲೆಗಳಿದ್ದರೂ ಸಾರಿಗೆ ಅಧಿಕಾರಿಗಳು ವಿವಿಧ ನೆಪಗಳನ್ನು ಹೇಳಿ ಲಾರಿ ಮಾಲೀಕರು ಹಾಗೂ ಚಾಲಕರಿಗೆ ಹಣಕ್ಕಾಗಿ ಪೀಡಿಸಿ, ಕಿರುಕುಳು ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ನಿಪ್ಪಾಣಿಯ ಝುಳಕಿ, ಕೊಗೆನಾಲಿ ಚೆಕ್ ಪೋಸ್ಟ್‌ನಿಂದ ಅತ್ತಿಬೆಲೆವರೆಗೆ ರಾತ್ರಿ, ಹಗಲು ಎನ್ನದೆ ಅಧಿಕಾರಿಗಳು ಲಾರಿಗಳನ್ನು ತಡೆಯುತ್ತಿದ್ದಾರೆ. ರಾಜ್ಯದ ಗಡಿಗಳಲ್ಲಿ ಲಂಚ ಕೊಟ್ಟ ನಂತರವೂ ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿ ರಹದಾರಿಗಳಲ್ಲಿ ಮತ್ತೆ ಲಂಚ ನೀಡಬೇಕಾಗುತ್ತದೆ ಎಂದರು.

ಎಸಿಬಿ ಅಧಿಕಾರಿಗಳು ಇದುವರೆಗೂ ಇಂತಹ ಪ್ರದೇಶಗಳ ಕಡೆ ಸುಳಿದಿಲ್ಲ ಎಂದ ಅವರು, ಮುಂದಿನ ದಿನಗಳಲ್ಲಿ ಅಧಿಕಾರಿಗಳ ಕಿರುಕುಳ ಕುರಿತು ಜಿಲ್ಲಾಧಿಕಾರಿಗಳ ಮೂಲಕ ಸಚಿವರು, ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು. ಮುಂದಿನ ಹದಿನೈದು ದಿನಗಳಲ್ಲಿ ಅಧಿಕಾರಿಗಳು ಹೆದ್ದಾರಿಗಳಲ್ಲಿ ಕಿರುಕುಳ ನೀಡುವುದನ್ನು ನಿಲ್ಲಿಸದಿದ್ದರೆ, ತಪಾಸಣೆ ಸ್ಥಳದಲ್ಲಿಯೇ ಪ್ರತಿಭಟನೆಗೆ ಮುಂದಾಗುವುದಾಗಿ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ, ದಾದಾಪೀರ್, ಭೀಮಣ್ಣ, ಮೊಹ್ಮದ್ ಅಲಿ ಉಪಸ್ಥಿತರಿದ್ದರು.

## ನಾಳೆ ಜಿಲ್ಲಾ ಅಂಗವಿಕಲರ ಅಭಿವೃದ್ದಿ ಕಾರ್ಯಕ್ರಮದ ಸಮಾರೋಪ

ದಾವಣಗೆರೆ, ಮಾ.24 - ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ)ಯ ಜಿಲ್ಲಾ ಅಂಗವಿಕಲರ ಅಭಿವೃದ್ಧಿ ಕಾರ್ಯಕ್ರಮದ ಮುಕ್ತಾಯ ಸಮಾರಂಭವು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಾಡಿದ್ದು ದಿನಾಂಕ 26 ರಂದು ಮಧ್ಯಾಹ್ನ 12 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಜರುಗಲಿದೆ.

ಕಳೆದ ಹತ್ತು ವರ್ಷಗಳಿಂದ ದಾವಣಗೆರೆ ಜಿಲ್ಲೆಯಲ್ಲಿ ಸುಮಾರು 10 ಸಾವಿರಕ್ಕೂ ಅಧಿಕ ವಿಕಲಚೇತನ ವ್ಯಕ್ತಿಗಳು ಹಾಗೂ ಮಕ್ಕಳ ಜೊತೆಯಲ್ಲಿ ನೇರವಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದು, ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸಲಾಗಿದೆ. ಈಗ ಮುಂದಿನ ಜಿಲ್ಲೆಯ ವಿಕಲಚೇತನರ ಬಗ್ಗೆ ಗಮನಹರಿಸುವ ಅಗತ್ಯವಿರುವುದರಿಂದ ಇಲ್ಲಿ ದಿನಾಂಕ 26 ರಂದು ಸಮಾರೋಪ ಸಮಾರಂಭ ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

### ಆವರಗೊಳ್ಳದ ಪೂಜಾರ್ ರುದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದ ವಾಸಿ ಗುಡಿಹಿಂದಲರ ಪೂಜಾರ್ ರುದ್ರಪ್ಪ (86) ಇವರು ದಿನಾಂಕ 24.03.2021 ರ ಬುಧವಾರ ಮಧ್ಯಾಹ್ನ 1.50 ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.03.2021ರ ಗುರುವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದಲ್ಲಿ ನೆರವೇರಲಿದೆ.

# ಖಾಲಿ ಜಾಗಗಳಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ

**(1ನೇ ಪುಟದಿಂದ)** ವೆಚ್ಚಕ್ಕಾಗಿ ಪಡೆಯುವ ಮಾರುಕಟ್ಟೆ ಸಾಲದ ಅವಲಂಬನೆ ಕಡಿಮೆ ಮಾಡಬಹುದು ಎಂದರು.

ಕಾಂಗ್ರೆಸ್ ಸದಸ್ಯರ ಧರಣಿ ನಡುವೆ, ಬಜೆಟ್ ಮೇಲಿನ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಮುಖ್ಯಮಂತ್ರಿ ಅವರು, 2021-22 ನೇ ಸಾಲಿನ ಆಯವ್ಯಯವು ಎಲ್ಲಾ ವರ್ಗದವರ ಹಿತ ಕಾಪಾಡುವುದರ ಜೊತೆಗೆ ಕೊರೊನಾ ಸಾಂಕ್ರಾಮಿಕದಿಂದ ಉಂಟಾಗಿರುವ ಆರ್ಥಿಕ ಹಿಂಜರಿಕೆಯನ್ನು ಕೋವಿಡ್ ಪೂರ್ವ ದಿನಗಳಲ್ಲಿದ್ದ ಬೆಳವಣಿಗೆ ಪಥಕ್ಕೆ ತರಲು ಸರ್ಕಾರದ ಅಭಿವೃದ್ಧಿಯ ಮುನ್ನೋಟವನ್ನು ಪ್ರಸ್ತುತ ಪಡಿಸಿದ್ದೇನೆ. ಆದಾಯ ಸಂಗ್ರಹಣೆ ಜೊತೆಗೆ ರಾಜ್ಯದ ಒಟ್ಟಾರೆ ಕ್ಷೇಮಾಭಿವೃದ್ಧಿಗೆ ಶ್ರಮಿಸಲಿದ್ದೇನೆ ಎಂದು ಭರವಸೆ ನೀಡಿದರು.

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಜನರಿಗೆ ಯಾವುದೇ ತೆರಿಗೆ, ಸರ್ಚಾರ್ಜ್, ಸೆಸ್ ವಿಧಿಸದೆ ಜನಪರವಾದ ಆಯವ್ಯಯ ಮಂಡನೆ ಮಾಡಲಾಗಿದೆ. ನಾವೇನು ಸಾಲ ಮಾಡಿ ತುಪ್ಪ ತಿಂದಿಲ್ಲ ಅಥವಾ ಮೋಜಿಗಾಗಿ, ಇಲ್ಲವೇ ಔತಣಕೂಟ ನಡೆಸಲು ಸಾಲ ಮಾಡಿಲ್ಲ. ಸಾಂಕ್ರಾಮಿಕ ರೋಗದಿಂದ ಜನರ ಜೀವ ರಕ್ಷಣೆ ಮಾಡುವುದು ಮತ್ತು ಪ್ರಕೃತಿ ವಿಕೋಪಗಳಿಂದ ಉಂಟಾಗಿದ್ದ ಸಂಕಷ್ಟಗಳಿಗೆ ಅಗತ್ಯ ಪರಿಹಾರ ಕೈಗೊಳ್ಳಲು ಸಾಲ ಮಾಡಿದ್ದೇವೆ ಎಂದು ಮುಖ್ಯಮಂತ್ರಿ ಸಮರ್ಥಿಸಿಕೊಂಡರು.

ಅನೇಕ ಸರ್ಕಾರಗಳು, ಎಲ್ಲವೂ ಚೆನ್ನಾಗಿದ್ದಾಗಲೇ ಸಾಲ ಮಾಡಿರುವ ಉದಾಹರಣೆಗಳಿವೆ.

ಕೇಂದ್ರ ಸರ್ಕಾರ 2021-22 ನೇ ಸಾಲಿಗೆ ರಾಜ್ಯಗಳಿಗೆ ಜಿಎಸ್‌ಡಿಪಿ ಶೇ. 4 ರವರೆಗೆ ಸಾಲ ಪಡೆಯಲು ಅನುಮತಿ ನೀಡಿದೆ. ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ 2002ಕ್ಕೆ ತಿದ್ದುಪಡಿ ತಂದು ಈ ಅವಕಾಶ ಬಳಸಿಕೊಂಡಿದ್ದೇವೆ, ಜೊತೆಗೆ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಕ್ರಮ ಕೈಗೊಂಡಿದ್ದೇವೆ ಎಂದರು.

ದಾಖಲೆಗಳಲ್ಲಿ ಎಲ್ಲ ವಿಚಾರಗಳನ್ನೂ ಬಹಿರಂಗಪಡಿಸಲಾಗಿದೆ, ಸಣ್ಣ ಲೋಪದೋಷವಿದ್ದರೂ ಸರಿಪಡಿಸಲಾಗುತ್ತದೆ ಎಂದು ಯಡಿಯೂರಪ್ಪ ಭರವಸೆ ನೀಡಿದರು.

ಪ್ರಸಕ್ತ ಸಾಲಿನಲ್ಲೂ ಕೋವಿಡ್ ಪರಿಣಾಮ ಬೀರುವ ಸಂಭವವಿದೆ, ಈ ವರ್ಷ 15,134 ಕೋಟಿ ರೂ. ರಾಜಸ್ವ ಕೊರತೆ ಉಂಟಾಗಲಿದೆ ಎಂಬ ಆತಂಕವನ್ನು ಮುಖ್ಯಮಂತ್ರಿ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಗೆ ಪ್ರಸಕ್ತ ವರ್ಷ ಕಡಿಮೆ ಅನುದಾನ ಇಟ್ಟಿದ್ದರೂ ಮುಂದಿನ ವರ್ಷ ಹೆಚ್ಚಿನ ಅನುದಾನ ಒದಗಿಸಲಾಗುವುದು ಎಂದರು.

## ರೈತರ ಹೋರಾಟಕ್ಕೆ ಶಾಂತನಗೌಡ ಬೆಂಬಲ



ಹೊನ್ನಾಳಿ, ಮಾ.24- ಶಿವಮೊಗ್ಗದ ಸೈನ್ಸ್ ಮೈದಾನದಲ್ಲಿ ರೈತ ಮಹಾ ಪಂಚಾಯತ್‌ನಲ್ಲಿ ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಭಾಗವಹಿಸಿ ರೈತರ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ.

# ಚಿತ್ರದುರ್ಗ : ಜಾನುವಾರು ಜಾತ್ರೆ



ಚಿತ್ರದುರ್ಗ, ಮಾ. 24- ನಗರಕ್ಕೆ ಸಮೀಪದ ಶಿಬಾರ ಗ್ರಾಮದಲ್ಲಿ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಹಾಗು ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಚಿತ್ರದುರ್ಗ ಇವರ ಸಹಯೋಗದಲ್ಲಿ ಜರುಗಿದ ಜಾನುವಾರು ಜಾತ್ರೆ ಕಾರ್ಯಕ್ರಮದಲ್ಲಿ ಡಾ. ಶಿವಮೂರ್ತಿ ಮುರುಘಾ ಶರಣರು ಭಾಗವಹಿಸಿದ್ದರು.

ಜಿ.ಪಂ. ಅಧ್ಯಕ್ಷೆ ಶ್ರೀಮತಿ ಶಶಿಕಲಾ ಸುರೇಶ್‌ಬಾಬು, ಗ್ರಾ.ಪಂ. ಸದಸ್ಯ ರಾಮಾಂಜನೇಯ, ಎಂ.ಕೆ.ಹಟ್ಟಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಬಿ. ಗೀತಾ, ಜಿ.ಪಂ. ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಅಧ್ಯಕ್ಷೆ ಶ್ರೀಮತಿ ಕೌಸಲ್ಯ ತಿಪ್ಪೇಸ್ವಾಮಿ, ತಾ.ಪಂ. ಸದಸ್ಯೆ ಶ್ರೀಮತಿ ರಾಧಮ್ಮ ಜಗದೀಶ್, ಪ್ರಕಾಶ್, ಡಾ. ಕೃಷ್ಣಪ್ಪ ಮತ್ತು ಡಾ. ಬಿ. ಪ್ರಸನ್ನಕುಮಾರ್ ಉಪಸ್ಥಿತರಿದ್ದರು.

## ಪ್ರಾಣಿ, ಪಕ್ಷಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ಮನವಿ



ದಾವಣಗೆರೆ, ಮಾ. 24- ಬೇಸಿಗೆ ಅವಧಿ ಮುಗಿಯುವ ವರೆಗೆ ಕೊಂಡಜ್ಜಿ ಅರಣ್ಯದ ಆಯ್ದ ಸ್ಥಳಗಳಲ್ಲಿ ನೀರು ಶೇಖರಣಾ ತೊಟ್ಟಿಗಳನ್ನು ಅಳವಡಿಸಿ ಟ್ಯಾಂಕರ್ ವ್ಯವಸ್ಥೆ ಮಾಡುವಂತೆ ಜನಸಾಮಾನ್ಯರ ಸೇವಾ ಸಂಸ್ಥೆ ಅಧ್ಯಕ್ಷ ಪ್ರಸನ್ನ ಬೆಳಕೇರಿ ದಾವಣಗೆರೆ ವಲಯ ಅರಣ್ಯಾಧಿಕಾರಿ ಸುರೇಶ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

# ಆರ್ಥಿಕತೆಯ ಕನಸು ಮತ್ತು ಖಾಲಿಯಾದ ಜೇಬು

ಭಾರತದ ಆರ್ಥಿಕ ವ್ಯವಸ್ಥೆ 2021ರಲ್ಲಿ ಶೇ.12ರ ಬೆಳವಣಿಗೆ ಕಾಣಲಿದೆ ಎಂದು ಮೂಡೀಸ್ ಅನಲಿಟಿಕ್ಸ್‌ನ ಇತ್ತೀಚಿನ ವರದಿ ತಿಳಿಸಿದೆ. ಆರ್ಥಿಕತೆ ಪುಟಿದೆದ್ದು, ಸರ್ಕಾರ ಇನ್ನಷ್ಟು ಸುಧಾರಣೆಗಳಿಗೆ ಮುಂದಾಗಲಿದೆ ಎಂದು ನೀತಿ ಆಯೋಗದ ಉಪಾಧ್ಯಕ್ಷ ಅರವಿಂದ ಪನಾಗರಿಯ ಹೇಳಿದ್ದಾರೆ, ಭಾರತದ ಆರ್ಥಿಕತೆಯ ಕೆಟ್ಟ ದಿನಗಳು ಮುಗಿದವು ಎಂದು ಆರ್.ಬಿ.ಐ. ಗವರ್ನರ್ ಶಕ್ತಿಕಾಂತ್ ದಾಸ್ ಹೇಳಿದ್ದಾರೆ... ಹೀಗೆ ಆರ್ಥಿಕತೆಯ ಕುರಿತು ಬಣ್ಣ ಬಣ್ಣದ ಮಾತುಗಳು ಕೇಳಿ ಬರುತ್ತಿವೆ.

ಆದರೆ, ಜನ ಸಾಮಾನ್ಯರು ಮಾತ್ರ ಪೆಟ್ರೋಲ್ ಬೆಲೆ, ನಿರುದ್ಯೋಗ, ಕೊರೊನಾ ಏರುಮುಖವಾಗಿರುವುದರಿಂದ ಉಂಟಾದ ಅನಿಶ್ಚಿತತೆ, ಮಕ್ಕಳ ಓದು ಎಲ್ಲಿ ಮತ್ತೆ ಬಂದ್ ಆಗುತ್ತದೋ ಎಂಬ ಕಳವಳದಲ್ಲಿ ಸಿಲುಕಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಸಾಲ ಮರುಪಾವತಿಗೆ ನೀಡಿದ ವಿನಾಯಿತಿಗಳು, ಗಡುವುಗಳು ಮುಗಿಯುತ್ತಿರುವಂತೆಯೇ ಉದ್ಯಮಿಗಳು ಒತ್ತಡಕ್ಕೆ ಸಿಲುಕಿದ್ದಾರೆ. ಸ್ವತಃ ಕೇಂದ್ರ ಸರ್ಕಾರವೇ ಎನ್.ಪಿ.ಎ. ಮಟ್ಟ ಹೆಚ್ಚಾಗುವ ಬಗ್ಗೆ ಹೇಳಿಕೆ ನೀಡಿದ್ದು, ಸಾಲಕ್ಕೆ ಸಂಬಂಧಿಸಿದಂತೆ ಹೊಸ ವ್ಯವಸ್ಥೆ ರೂಪಿಸಿಕೊಳ್ಳುತ್ತಿದೆ.

ಕೊರೊನಾ ಕಾಲದಲ್ಲಿ ಆನ್‌ಲೈನ್ ಶಿಕ್ಷಣದ ಕಾರಣದಿಂದಾಗಿ ಮೊಬೈಲ್ ಮತ್ತಿತರೆ





**ಆರ್ಥಿಕತೆಯ ಅಂಕಿ-ಅಂಶಗಳು ಚೇತರಿಕೆ ಕಂಡಿವೆಯಾದರೂ, ಜನ ಸಾಮಾನ್ಯರಿಗೆ ಇನ್ನೂ ಹಣದ ಹರಿವು ತಲುಪಿಲ್ಲ. ನಿರುದ್ಯೋಗ ಪ್ರಮಾಣ ಶೇ.6.9ಕ್ಕೆ ಏರಿಕೆಯಾಗಿದೆ. ಗ್ರಾಹಕರಲ್ಲಿ ಲಾಕ್‌ಡೌನ್ ಮುಂಚಿನ ಉತ್ಸಾಹ ಇನ್ನೂ ಮರಳಿಲ್ಲ.**

ಪರಿಕರಗಳ ಬಗ್ಗೆ ತಾತ್ಕಾಲಿಕ ಬೇಡಿಕೆ ಬಂದಿತ್ತು. ನಂತರದಲ್ಲಿ ಲಾಕ್‌ಡೌನ್ ಕಾಲದಲ್ಲಿ ಬಾಕಿ ಉಳಿದ ಕೆಲಸಗಳಿಗಾಗಿ, ಅನ್‌ಲಾಕ್ ಅವಧಿಯಲ್ಲಿ ಬೇಡಿಕೆ ಬಂತು. ಈಗ ಎಲ್ಲವೂ ಮುಗಿದು 'ಸಾಮಾನ್ಯ ಕಾಲ' ಬರುತ್ತಿದೆ. ಜನರ ಕೈಯಲ್ಲಿ ದುಡ್ಡಿಲ್ಲದ, ಸಣ್ಣಪುಟ್ಟ ಕಂಪನಿಗಳು ಹೂಡಿಕೆ ಮಾಡಲು ಹಿಂಜರಿಯುವ, ಅತ್ತ ಜಿಎಸ್‌ಟಿಗೆ ಹಣ ಹೊಂದಿಸಬೇಕೋ ಇತ್ತ ಸಾಲಕ್ಕೆ ಹಣ ಹೊಂದಿಸಬೇಕೋ ಎಂಬ ದುರ್ಭಿಕ್ಷ ಕಾಲವೇ ಈಗ ಸಾಮಾನ್ಯ ಎನ್ನುವಂತಾಗಿದೆ.

ಕೇಂದ್ರ ಸರ್ಕಾರ ತೈಲ ಬೆಲೆ ಏರಿಸಿರುವುದು, ಅದರಲ್ಲೂ ಡೀಸೆಲ್ ಬೆಲೆ ಏರಿಸಿರುವುದು ಹಣದುಬ್ಬರದ ಆಘಾತ ತಂದಿದೆ. ಅಲ್ಪಾವಧಿಯಲ್ಲಿ ಬೆಳವಣಿಗೆಗೆ ಇದು ಹೊಸ ಸವಾಲಾಗಿದೆ. ಈಗಾಗಲೇ ತತ್ತರಿಸಿರುವ ಸಣ್ಣ ಉದ್ಯಮಿಗಳಿಗೆ ಡೀಸೆಲ್ ಬೆಲೆ ಏರಿಕೆ ಹೊರುವ ಸಾಮರ್ಥ್ಯವಿಲ್ಲ. ತೈಲ ಬೆಲೆ ಏರಿಕೆ ಹೀಗೆಯೇ ಮುಂದುವರೆದರೆ ಬೆಳವಣಿಗೆಯ ಮೇಲೆ ಪರಿಣಾಮವಾಗುವ ದಿನಗಳು ದೂರವಿಲ್ಲ.

ಮತ್ತೆ ಭುಗಿಲೆದ್ದಿರುವ ಕೊರೊನಾ ಪ್ರಕರಣಗಳು ಕಳವಳಕ್ಕೆ ಕಾರಣವಾಗಿವೆ. 40 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಮತ್ತೆ ಕಂಡು ಬರುತ್ತಿರುವುದರಿಂದ ಎರಡನೇ ಅಲೆಯ ಆತಂಕವಿದೆ. ಕಠಿಣ ಲಾಕ್‌ಡೌನ್ ಹೇರಿದರೆ ಇರುವ ಒಂದಿಷ್ಟು ಸಣ್ಣ ಉದ್ಯಮಗಳು ನೆಲ ಕಚ್ಚುವ ಅಪಾಯ ಇದೆ.

ಆರ್ಥಿಕತೆಯ ಅಂಕಿ-ಅಂಶಗಳು ಚೇತರಿಕೆ ಕಂಡಿವೆ ಯಾದರೂ, ಜನ ಸಾಮಾನ್ಯರಿಗೆ ಇನ್ನೂ ಹಣದ ಹರಿವು ತಲುಪಿಲ್ಲ. ಮುಂಬೈನ ಸಿ.ಎಂ.ಐ.ಇ. ಚಿಂತನಾ ಚಾವಡಿ ಪ್ರಕಾರ ಫೆಬ್ರವರಿ 2021ರಲ್ಲಿ ನಿರುದ್ಯೋಗ ಪ್ರಮಾಣ ಶೇ.6.9ಕ್ಕೆ ಏರಿಕೆಯಾಗಿದೆ. ಇದೇ ಅಧ್ಯಯನದ ಪ್ರಕಾರ ಗ್ರಾಹಕರಲ್ಲಿ ಲಾಕ್‌ಡೌನ್ ಮುಂಚಿನ ಉತ್ಸಾಹ ಇನ್ನೂ ಮರಳಿಲ್ಲ. ಹೀಗಾಗಿ ಜನರು ಹಣ ವೆಚ್ಚ ಮಾಡಲು ಹೆಚ್ಚು ಉತ್ಸಾಹ ತೋರುತ್ತಿಲ್ಲ. ಇದು ಉತ್ಪನ್ನಗಳ ಬೇಡಿಕೆಯ ಮೇಲೆ ಪರಿಣಾಮ ಬೀರುತ್ತಿದೆ.

ಐ.ಸಿ.ಆರ್.ಎ.ದ ಪ್ರಧಾನ ಆರ್ಥಿಕ ಪರಿಣಿತ ಅದಿತಿ ನಾಯರ್ ಅವರು, ಆರ್ಥಿಕತೆಯ 15 ಮಾನದಂಡಗಳ ಪೈಕಿ ಒಂಭತ್ತರಲ್ಲಿ ಹಿಂಜರಿಕೆ ಇದೆ ಎಂದು ತಿಳಿಸಿದ್ದಾರೆ. ತೈಲೇತರ ಉತ್ಪನ್ನಗಳ ರಫ್ತು, ವಿದ್ಯುತ್ ಉತ್ಪಾದನೆ, ರೈಲ್ವೆ ಸರಕು ಸಾಗಣೆ, ಸ್ಕೂಟರ್ ಉತ್ಪಾದನೆ, ಡೀಸೆಲ್ ಬಳಕೆ ಹಾಗೂ ದೇಶೀಯ ವಿಮಾನಯಾನ ಏರಿಕೆಯಾಗಿದೆ.

ಆದರೆ, ಪ್ರಯಾಣಿಕರ ವಾಹನಗಳ ಉತ್ಪಾದನೆ, ಮೋಟರ್ ಸೈಕಲ್‌ಗಳ ಉತ್ಪಾದನೆ, ವಾಹನಗಳ ನೋಂದಣಿ, ಪೆಟ್ರೋಲ್ ಬಳಕೆ, ಬಂದರಿನಲ್ಲಿ ಸರಕು ಸಾಗಣೆ, ಜಿಎಸ್‌ಟಿ ಇ-ವೇಗಳ ಬಿಲ್, ಬ್ಯಾಂಕ್ ಸಾಲ ಹಾಗೂ ಠೇವಣಿಗಳು ಇಳಿಕೆಯಾಗಿವೆ.

ಆರ್ಥಿಕತೆ 2021-22ರ ಸಾಲಿನಲ್ಲಿ ಶೇ.10ಕ್ಕಿಂತ ಹೆಚ್ಚಿನ ಬೆಳವಣಿಗೆ ಕಾಣಲಿದೆ ಎಂದು ಹಲವಾರು ಸಂಸ್ಥೆಗಳು ಹೇಳುತ್ತಿವೆ. ಆದರೆ, ಜನ ಸಾಮಾನ್ಯರ ಜೇಬಿಗೆ ಹಣ ಬರುವವರೆಗೆ, ಉದ್ಯೋಗ ಸಿಗುವವರೆಗೆ, ನೆಮ್ಮದಿ ಸಿಗುವವರೆಗೆ ಇಂತಹ ಅಂಕಿ-ಅಂಶಗಳು ಕನ್ನಡಿಯೊಳಗಿನ ಗಂಟು ಮಾತ್ರ ಆಗಿರುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.

**- ಅಸ್ಮಿತ ಶೆಟ್ಟರ್**, ದಾವಣಗೆರೆ

### ಕೊರೊನಾ ಅಲೆ ವಿರುದ್ಧ ಹೋರಾಟದ ಅಸ್ತ್ರ

# ದೋ ಘುಜ್ ಕೇ ದೂರಿ, ಮಾಸ್ಕ್ ಜರೂರಿ

**ಬಿ. ಸಿಕಂದರ್**

ದಾವಣಗೆರೆ, ಮಾ.24- ಕೊರೊನಾ ವೈರಸ್, ಅಲೆಗಳ ವಿರುದ್ಧ ಹೋರಾಟಕ್ಕೆ ಬಳಸಬೇಕಾದ ಅಸ್ತ್ರ ಎಂದರೆ 'ದೋ ಘುಜ್ ಕೇ ದೂರಿ, ಮಾಸ್ಕ್ ಜರೂರಿ' ಸಾಮಾಜಿಕ ಅಂತರದ ಜೊತೆಗೆ ಮುಖಗವಚ (ಮಾಸ್ಕ್) ಬಹಳ ಅವಶ್ಯ ಎಂದು ದೇಶದ ಪ್ರಧಾನಿ ನರೇಂದ್ರ ಮೋದಿ ನೀಡಿದ ಸಂದೇಶವಿದು.

ಕಳೆದ ವರ್ಷದ ಈ ದಿನಗಳನ್ನು ಸ್ಮರಿಸಿಕೊಂಡರೆ ನಿಜಕ್ಕೂ ಮೈಯ್ಯಲ್ಲಿ ರೋಮಾಂಚನ ಸಂಚಯವಾಗುತ್ತಿದ್ದಂತೆ ಪೊಲೀಸ್ ಇಲಾಖೆಯ ವಾಹನಗಳು, ಗಸ್ತು ಧ್ವನಿವರ್ಧಕದಲ್ಲಿ ಎಚ್ಚರಿಕೆಯ ಗಂಟೆ ಕೊರೊನಾ ವೈರಸ್‌ನಿಂದ ದೂರ ಉಳಿಯಲು ಸಲಹೆ, ಸೂಚನೆ ಇವೆಲ್ಲದರ ನಡುವೆ ಆತಂಕದ ಕ್ಷಣಗಳನ್ನು ಕಳೆಯುತ್ತಿದ್ದ ದಿನಗಳು ಇತಿಹಾಸವನ್ನೇ ಬರೆದಿವೆ.

ದೇಶದ ಪ್ರಧಾನಿಯವರು ಪ್ರಜೆಗಳ ಪ್ರಾಣ ರಕ್ಷಣೆಗಾಗಿ 'ಮನ್ ಕೀ ಬಾತ್' ಕಾರ್ಯಕ್ರಮದಲ್ಲಿ ಆಗಾಗ ಈ ಸಂದೇಶ ನೀಡುತ್ತಲೇ ಇದ್ದರೂ ಸಹ ಕ್ಯಾರೆ ಎನ್ನದೆ ನಾವುಗಳು ನಮ್ಮದೇ ಚಟುವಟಿಕೆಯಲ್ಲಿ



ತೊಡಗಿಕೊಂಡಿರುವ ಪ್ರಸಂಗಗಳನ್ನು ವೀಕ್ಷಿಸಿದರೆ, ನಿಜಕ್ಕೂ ಇನ್ನೂ ನೂರು ವರ್ಷವಾದರೂ ಈ ವೈರಸ್ ತೊಲಗಲ್ಲ ಎಂಬ ಯಕ್ಷ ಪ್ರಶ್ನೆ ನಮ್ಮಲ್ಲಿ ಕಾಡತೊಡಗಿದೆ. ದೇಶ ಇನ್ನೂ ಗಂಡಾಂತರ ಎದುರಿಸುತ್ತಲೇ ಇದೆ. ಆದರೆ ನಾವುಗಳು ನಮ್ಮ ಮೋಜು, ಮಸ್ತಿಯಲ್ಲಿ ತಲ್ಲೀನರಾಗಿದ್ದೇವೆ. ಆದರೆ ಇಂತಹ ಘಟನೆಗಳು ನಮಗೆ ದುರದೃಷ್ಟ ಎಂದರೆ ತಪ್ಪಾಗಲಾರದು.

ಲಾಕ್‌ಡೌನ್ ಎಂದಾಕ್ಷಣವೇ ಜನರಲ್ಲಿ ಆತಂಕ ಮನೆ ಮಾಡಿರುವ ಇಂದಿನ ದಿನಗಳಲ್ಲಿ, ಒಂದೆಡೆ ಭಯವಿಲ್ಲದೆ, ಸಾಮಾಜಿಕ ಅಂತರ ಕಾಪಾಡಿಕೊಳ್ಳದೆ, ಮುಖಕ್ಕೆ ಮಾಸ್ಕ್ ಇಲ್ಲದೆ ಜನಸಂದಣಿಯಲ್ಲಿ 'ಜನ ಮರಳೋ ಜಾತ್ರೆ ಮರುಳೋ ಶಂಭುಲಿಂಗ' ಎಂಬಂತೆ ಸರ್ಕಾರಿ ಬಸ್, ಖಾಸಗಿ ಬಸ್‌ಗಳಲ್ಲಿ ನೂರಾರು ಪ್ರಯಾಣಿಕರು ತಮ್ಮ ಗುರಿ ತಲುಪಲು ಪಡುವ ಹರಸಾಹಸದ ದೃಶ್ಯಗಳು ದೇಶದ ಮೂಲೆ ಮೂಲೆಗಳಲ್ಲಿ ನಡೆಯುತ್ತಿರುವ ವರದಿಗಳು ದಿನಂಪ್ರತಿ ದೃಶ್ಯ ಮಾಧ್ಯಮಗಳಲ್ಲಿ ಸಾಮಾನ್ಯವಾಗಿವೆ. ಆದರೂ ಇದರಿಂದ ಎಚ್ಚರಿಕೆಗೊಳ್ಳದ ಜನ ಕೊರೊನಾ ಅಲೆಗೆ ಆಹ್ವಾನ ನೀಡಿದಂತಾಗಿದೆ.

ಈಗಾಗಲೇ ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಆಯಾ ರಾಜ್ಯಗಳಿಗೆ ತಲುಪಿದರೂ ಸಹ ಕಾರ್ಯರೂಪಕ್ಕೆ ಬಾರದಿರುವುದು ಮತ್ತೊಂದು ಗಂಡಾಂತರ ಎದುರಿಸಲು ನಾವುಗಳು ಸನ್ನದ್ಧರಾಗಬೇಕೆಂಬ ಭಯ ಸಾರ್ವಜನಿಕರಲ್ಲಿ ಕಾಡತೊಡಗಿದೆ. ಕಳೆದ ವರ್ಷದ ಈ ದಿನಗಳನ್ನು ಸ್ಮರಿಸುತ್ತಲೇ ದಿನ ಕಳೆಯುತ್ತಿರುವ ಜನತೆ, ನಮ್ಮ ಜೀವನದಲ್ಲಿ ಎಂದಿಗೂ ಸಹ ಇಂತಹ ದಿನಗಳು ಮತ್ತೆ ಬಾರದಿರಲಿ ಎಂದು ದೇವರಲ್ಲಿ ಬೇಡಿಕೊಂಡವರ ಸಂಖ್ಯೆಯೇನೂ ಕಡಿಮೆ ಇಲ್ಲ. ಆದರೆ, ಇಂದಿನ ನಮ್ಮ ಜೀವನದ ಶೈಲಿ, ಬೇಜವಾಬ್ದಾರಿತನ, ಪ್ರಾಣ ರಕ್ಷಣೆಯ ಹಂಗು ತೊರೆದು ಸಾಗುತ್ತಿರುವ ಯುವ ಪೀಳಿಗೆಯ ವರ್ತನೆ ಹಿರಿಯ ನಾಗರಿಕರಿಗೆ ಅಸಮಾಧಾನ ತಂದಿದೆ.

## ಪ್ರೇಮಲತಾಗೆ ಪಿಹೆಚ್‌ಡಿ



ದಾವಣಗೆರೆ, ಮಾ.24- ಶ್ರೀಮತಿ ಎಸ್.ಜೆ. ಪ್ರೇಮಲತಾ ಸಲ್ಲಿಸಿರುವ ಮಹಾಪ್ರಬಂಧಕ್ಕೆ ದಾವಣಗೆರೆ ವಿಶ್ವವಿದ್ಯಾನಿಲಯ ಪಿಹೆಚ್‌ಡಿ ಪದವಿ ನೀಡಿ ಗೌರವಿಸಿದೆ.

ಪ್ರೇಮಲತಾ, ದಾವಣಗೆರೆ ವಿವಿ ಬಯೋ ಕೆಮೆಸ್ಟ್ರಿ ವಿಭಾಗದ ಪ್ರೊಫೆಸರ್ ಡಾ. ಗೋಪಾಲ್ ಎಂ. ಅದ್ವಿರಾಯ್ ಅವರ ಮಾರ್ಗದರ್ಶನದಲ್ಲಿ "ಬಯೋಪ್ರಾಸ್ಪೆಕ್ಟಿಂಗ್ ಫಾರ್ ಆ್ಯಂಟಿಕ್ಯಾನ್ಸರ್ ಏಜೆಂಟ್ಸ್ ಫ್ರಮ್ ಮೆಡಿಸಿನಲ್ ಪ್ಲಾಂಟ್ಸ್ ಅಂಡ್ ಅಸೋಸಿಯೇಟೆಡ್ ಎಂಡೋಫಿಟಿಕ್ ಫಂಗಲ್" ವಿಷಯ ಕುರಿತು ಪ್ರಬಂಧ ಸಲ್ಲಿಸಿದ್ದು, ಪಿಹೆಚ್‌ಡಿ ಪದವಿಗೆ ಪಾತ್ರವಾಗಿದೆ.

## ಬಸವನಾಳ್ ಗೊಲ್ಲರಹಟ್ಟಿ : 26ಕ್ಕೆ ಜಾತ್ರೆ

ದಾವಣಗೆರೆ, ಮಾ. 24 - ತಾಲ್ಲೂಕಿನ ಬಸವನಾಳ್ ಗೊಲ್ಲರಹಟ್ಟಿ ಗ್ರಾಮದಲ್ಲಿ ನಾಡಿದ್ದು ದಿನಾಂಕ 26, 27 ರಂದು ಚೌಡೇಶ್ವರಿ ದೇವಿಯ ಜಾತ್ರೆ ನಡೆಯಲಿದೆ.

26 ರಂದು ಸಂಜೆ 4 ರಿಂದ 5 ರವರೆಗೆ ಶ್ರೀ ಪಾರ್ಥಲಿಂಗೇಶ್ವರ ಸ್ವಾಮಿ ಮತ್ತು ಶ್ರೀ ಚೌಡೇಶ್ವರಿ ದೇವಿಗೆ ಹೊಳೆಯಲ್ಲಿ ಗಂಗಾ ಪೂಜೆ ನಡೆಯಲಿದೆ.

# ವ್ಯಾಯಾಮದಿಂದ ದೇಹಸ್ಥಿತಿ ಸುಧಾರಣೆ

### ಹರಿಹರ : ವಿಶ್ವ ಕ್ಷಯ ರೋಗ ದಿನಾಚರಣೆಯಲ್ಲಿ ಡಾ.ಚಂದ್ರಮೋಹನ್

ಹರಿಹರ, ಮಾ.24- ದಿನನಿತ್ಯ ಯೋಗ ಮತ್ತು ವ್ಯಾಯಾಮ ಮಾಡುವ ಮೂಲಕ ದೇಹಸ್ಥಿತಿ ಸುಧಾರಿಸುತ್ತದೆ. ಮನಸ್ಸು ಉತ್ತಮಗೊಳ್ಳುತ್ತದೆ. ನಿರಂತರ ಪಾಲನೆಯಿಂದ ಕ್ಷಯ ಮುಕ್ತ ಸದೃಢ ಸಮಾಜ ನಿರ್ಮಿಸಲು ಸಾಧ್ಯವಿದೆ ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಡಿ.ಎಂ. ಚಂದ್ರಮೋಹನ್ ತಿಳಿಸಿದರು.



ನಗರದ ಗುರುಭವನದಲ್ಲಿ ತಾಲ್ಲೂಕು ಆರೋಗ್ಯ ಇಲಾಖೆ ವತಿಯಿಂದ ನಡೆದ ವಿಶ್ವ ಕ್ಷಯ ರೋಗ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.


ಟಿ.ಬಿ. ಒಂದು ಸಾಂಕ್ರಾಮಿಕ ಕಾಯಿಲೆ ಮೈಕ್ರೋ ಬ್ಯಾಕ್ಟೀರಿಯಂ ಟ್ಯೂಬರ್ ಕ್ಯುಲೋಸಿಸ್ ಬ್ಯಾಸಿಲೆಗಳಿಂದ ಹರಡುತ್ತದೆ. ಟಿಬಿ ಒಬ್ಬರಿಂದ ಇನ್ನೊಬ್ಬರಿಗೆ ಕೆಮ್ಮುವುದರ ಮೂಲಕ ಗಾಳಿಯಿಂದ ಹರಡುತ್ತದೆ. ಸರಿಯಾದ ಔಷಧಿಯನ್ನು ಸರಿಯಾದ ಪ್ರಮಾಣದಲ್ಲಿ ಸೂಕ್ತ ಕಾಲಾವಧಿಯವರೆಗೆ ತೆಗೆದುಕೊಂಡಲ್ಲಿ ಟಿಬಿಯನ್ನು ಸಂಪೂರ್ಣವಾಗಿ ಗುಣಪಡಿಸಬಹುದಾಗಿದೆ.

ಪದೇ ಪದೇ ಕೆಮ್ಮು ಇದ್ದಲ್ಲಿ ಮಾಸ್ಕ್ ಬಳಕೆ ಮಾಡುವುದು, ಆಗಾಗ ಸಾಬೂನು ಬಳಸಿ ಕೈ ತೊಳೆಯಬೇಕು, ತಂಬಾಕು ಸೇವನೆ ಹಾಗೂ ಮದ್ಯಪಾನ ಹಾನಿಕಾರಕ. ಚಿಕಿತ್ಸೆ, ಔಷಧಿ ಪೂರ್ಣವಾದ ಬಳಿಕವೂ ಸಹ ಮದ್ಯಪಾನ ಮಾಡದಿರುವುದು ಉತ್ತಮ. ಪೌಷ್ಟಿಕ ಹಾಗೂ ಪ್ರೋಟೀನ್ ಯುಕ್ತ ಆಹಾರ ಸೇವಿಸಿದಾಗ ತೂಕ ಹೆಚ್ಚಾಗುತ್ತದೆ. ಇದರಿಂದಾಗಿ ಅಡ್ಡಪರಿಣಾಮಗಳು ಕಡಿಮೆಯಾಗಿ ಆರೋಗ್ಯಕರ ಭಾವನೆಗಳು ಮೂಡುತ್ತವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಬಿಇಓ ಯು. ಬಸವರಾಜಪ್ಪ, ತಾ.ಪಂ. ಅಧ್ಯಕ್ಷ ವೀರಭದ್ರಪ್ಪ ಆದಾಪುರ, ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ, ಸುಧಾ ಪಿ ಸುಳಕೆ, ಆಶಾ, ಎ.ಎಲ್. ಮಂಜುನಾಥ್, ವಿಜಯಲಕ್ಷ್ಮಿ ಇನ್ನಿತರರಿದ್ದರು.

## ಹೊನ್ನಾಳಿ ಕೃತಜ್ಞತಾ ಯಾತ್ರೆಗೆ ಜಯ ಮೃತ್ಯುಂಜಯ ಶ್ರೀ

ಹೊನ್ನಾಳಿ, ಮಾ.24- ಕೃತಜ್ಞತಾ ಯಾತ್ರೆ ನಿಮಿತ್ತ ಇದೇ ಮಾರ್ಚ್ 27 ರಂದು ಸಂಜೆ 4 ಗಂಟೆಗೆ ಕೂಡಲ ಸಂಗಮದ ಶ್ರೀ ಜಗದ್ಗುರು ಜಯ ಮೃತ್ಯುಂಜಯ ಸ್ವಾಮೀಜಿ ಹೊನ್ನಾಳಿಗೆ ಆಗಮಿಸಲಿದ್ದಾರೆ.



ಈ ಸಂಬಂಧ ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಪಂಚಮಸಾಲಿ ಸಮಾಜದ ಸಭೆಯಲ್ಲಿ ಹೊನ್ನಾಳಿ ತಾಲ್ಲೂಕು ಘಟಕ, ನ್ಯಾಮತಿ ತಾಲ್ಲೂಕು ಘಟಕ ಹಾಗೂ ಪಟ್ಟಣದ ಯುವ ಘಟಕದ ಪದಾಧಿಕಾರಿಗಳು ಸೇರಿ ಕಾರ್ಯಕ್ರಮ ಯಶಸ್ವಿಗೊಳಿಸುವ ಕುರಿತು ಮಾತನಾಡಿದರು.


ಜಿಲ್ಲೆಯ ಹರಿಹರ ಹಾಗೂ ದಾವಣಗೆರೆ ತಾಲ್ಲೂಕುಗಳ ಮೂಲಕ ಬೆಂಗಳೂರಿಗೆ ಪಾದಯಾತ್ರೆ ತೆರಳುವುದರಿಂದ ಹೊನ್ನಾಳಿಯಲ್ಲಿ ಆಚರಿಸುತ್ತಿರುವ ಕೃತಜ್ಞತಾ ಸಭೆ ಹೆಚ್ಚು ಮಹತ್ವ ಪಡೆದಿದ್ದು, ಸಮಾಜ ಬಾಂಧವರಲ್ಲಿ ಆಸಕ್ತಿ ಮೂಡಿಸಿದೆ.

ಹೊನ್ನಾಳಿ ಸಭೆಯ ನಂತರ ಸ್ವಾಮೀಜಿಗಳು ಹರಿಹರ ಮಾರ್ಗವಾಗಿ ದಾವಣಗೆರೆಗೆ ತೆರಳಿ ವಾಸ್ತವ್ಯ ಹೂಡಲಿದ್ದಾರೆ.

ಸ್ವಾಮೀಜಿಗಳು ಚಿತ್ರದುರ್ಗ ಮಾರ್ಗವಾಗಿ ಹೆಬ್ಬಾಳ ಮಠ, ಚನ್ನಗಿರಿಯ ಕಾಶೀಪುರ, ಕಾರಿಗನೂರು ಕ್ರಾಸ್ ಮೂಲಕ ಸಂಜೆ 4 ಗಂಟೆಗೆ ಸಭೆಗೆ ಆಗಮಿಸುವುದಾಗಿ ತಿಳಿಸಿದ್ದಾರೆ ಎಂದು ಸಭೆಯ ಆಯೋಜಕರು ತಿಳಿಸಿದರು. ಸಮಾಜದ ಪ್ರಮುಖರಾದ ನ್ಯಾಮತಿ ಪಂಚಪ್ಪ, ಪಟ್ಟಣ ಶೆಟ್ಟಿ ಪರಮೇಶ್, ಬೆನಕನಹಳ್ಳಿ ವೀರಣ್ಣ, ರೈತ ಮುಖಂಡ ಹಿರೇಮಠ ಬಸಣ್ಣ, ಹೊಳೆ ಹರಳಹಳ್ಳಿ ಬಸವರಾಜಪ್ಪ, ಹೋಟೆಲ್ ಗಿರೀಶ್, ಪೇಟೆ ಪ್ರಶಾಂತ್, ಕಾಯಿ ಬಸಣ್ಣ, ಗಂಗಣ್ಣ, ಹಾಲೇಶ್, ಪಲ್ಲವಿ ರಾಜು, ಮೃತ್ಯುಂಜಯ ಪಾಟೀಲ್, ಶಿಕ್ಷಕ ಗಿರೀಶ್, ಕೆ.ವಿ. ಪ್ರಸನ್ನ ಇನ್ನಿತರರಿದ್ದರು.

## ಶಿಲಾಮಂಟಪ ನಿರ್ಮಾಣ ಕಾಮಗಾರಿ ವೀಕ್ಷಣೆ

ಚಿತ್ರದುರ್ಗ, ಮಾ. 24- ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಬೃಹತ್ ಶಿಲಾಮಂಟಪ (ಆನೆ ಬಾಗಿಲು) ನಿರ್ಮಾಣ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು, ಡಾ. ಶಿವಮೂರ್ತಿ ಮುರುಘಾ ಶರಣರು ಕಟ್ಟಡದ (ಮೇಲೇರಿ) ಕಾಮಗಾರಿ ವೀಕ್ಷಿಸಿದರು.



## ಅಂತರರಾಷ್ಟ್ರೀಯ ಪತ್ರ ಲೇಖನ ಸ್ಪರ್ಧೆ

ದಾವಣಗೆರೆ, ಮಾ. 24- ಭಾರತೀಯ ಅಂಚೆ ಇಲಾಖೆ ಚಿತ್ರದುರ್ಗ ವಿಭಾಗದ ವತಿಯಿಂದ 15 ವರ್ಷದ ಒಳಗಿನ ಯುವಜನತೆಗೆ ಕೋವಿಡ್ 19 ಕುರಿತ ತಮ್ಮ ಅನುಭವವನ್ನು ತಮ್ಮ ಕುಟುಂಬದ ಸದಸ್ಯರಿಗೆ ಪತ್ರ ಬರೆಯುವ ವಿಷಯವಾಗಿ ಮಾ.28 ರಂದು ಅಂತರರಾಷ್ಟ್ರೀಯ ಪತ್ರ ಲೇಖನ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಪತ್ರ ಲೇಖನ ಸ್ಪರ್ಧೆಯು ಒಂದು ಗಂಟೆಯ ಅವಧಿಯದಾಗಿದ್ದು, ನೂರು ಅಂಕಗಳನ್ನು ಒಳಗೊಂಡಿದೆ. 800 ಪದಗಳನ್ನು ಮೀರದಂತೆ ಪತ್ರ ಬರೆಯಬೇಕು. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಮೂರು ಭಾವಚಿತ್ರಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಪ್ರಧಾನ ಅಂಚೆ ಕಚೇರಿ ಹಾಗೂ ದೂರವಾಣಿ ಸಂಖ್ಯೆ: 9986038721 ನ್ನು ಸಂಪರ್ಕಿಸಬಹುದು ಎಂದು ಅಂಚೆ ಅಧೀಕ್ಷಕ ವಿರೂಪಾಕ್ಷಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ

ಕರ್ನಾಟಕ ಉದ್ಯಮಶೀಲತಾಭಿವೃದ್ದಿ ಕೇಂದ್ರ (ಸಿಡಾಕ್) ಧಾರವಾಡ, ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11.45 ಕ್ಕೆ ಸರಸ್ವತಿ ನಗರದ ಶ್ರೀ ಉತ್ಸವಾಂಭ ಬ್ಯೂಟಿ ಪಾರ್ಲರ್ ಕ್ಲಾಸ್ ಸೆಂಟರ್ ನಲ್ಲಿ 30 ದಿನಗಳ ಹರ್ಬಲ್ ಕಾಸ್ಮೆಟಾಲಜಿ ಮತ್ತು ಬ್ಯುಟೀಷಿಯನ್ ನೈರ್ಮಲ್ಯದ ಉದ್ಯಮಶೀಲತಾ ಕೌಶಲ್ಯಾಭಿವೃದ್ದಿ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ರಾಜ್ಯ ಮಹಿಳಾ ಅಭಿವೃದ್ದಿ ನಿಗಮದ ಅಭಿವೃದ್ದಿ ನಿರೀಕ್ಷಕರಾದ ಮಂಜುಳಮ್ಮ ಉದ್ಘಾಟಿಸುವರು. ಸಿಡಾಕ್ ಜಂಟಿ ನಿರ್ದೇಶಕ ಆರ್.ಪಿ.ಪಾಟೀಲ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ತರಬೇತುದಾರರಾದ ಪದ್ಮಜಾರಾವ್, ನಿವೃತ್ತ ನಿಯೋಜನಾಧಿಕಾರಿ ಬಿ. ಮುಕುಂದಪ್ಪ ಪಾಲ್ಗೊಳ್ಳಲಿದ್ದಾರೆ.

## ಜಿಎಂಐಟಿಯಲ್ಲಿ ಸೌರಶಕ್ತಿಯ ಕೌಶಲ್ಯಗಳ ಮಾಹಿತಿ ಕಾರ್ಯಾಗಾರ



ದಾವಣಗೆರೆ, ಮಾ. 24- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜಿಲ್ಲೆಯ ವಿವಿಧ ಐಟಿಐ ಕಾಲೇಜ್ ಮತ್ತು ಪಾಲಿಟೆಕ್ನಿಕ್ ಮೇಲ್ವಿಚಾರಕರುಗಳಿಗೆ ಸೌರಶಕ್ತಿ ಬಳಕೆ ಮಾಡುವ ತಂತ್ರಜ್ಞಾನ ಮತ್ತು ಕೌಶಲ್ಯಗಳ ಮೇಲೆ ಎರಡು ದಿನಗಳ ಕಾರ್ಯಾಗಾರವನ್ನು ಎಂಜಿಐಆರ್‌ಡಿ ಬೆಂಗಳೂರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ದಾವಣಗೆರೆ. ಸರ್ಕಾರಿ ಐಟಿಐ ಕಾಲೇಜ್ ದಾವಣಗೆರೆ ಮತ್ತು ಎಂಎಆರ್‌ಎಸ್‌ಎಸ್-ಕೆ ಇವರ ಸಹಯೋಗದಿಂದ ಹಮ್ಮಿಕೊಳ್ಳಲಾಗಿತ್ತು.

ಜಿ.ಎಂ.ಐ.ಟಿ ಕಾಲೇಜಿನ ಪ್ರಾಧ್ಯಾಪಕ ಡಾ. ರಾಜಕುಮಾರ್ ಮತ್ತಿತರರು ಕಾರ್ಯಾಗಾರ ನಡೆಸಿಕೊಟ್ಟರು.

ಸಮಾರೋಪ ಸಮಾರಂಭದಲ್ಲಿ ಸಂಸ್ಥೆಯ ಪ್ರತಿನಿಧಿ ವೈ.ಯು. ಸುಭಾಷ್‌ಚಂದ್ರ, ಪ್ರಾಂಶುಪಾಲ ಡಾ. ವೈ.ವಿ ಜಯಕುಮಾರ್, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಸಿ.ವಿ. ಶ್ರೀನಿವಾಸ್ ಭಾಗವಹಿಸಿದ್ದರು. ಸರ್ಕಾರಿ ಐಟಿಐ ಕಾಲೇಜು ಪ್ರಾಂಶುಪಾಲ ಎನ್. ಏಕಾಂತ, ಎಂಎಆರ್‌ಎಸ್‌ಎಸ್-ಕೆ ಪ್ರಾಜೆಕ್ಟ್ ಡೈರೆಕ್ಟರ್ ಎ. ಹುಲಿಗೇಶ್ ಪ್ರಾಜೆಕ್ಟ್ ಡೈರೆಕ್ಟರ್ ಮತ್ತಿತರರು ಉಪಸ್ಥಿತರಿದ್ದರು.

## ಮಕ್ಕಳ ಲೋಕದಲ್ಲಿ ಉಚಿತ ಕನ್ನಡ ಶಿಕ್ಷಣ

ದಾವಣಗೆರೆ, ಮಾ.24- ನಿಟುವಳ್ಳಿಯ ಶ್ರೀ ಆಂಜನೇಯ ಗುಡಿಯಲ್ಲಿ ಪ್ರತಿ ಶನಿವಾರ ಸಂಜೆ 4.30 ರಿಂದ 6.30 ರವರೆಗೆ ಚಿಕ್ಕಮಕ್ಕಳಿಗೆ ಪ್ರಾಥಮಿಕ, ಪ್ರೌಢಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಕನ್ನಡ ಕಲಿಸಲಾಗುತ್ತದೆ.

ಕನ್ನಡದ ಜೊತೆಗೆ ಸಂಗೀತ, ಭಾಷಣ, ಯೋಗ, ಗಣಿತ, ಚಿತ್ರಕಲೆ ಗಳನ್ನು ಉಚಿತವಾಗಿ ಕಲಿಸಲಾಗುತ್ತದೆ. ಸುಮಾರು 12 ವರ್ಷಗಳಿಂದ ಸಾವಿರಕ್ಕೂ ಹೆಚ್ಚು ಮಕ್ಕಳು ಉಚಿತ ಶಿಕ್ಷಣ ಪಡೆದಿದ್ದಾರೆ. ನಿಟುವಳ್ಳಿಯ ಶ್ರೀ ಬಸವೇಶ್ವರ ಶಾಲೆಯಿಂದ ಕನ್ನಡ ಕಲಿಕೆಯ ಆಂದೋಲನ ಆರಂಭಿಸಿದ್ದು, ಪೋಷಕರು ಮೊದಲು ಮಕ್ಕಳಿಗೆ ಕನ್ನಡ ಕಲಿಸಬೇಕು ಎಂದು ಮಕ್ಕಳ ಲೋಕದ ಸಂಸ್ಥಾಪಕ ಕೆ.ಎನ್. ಸ್ವಾಮಿ ಮನವಿ ಮಾಡಿದ್ದಾರೆ.

ಇದೇ ವೇಳೆ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಬಹುಮಾನಗಳನ್ನು ಹಂಚಲಾಯಿತು. ಹುಲ್ಲೇಹಾಳ್ ಮಂಜುನಾಥ್ ಮಾತನಾಡಿ, ಬಡ ಮಕ್ಕಳ ಬಗ್ಗೆ ಸರ್ಕಾರ ಹಾಗೂ ಸಾರ್ವಜನಿಕರು ಕಾಳಜಿ ವಹಿಸಬೇಕು ಎಂದರು.

# ಅಜ್ಞಾನ, ಅಂಧಕಾರದಿಂದ ಹೊರಬನ್ನಿ

### ಜಿಗಳಿಯಲ್ಲಿ ಸತ್ಯಶಿವರಾತ್ರಿ ಕಾರ್ಯಕ್ರಮದಲ್ಲಿ ಬಿ.ಕೆ. ಮಂಜುಳಾಜೀ



ಮಲೇಬೆನ್ನೂರು, ಮಾ.24- ಅಜ್ಞಾನ, ಅಂಧಕಾರವನ್ನು ಮನಸ್ಸಿನಿಂದ ದೂರ ಮಾಡಿಕೊಂಡು, ಜ್ಞಾನದ ದೀಪವನ್ನು ಬೆಳಗಿಸಿಕೊಂಡು ತಮ್ಮನ್ನು ತಾವು ಅರಿತುಕೊಳ್ಳುವುದೇ ಸತ್ಯ ಶಿವರಾತ್ರಿ ಆಚರಣೆಯ ಉದ್ದೇಶವಾಗಿದೆ ಎಂದು ರಾಜಯೋಗಿನಿ ಬಿ.ಕೆ. ಮಂಜುಳಾಜೀ ಹೇಳಿದರು.

ಅವರು ಜಿಗಳಿ ಗ್ರಾಮದ ವಾಲ್ಮೀಕಿ ವೃತ್ತದಲ್ಲಿ ಮಲೇಬೆನ್ನೂರಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಹಮ್ಮಿಕೊಂಡಿದ್ದ ಮಹಾಶಿವರಾತ್ರಿ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು.

ಪರಮಾತ್ಮ ಶಿವನು ಮನುಷ್ಯರಾದ ನಮಗೆ ಸತ್ಯ ಜ್ಞಾನವನ್ನು ನೀಡಿ, ಆತ್ಮ ಕಲ್ಯಾಣವನ್ನು ಮಾಡುತ್ತಿದ್ದಾನೆ. ಪ್ರಸ್ತುತ ದಿನಮಾನದಲ್ಲಿ ಎಲ್ಲರಿಗೂ ಒತ್ತಡ ಹೆಚ್ಚಾಗುತ್ತಿದ್ದು, ಅದರಿಂದ ಹೊರಬರಲು ರಾಜಯೋಗದಲ್ಲಿ ಭಾಗವಹಿಸಿ ಅಥವಾ ಭಗವಂತನ ಧ್ಯಾನ ಮಾಡಿ ಎಂದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ ಮಾತನಾಡಿ, ಜಗತ್ತಿನಲ್ಲಿ ಶಾಂತಿ ನೆಲೆಸಲು ಈಶ್ವರೀಯ ವಿಶ್ವವಿದ್ಯಾಲಯವು ತನ್ನದೇ ಆದ ಸೇವೆ ಸಲ್ಲಿಸುತ್ತಿದ್ದು, ಜನರಿಗೆ ಪರಮಾತ್ಮನ ಬಗ್ಗೆ ತಿಳಿಸಿ, ಎಲ್ಲರೂ ಭಗವಂತನ ಸ್ಮರಣೆ ಮಾಡಿ ಬದುಕಿನಲ್ಲಿ ಶಾಂತಿ, ನೆಮ್ಮದಿ ಕಂಡುಕೊಳ್ಳುವಂತೆ ಮಾಡುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂ. ನೂತನ ಅಧ್ಯಕ್ಷೆ ಶ್ರೀಮತಿ ಕರಿಯಮ್ಮ, ಸದಸ್ಯರಾದ ಎನ್.ಎಂ. ಪಾಟೀಲ್, ಕೆ.ಜಿ. ಬಸವರಾಜ್, ವೈ.ಆರ್. ಚೇತನ್‌ಕುಮಾರ್, ಶ್ರೀಮತಿ ವಿನೋದಮ್ಮ ಜಿ.ಆರ್. ಹಾಲೇಶ್‌ಕುಮಾರ್, ಶ್ರೀಮತಿ ಕವಿತಾ ಮಾಕನೂರು ಶಿವು, ಶ್ರೀಮತಿ ರೇಣುಕಮ್ಮ ಪೂಜಾರ್ ನಾಗರಾಜ್, ಶ್ರೀಮತಿ ಮಂಜುಳಾ ಸಿ. ಪರಮೇಶ್ವರಪ್ಪ ಅವರನ್ನು ಸನ್ಮಾನಿಸಲಾಯಿತು.

ಗ್ರಾ.ಪಂ. ಮಾಜಿ ಅಧ್ಯಕ್ಷ ಹೆಚ್.ಎಸ್. ರುದ್ರಯ್ಯ ಅವರು ಈಶ್ವರೀಯ ವಿಶ್ವವಿದ್ಯಾಲಯದ ಬಗ್ಗೆ ತಿಳಿಸಿದರು.

ಗ್ರಾಮದ ಹಿರಿಯರಾದ ಕೊಟ್ರಯ್ಯ, ಕೆ. ಷಣ್ಮುಖಪ್ಪ, ಕೆ. ಸ್ವಾಮಿಲಿಂಗಪ್ಪ, ಬಿ.ಎಂ. ದೇವೇಂದ್ರಪ್ಪ, ಕೆ.ಆರ್. ರಂಗಪ್ಪ, ಮುದ್ದಪ್ಪ ಈಶ್ವರಪ್ಪ, ಮುದ್ದಪ್ಪ ಶಿವಶಂಕರ್, ಪಿಎಸಿಎಸ್ ಸಿಇಓ ಎನ್.ಎನ್. ತಳವಾರ್, ಕೆ.ಎಸ್. ನಂದ್ಯೆಪ್ಪ, ಯಲವಟ್ಟಿಯ ನಾಗರಾಜಪ್ಪ ಮತ್ತಿತರರು ಭಾಗವಹಿಸಿದ್ದರು.

ಪತ್ರಕರ್ತ ಪ್ರಕಾಶ್ ಸ್ವಾಗತಿಸಿದರು. ಬಿ.ಕೆ. ಸಾವಿತ್ರಕ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಗ್ರಾಮದಲ್ಲಿ ಜ್ಯೋತಿರ್ಲಿಂಗಗಳ ಮೆರವಣಿಗೆ ಮತ್ತು ಶಾಂತಿಯಾತ್ರೆ ನಡೆಯಿತು. ಡೊಳ್ಳು ಕುಣಿತ ಮೆರವಣಿಗೆಗೆ ಮೆರಗು ತಂದಿತು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

## ಕಾಡಿದ ಕನಸು... ಅರಳಿದ ಮನಸು...



ಭಯದ ಬೆವರಲ್ಲಿ
ನಿರಾಳ ಮೌನ,
ಆಗಾಗ ಕಿವಿಗೆ
ತಗುಲುತ್ತಿರುವ
ಮಂದಗಾಳಿ
ಕೈ ಕಾಣದಷ್ಟು ಕತ್ತಲು,
ಯಾವುದೊ ಸದ್ದಿಗೆ
ನಡುಗುವ ಹೃದಯ,
ಅತ್ತಿತ್ತ ಕತ್ತಲಲ್ಲಿ ಹುಡುಕಾಟ ಶುರುವಾಗಿತ್ತು,
ಯಾರೋ ಇದ್ದಂತೆ ಪಕ್ಕದಲ್ಲೆ,
ಉಸಿರಾಟ ಜೋರಾಯಿತು,
ಭಯವು ಬೆವರಲ್ಲಿ ಬೆರೆತು ಹೋಯಿತು,
ಇದೆಂತಹ ಅಂಧಕಾರ,
ಇನ್ನೆಲ್ಲವು ಹೆಚ್ಚಾಯಿತು,
ಬಿದ್ದೆ... ದೇಹಕ್ಕೆ ಪೆಟ್ಟಾಯಿತು,
ಮೆಲ್ಲನೆ ಕಣ್ಣು ಬಿಟ್ಟೆ, ನಮ್ಮನೆ!
ಕಂಡದ್ದು ಕನಸೆಂದು ಸಮಾಧಾನಿಸಿದರು
ಮನಸ್ಸು ಭಯದಲ್ಲಿತ್ತು,
ಮತ್ತೆ ನಿದ್ದೆ ಮಾಡಿದ ನೆನಪಿಲ್ಲ...
ಆ ಕನಸಿನ ರಾತ್ರಿಗಳು
ಮತ್ತೆ ಮತ್ತೆ ಮರುಕಳಿಸುವವು,
ಅವುಗಳೇ ಜೀವನದ ಕಷ್ಟ-ಕಾರ್ಪಣ್ಯಗಳು,
ಮೆಟ್ಟಿ ನಿಂತರೆ ಜಯದ ಶಿಖರ,
ಬೆಚ್ಚಿ ಕುಂತರೆ ಸೋಲು ನಿಖರ,
ಜಯಭೇರಿ ಬಾರಿಸಿ ಗೆಳೆಯರೆ,
ಸಾಧ್ಯವಾದರೆ ಪಕ್ಕದವನ ಕಷ್ಟಕ್ಕೂ ಹೆಗಲು ಕೊಡಿ,
ಅಂಜಿಕೆ ಬಿಡಿ, ನೀವಾಗ ಬೆಳೆಯುವಿರಿ,
ಜಗವಾಗ ಬೆಳಗುವುದು...!

**- ಪ್ರೀತಿ. ಟಿ.ಎಸ್**, ದಾವಣಗೆರೆ.
preethimodaliyar@gmail.com

# ಬಿರು ಬಿಸಿಲಿನಲ್ಲಿ ಅಡಿಕೆ ತೋಟಗಳ ಸ್ಥಿತಿಗತಿ, ನಿರ್ವಹಣೆ



ಈ ವರ್ಷ ಅಡಿಕೆ ಬೆಳೆಗಾರರ ಮುಖದಲ್ಲಿ ಸ್ವಲ್ಪ ಮಂದಹಾಸ ಮೂಡಿದೆ. ಏಕೆಂದರೆ ತುಸು ಏರಿಕೆ ಕಂಡ ಬೆಲೆ ಮತ್ತು ಸ್ಥಿರತೆ. ಆದರೆ ಇದು ಇನ್ನೆಷ್ಟು ದಿನಗಳವರೆಗೆ ಇರುವುದೋ ನಾ ಕಾಣೆ. ಇಂತಹ ಪರಿಸ್ಥಿತಿಯಲ್ಲಿ ಬಿರು ಬೇಸಿಗೆಯಲ್ಲಿ ತೋಟಗಳ ನಿರ್ವಹಣೆಯಲ್ಲಿ ಗಮನಹರಿಸಬೇಕಾದ ಕೆಲ ಅಂಶಗಳು.

ಜಿಲ್ಲೆಯಲ್ಲಿ ಸರಿ ಸುಮಾರು 43,000/- ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದೆ. ಕಳೆದ ವರ್ಷ ತೋಟಗಾರಿಕೆ ಇಲಾಖೆಯ ಮಾಹಿತಿಯ ಪ್ರಕಾರ ಸುಮಾರು 2,000 ಹೆ. ಪ್ರದೇಶ ವಿಸ್ತರಣೆಯಾಗಿದೆ. ಇದಕ್ಕೆ ಪ್ರಮುಖ ಕಾರಣ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ.

ಈಗಾಗಲೇ ಉಷ್ಣಾಂಶ ಹೆಚ್ಚಾಗಿರುವುದರಿಂದ ತೋಟಗಳಲ್ಲಿ ಉಳುಮೆ ಮಾಡಬಾರದು. ಒಮ್ಮೆ ಉಳುಮೆ ಮಾಡಿದರೆ ತೋಟದ ಆಂತರಿಕ ಉಷ್ಣಾಂಶ ಹೆಚ್ಚಾಗಿ ಗಿಡಗಳಿಗೆ ಬಿಸಿಲಿನ ಶಾಖ ಹೆಚ್ಚಾಗುವುದಲ್ಲದೆ, ಮುಂದೆ ಹರಳು ಉದುರುವ ಪ್ರಮಾಣ ಹೆಚ್ಚಾಗಬಹುದು. ಆದ್ದರಿಂದ ತೋಟಗಳಲ್ಲಿ ಹಸಿರಿರುವಂತೆ ನೋಡಿಕೊಳ್ಳಿ. ಈಗಾಗಲೇ ಉಳುಮೆ ಮಾಡಿದ್ದರೆ ಬೇಗನೆ ಯಾವುದಾದರೊಂದು ಹಸಿರೆಲೆ ಗೊಬ್ಬರವನ್ನು ಬೆಳೆಸುವುದು ಉತ್ತಮ. ತೋಟಗಳಲ್ಲಿ ಬೇಸಿಗೆಯಲ್ಲಿ ಬೆಳೆ ಇರಲಿ ಇಲ್ಲಾ ಕಳೆ ಇರಲಿ ತೊಂದರೆಯಿಲ್ಲ ಆದರೆ ಉಳುಮೆರಹಿತವಾಗಿರಲಿ.

ಇನ್ನು ಬೇಸಿಗೆಯಲ್ಲಿ ನೀರಿನ ನಿರ್ವಹಣೆ ರೈತರಿಗೆ ಸವಾಲು. ಬಹಳಷ್ಟು ರೈತರು ಈ ಸಮಯದಲ್ಲಿ ಅತೀ ಹೆಚ್ಚಿನ ನೀರನ್ನು ತೋಟಕ್ಕೆ ಬಿಡುವುದು ಸಹಜ. ಆದರೆ ಅತೀ ಹಸಿಯಾದರೆ ಅದೂ ಸಹ ಬೆಳೆಗೆ ಕಂಟಕ ಎಂದು ಅವರಿಗೆ ತಿಳಿಯದು. ಈ ಸಮಯದಲ್ಲಿ ನೀರು ಬಿಡಲು ಇರುವ ಎರಡು ಮಾನದಂಡಗಳೆಂದರೆ ಒಂದು ತಮ್ಮ ಹೊಲದ ಮಣ್ಣಿನ ರಚನೆ ಮತ್ತೊಂದು ವಾತಾವರಣದ ಬದಲಾವಣೆ. ಇವೆರಡನ್ನೂ ಅನುಸರಿಸಿ ನೀರನ್ನು ನಿರ್ವಹಣೆ ಮಾಡಿದರೆ ಉತ್ತಮ. ಭೂಮಿ ನೀರುಣಿಸಿ, ಆರಿಸಿ ನಂತರ ನೀರು ಬಿಡುವುದು ಉತ್ತಮ.

ನೀವೆಷ್ಟೇ ಭೂಮಿ ನೆನೆಸಿ, ತಂಪಾಗಿಸಿದರೂ ವಾತಾವರಣದ ಉಷ್ಣಾಂಶವನ್ನು ಕಡಿಮೆಗೊಳಿಸಲು ಸಾಧ್ಯವಿಲ್ಲ. ಹಾಗಾಗಿ ಹನಿ ನೀರಾವರಿಯಲ್ಲಿ ಬೇರಿನ ಹಸಿಯನ್ನು ಕಾಯ್ದುಕೊಳ್ಳುವುದು ಉತ್ತಮ. ಸ್ವಲ್ಪ ನೀರು ಚೆನ್ನಾಗಿದ್ದರೆ ತುಂತುರು ನೀರಾವರಿ ಮಾಡಬಹುದು. ಆದರೆ ಸುಮ್ಮನೆ ಹಾಯಿ ನೀರು ಕಟ್ಟಿ ತೋಟವನ್ನು ಹಾಳು ಮಾಡಬೇಡಿ. ಕಳೆದ ವರ್ಷ ನೀರು ಹೆಚ್ಚಿರುವ ಅಡಿಕೆ ತೋಟಗಳಲ್ಲಿ ಇಂಗಾರ ಕೊಳೆ ರೋಗ ಹೆಚ್ಚಿತ್ತು ಎಂಬುದನ್ನು ರೈತರು ಅರಿತುಕೊಳ್ಳಬೇಕು. ಮರಳು ಮಿಶ್ರಿತ ಮತ್ತು ಕಲ್ಲು ಹೆಚ್ಚಿರುವ ಭೂಮಿಯಲ್ಲಿ ನೀರು ಆಗಾಗ ಬೇಕಾಗುವುದು. ಆದರೆ ಕಪ್ಪು ಮಿಶ್ರಿತ ಗೋಡು ಮಣ್ಣಿನಲ್ಲಿ ನೀರು ಸ್ವಲ್ಪ ಕಡಿಮೆ ಮಾಡುವುದು ಒಳ್ಳೆಯದು.

ಮೊನ್ನೆ ಸ್ನೇಹಿತರಾದ ಕಣವೆಬಿಳಚಿ ನಾಗರಾಜ್ ಕರೆ ಮಾಡಿ ನಮ್ಮ ಕಡೆ ಅಡಿಕೆ ತೋಟಕ್ಕೆ ಔಷಧಿ ಹೊಡೆಯಲು ಬರುತ್ತಿದ್ದಾರೆ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಕೇಳಿದರು. ಈ ಸಮಯದಲ್ಲಿ ಅಡಿಕೆ ಬೆಳೆಗೆ ಸಿಂಪರಣೆ ಅಗತ್ಯ, ತೋಟದಲ್ಲಿ ಇಂಗಾರ ಕೊಳೆ ರೋಗ, ರಸಹೀರುವ ಕೀಟಗಳ ಬಾಧೆ ಮತ್ತು ಹರಳು ಉದುರುವ ಸಮಸ್ಯೆಯಿದ್ದರೆ ಮಾತ್ರ. ಆದರೆ ನಾವು ಸಾವಯವ ಸಿಂಪರಣೆ ಮಾಡುತ್ತೇವೆಂದು ಬಂದರೆ ದಯವಿಟ್ಟು ಜಾಗೃತರಾಗಿ.

ಆದರೆ ಎಕರೆಗೆ ಹತ್ತರಿಂದ ಹದಿನೈದು ಸಾವಿರ ವೆಚ್ಚ ಮಾಡುವುದು ಹಾಸ್ಯಾಸ್ಪದ. ಹಾಗೆಯೇ ಮೊನ್ನೆ ಸಿಂಪರಣೆ ಬೆರೆಸಿಕೊಂಡ ರೈತರೊಬ್ಬರು ಕರೆ ಮಾಡಿ ಕೇಳಿದ್ದು, ಸರ್ ಬೇವಿನ ಎಣ್ಣೆ ಮಿಕ್ಸ್ ಮಾಡಬಹುದಾ, ಮನೇಲಿ ಉಳಿದಿದ್ದು, ಉಚಿತವಾಗಿ ಕೊಟ್ಟಿದ್ದು, ಹೋದ ವರ್ಷ ಉಳಿದಿದ್ದು ಯಾವುದನ್ನೂ ದಯವಿಟ್ಟು ಮಿಕ್ಸ್ ಮಾಡಬೇಡಿ. ಕೆಲ ರೈತರಂತೂ ನಾವು ಬರೆದಿದ್ದು ಒಂದಾದರೆ ಅವರು ಸಿಂಪಡಿಸಿದ್ದೇ ಇನ್ನೊಂದಿರುತ್ತೆ. ಕೆಲವೊಮ್ಮೆ ಅತೀ ಬುದ್ಧಿವಂತಿಕೆಯೂ ಮುಳುವಾಗುತ್ತದೆ. ತಮಗೆ ತಂತ್ರಜ್ಞಾನದ ಬಗ್ಗೆ ನಂಬಿಕೆಯಿದ್ದರೆ ಧೈರ್ಯವಾಗಿ ಮುಂದುವರೆಯಿರಿ.

ಇನ್ನು ಸಣ್ಣ ಗಿಡಗಳಲ್ಲಿ ಈ ಸಮಯದಲ್ಲಿ ಕೆಂಪು ನುಸಿಯ ಬಾಧೆ ಹೆಚ್ಚಾಗಿರುತ್ತದೆ. ಅದರಲ್ಲೂ ಖಾಲಿ ಹೊಲ ಇರುವ ಕಡೆ ಇದರ ಬಾಧೆ ಇನ್ನೂ ಹೆಚ್ಚು. ಅಂತಹ ತೋಟಗಳಲ್ಲಿ ಗಿಡದ ಸುತ್ತ ಸ್ವಲ್ಪ ಸೆಣಬು / ಡಯಾಂಚ ಬೀಜಗಳನ್ನು ಉದುರಿಸಿ ಗಿಡವನ್ನು ಬಿರು ಬಿಸಿಲಿನಿಂದ ಸಂರಕ್ಷಿಸಬಹುದಾಗಿದೆ. ನುಸಿಯ ಬಾಧೆ ತೀವ್ರವಿದ್ದರೆ Propargite 2 ಮಿಲೀ. ಅಥವಾ Hexythiozox 1 ಮಿಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಎಲೆಯ ಕೆಳಭಾಗ ಸಿಂಪಡಿಸಿದರೆ ಹತೋಟಿ ಮಾಡಬಹದು.ಹಾಗೇನಾದರೂ ಹವಾಮಾನ ವೈಪರೀತ್ಯ ಹೆಚ್ಚಾಗಿ ಸಮಸ್ಯೆಗಳು ಎದುರಾದರೆ ಕೃಷಿ ವಿಜ್ಞಾನ ಕೇಂದ್ರ ಹಾಗೂ ತೋಟಗಾರಿಕೆ ಇಲಾಖೆಯನ್ನು ಸಂಪರ್ಕಿಸಿ.

**- ಬಸವನಗೌಡ ಎಂ.ಜಿ.**
ತೋಟಗಾರಿಕೆ ವಿಜ್ಞಾನಿಗಳು
ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ,
ದಾವಣಗೆರೆ.
bghort@gmail.com

# ನ್ಯಾಯಮೂರ್ತಿ ವಿರುದ್ಧ ಕ್ರಮದ ಜಗನ್ ಅರ್ಜಿ ತಿರಸ್ಕೃತ

ನವದೆಹಲಿ, ಮಾ. 24 – ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿಯೊಬ್ಬರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಂಧ್ರ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಸಲ್ಲಿಸಿದ್ದ ದೂರನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ನ್ಯಾಯಾಲಯದ ಆಂತರಿಕ ಪ್ರಕ್ರಿಯೆಯ ಅನ್ವಯ ಎಲ್ಲಾ ವಿಷಯಗಳನ್ನು ಇತ್ಯರ್ಥಪಡಿಸಲಾಗಿದೆ. ಈ ವಿಷಯ ಗೌಪ್ಯ ಸ್ವರೂಪದ್ದಾಗಿದ್ದು, ಸಾರ್ವಜನಿಕರಿಗೆ ಬಹಿರಂಗ ಪಡಿಸುವಂತಿಲ್ಲ ಎಂದು ನ್ಯಾಯಾಲಯ ಹೇಳಿದೆ.

2020ರ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಸಿ. ಬೊಬ್ಡೆ ಅವರಿಗೆ ದೂರೊಂದನ್ನು ಸಲ್ಲಿಸಿದ್ದ ಜಗನ್ ಮೋಹನ್ ರೆಡ್ಡಿ, ಸುಪ್ರೀಂ ಕೋರ್ಟ್ ಹಿರಿಯ ನ್ಯಾಯಮೂರ್ತಿಯೊಬ್ಬರು ಆಂಧ್ರ ಹೈಕೋರ್ಟ್ ಮೇಲೆ ಪ್ರಭಾವ ಬೀರುತ್ತಿದ್ದಾರೆ ಹಾಗೂ ತೆಲುಗು ದೇಶಂ ಪಕ್ಷದ ಹಿತದ ಪರ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದರು.

# ಪ್ರಚೋದನಕಾರಿ ಭಾಷಣ : ಟಿಕಾಯತ್ ವಿರುದ್ಧ ಪ್ರಕರಣ

ಶಿವಮೊಗ್ಗ, ಮಾ. 24 – ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇಲೆ ಇಲ್ಲಿನ ಪೊಲೀಸರು ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಾರ್ಚ್ 20ರಂದು ಶಿವಮೊಗ್ಗದಲ್ಲಿ ಆಯೋಜಿಸ ಲಾಗಿದ್ದ ರೈತರ ಮಹಾ ಪಂಚಾಯತ್‌ನಲ್ಲಿ ಮಾತನಾಡುತ್ತಿದ್ದ ಟಿಕಾಯತ್, ರೈತರು ಬೆಂಗಳೂರನ್ನು ನಾಲ್ಕೂ ದಿಕ್ಕುಗಳಿಂದ ಸುತ್ತುವರಿಯಬೇಕು ಎಂದು ಕರೆ ನೀಡಿದ್ದರು.

ಸರ್ಕಾರದ ಒತ್ತಡದಿಂದಾಗಿ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ ಎಂದು ಆರೋಪಿಸಿರುವ ಕೆ.ಎಲ್. ಅಶೋಕ್, ಈ ಹಿಂದೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ ಕಟೀಲ್, ಲೋಕಸಭಾ ಸದಸ್ಯೆ ಶೋಭಾ ಕರಂದ್ಲಾಜೆ, ಸಚಿವ ಈಶ್ವರಪ್ಪ ಹಿಂಸೆಗೆ ಪ್ರಚೋದಿಸುವ ಹೇಳಿಕೆ ನೀಡಿದರೂ ಕ್ರಮ ತೆಗೆದುಕೊಂಡಿರಲಿಲ್ಲ ಎಂದಿದ್ದಾರೆ.

# ನಗರದಲ್ಲಿ 27 ರಂದು ಯಕ್ಷೋತ್ಸವ

ದಾವಣಗೆರೆ, ಮಾ. 24- ಉಡುಪಿ ಜಿಲ್ಲೆಯ ಶ್ರೀ ಕಂದಾವರ ರಘುರಾಮ ಶೆಟ್ಟಿ ಪ್ರತಿಷ್ಠಾನದಿಂದ ಪ್ರತಿಷ್ಠಾನದ ದಶಮಾನೋತ್ಸವ, ಕಂದಾವರ ಪ್ರಶಸ್ತಿ ಪ್ರದಾನ, ಯಕ್ಷಗಾನ, ತಾಳಮದ್ದಳೆ, ಯಕ್ಷಗಾನ ತರಬೇತಿ ಶಿಬಿರ ಹಾಗೂ ಯಕ್ಷಗಾನ ಪ್ರದರ್ಶನದ ಉದ್ಘಾಟನಾ ಸಮಾರಂಭ ನಗರದ ಕುವೆಂಪು ಕನ್ನಡ ಭವನದಲ್ಲಿ ಇದೇ 27 ರಂದು ನಡೆಯಲಿದೆ ಎಂದು ಯಕ್ಷರಂಗದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷರಂಗ ಯಕ್ಷಗಾನ ಸಂಸ್ಥೆ ಸಹಯೋಗ ದೊಂದಿಗೆ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಆ ದಿನ ಪೂರ್ತಿ ಯಕ್ಷಗಾನದ ವಿವಿಧ ಮಜಲುಗಳೊಂದಿಗೆ 'ಯಕ್ಷೋತ್ಸವ-2021' ಹಮ್ಮಿಕೊಳ್ಳಲಾಗಿದೆ ಎಂದರು.

ಬೆಳಿಗ್ಗೆ 10.35ಕ್ಕೆ ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಪ್ರೊ|| ಎಂ.ಎ.ಹೆಗಡೆ ಕಾರ್ಯಕ್ರಮ ಉದ್ಘಾಟಿಸಿ, ಪ್ರತಿಷ್ಠಾನದ ದಶಮಾನೋತ್ಸವ ಲಾಂಛನ ಲೋಕಾರ್ಪಣೆ ಮಾಡಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ನಾಡಿನ ಹಿರಿಯ ಪ್ರಸಂಗ ಕರ್ತೃರೂ, ಪ್ರತಿಷ್ಠಾನದ ಸಂಸ್ಥಾಪಕರಾದ ಕಂದಾವರ ರಘುರಾಮ ಶೆಟ್ಟಿ ಆಗಮಿಸಲಿದ್ದಾರೆ ಎಂದು ಹೇಳಿದರು.

ಶ್ರೀ ಕಂದಾವರ ರಘುರಾಮಶೆಟ್ಟಿ ಪ್ರತಿಷ್ಠಾನದಿಂದ ಪ್ರತೀ ವರ್ಷ ಕೊಡಮಾಡುವ 'ಕಂದಾವರ ಪ್ರಶಸ್ತಿ' ಯನ್ನು ನಾಡಿನ ಖ್ಯಾತ ಹಿರಿಯ ಯಕ್ಷಗಾನ ಭಾಗವತರಾದ ಸುಬ್ರಹ್ಮಣ್ಯ ಧಾರೇಶ್ವರ ರವರಿಗೆ ವಿತರಿಸಲಾಗುವುದು ಎಂದು ತಿಳಿಸಿದರು.

ಮಧ್ಯಾಹ್ನ 2 ಗಂಟೆಗೆ ಕಂದಾವರ ರಘುರಾಮಶೆಟ್ಟಿ ವಿರಚಿತ 'ಸೀತಾ ಪಾರಮ್ಯ' ಪೌರಾಣಿಕ ಕಥಾನಕದ ಯಕ್ಷಗಾನ ತಾಳಮದ್ದಳೆ ಪ್ರಪ್ರಥಮ ಬಾರಿಗೆ ನಡೆಯಲಿದೆ. ಸಂಜೆ 5 ಗಂಟೆಯಿಂದ ಮಧುಕುಮಾರ್ ಬೇಳೂರು ವಿರಚಿತ ಪೌರಾಣಿಕ ಕಥಾನಕ 'ಸುದರ್ಶನ ವಿಜಯ' ಯಕ್ಷಗಾನ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಯಕ್ಷರಂಗ ಯಕ್ಷಗಾನ ಸಂಸ್ಥೆ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಬೇಳೂರು ಸಂತೋಷ್ ಕುಮಾರ ಶೆಟ್ಟಿ, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಮಹಿಳಾ ವಿಭಾಗದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ ಉಪಸ್ಥಿತರಿದ್ದರು.

## 28 ರಂದು 'ದಾವಣಗೆರೆ ಗೃಹಿಣಿ ಸ್ಪರ್ಧೆ'

**ದಾವಣಗೆರೆ, ಮಾ. 24- ಕಲಾಕುಂಚ ಮಹಿಳಾ ವಿಭಾಗದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇದೇ ದಿನಾಂಕ 28 ರಂದು 'ದಾವಣಗೆರೆ ಗೃಹಿಣಿ ಸ್ಪರ್ಧೆ-2021' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದರು.**

**ಕುವೆಂಪು ಕನ್ನಡ ಭವನದಲ್ಲಿ ಬೆಳಿಗ್ಗೆ 10.35ಕ್ಕೆ ನಡೆಯಲಿರುವ ಈ ಸಮಾರಂಭದ ಉದ್ಘಾಟನೆಯನ್ನು ಗದಗ ಜಿಲ್ಲೆ ಮುಂಡರಗಿಯ ಈಶ್ವರಿ ಮಹಿಳಾ ಫೌಂಡೇಶನ್‌ನ ಸಂಸ್ಥಾಪಕರಾದ ಶ್ರೀಮತಿ ಪ್ರಭಾವತಿ ವಿಶ್ವನಾಥ್ ಬೆಳವಣಕಿಮಠ ನೆರವೇರಿಸಲಿದ್ದಾರೆ ಎಂದರು. ಸಂಜೆ 5 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಗಳು, 6 ಗಂಟೆಗೆ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ನೀಡಿ ಗೌರವಿಸಲಾಗುವುದು ಎಂದರು.**

# ಕ.ಸಾ.ಪ. ಚುನಾವಣೆ ಜಿಲ್ಲೆಯ ಎಲ್ಲಾ ಹೋಬಳಿ ಕೇಂದ್ರಗಳಲ್ಲಿ ನಡೆಯುವಂತಾಗಲಿ



ದಾವಣಗೆರೆ, ಮಾ.24- ಇದೇ ಮೇ 9 ರಂದು ಕನ್ನಡ ಸಾಹಿತ್ಯ ಪರಿಷತ್ತಿಗೆ ಚುನಾವಣೆ ನಡೆಯುತ್ತಿದ್ದು, ಪ್ರತಿ ಹೋಬಳಿಗೆ ಮತಗಟ್ಟೆ ಸ್ಥಾಪಿಸುವಂತೆ ಬಿ. ವಾಮದೇವಪ್ಪ ಅವರು ರಾಜ್ಯ ಚುನಾವಣಾಧಿಕಾರಿಗಳಿಗೆ ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 10946 ಮತದಾರರಿದ್ದಾರೆ. ಈ ಎಲ್ಲಾ ಮತದಾರರು ತಾಲ್ಲೂಕು ಕೇಂದ್ರಗಳಿಗೆ ಹೋಗಿ ಮತದಾನ ಮಾಡುವುದು ಕಷ್ಟಸಾಧ್ಯವಾದ ಕೆಲಸವಾಗುತ್ತದೆ ಎಂದು ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿರುವ ಬಿ. ವಾಮದೇವಪ್ಪ ಹೇಳಿದ್ದಾರೆ.

# ರಾಷ್ಟ್ರ ಮಟ್ಟದ ರೋಲರ್ ಸ್ಕೇಟಿಂಗ್‌ಗೆ ರಾಜ್ಯದಿಂದ ಮಧು ಎ.ಜಿ. ಆಯ್ಕೆ



ದಾವಣಗೆರೆ, ಮಾ. 24- ಈಚೆಗೆ ಮೈಸೂರಿನಲ್ಲಿ ನಡೆದ 36ನೇ ರಾಜ್ಯಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಮಧು ಎ.ಜಿ. ಮಾಸ್ಟರ್ ವಿಭಾಗದಲ್ಲಿ ಭಾಗವಹಿಸಿ 1 ಚಿನ್ನ ಮತ್ತು 1 ಬೆಳ್ಳಿಯ ಪದಕ ಪಡೆದು ರಾಷ್ಟ್ರಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್ ಶಿಪ್‌ಗೆ ಆಯ್ಕೆಯಾಗಿದ್ದಾರೆ.

ಮಧು ಎ.ಜಿ. ಇವರು ನಗರದ ರಸಗೊಬ್ಬರದ ವ್ಯಾಪಾರಿ ಅಣಬೇರು ಗಂಗಾಧರ ಇವರ ಪುತ್ರರಾಗಿದ್ದು, ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದಾರೆ.

ಮಧು, ಇದೇ ತಿಂಗಳು 31 ರಿಂದ ಏಪ್ರಿಲ್ 10 ರವರೆಗೆ ಚಂಡೀಘಡದ ಮೊಹಾಲಿಯಲ್ಲಿ ನಡೆಯಲಿರುವ 58ನೇ ರಾಷ್ಟ್ರಮಟ್ಟದ ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸುತಿದ್ದಾರೆ. ಈ ಹಿಂದೆ 2006ರಲ್ಲಿ ಸೌತ್ ಕೊರಿಯಾದಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ವರ್ಲ್ಡ್ ಸ್ಪೀಡ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆ ಪಡೆದು ಭಾರತವನ್ನು ಪ್ರತಿನಿಧಿಸಿದ್ದರು.

## ರಾಜ್ಯ - ರಾಷ್ಟ್ರೀಯ ವಾರ್ತೆ

# ರಾಜ್ಯದ 6 ಕೋಟಿ ಜನರಿಗೆ ಲಸಿಕೆ: ಕುಮಾರಸ್ವಾಮಿ ಒತ್ತಾಯ

ಬೆಂಗಳೂರು, ಮಾ. 24 - ಕೊರೊನಾ ಎರಡನೇ ಅಲೆ ಹರಡುವ ಆತಂಕ ಎದುರಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ರಾಜ್ಯದ 6 ಕೋಟಿ ಜನರಿಗೂ ಕೊರೊನಾ ಸೋಂಕು ತಡೆ ಲಸಿಕೆ ನೀಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ ನಾನು ಕೊರೊನಾ ಲಸಿಕೆ ತೆಗೆದುಕೊಂಡಿದ್ದೇನೆ, ಜನರು ಆತಂಕ ಪಡುವ ಅಗತ್ಯವಿಲ್ಲ ಎಂದರು. ಸರ್ಕಾರ 45 ವರ್ಷ ಮೇಲ್ಪಟ್ಟವರಿಗೆ ಮಾತ್ರ ಲಸಿಕೆ ಹಾಕುವುದಾಗಿ ಹೇಳುತ್ತಿದೆ, ಸಣ್ಣ ಮಕ್ಕಳಿಗೂ ರೋಗ ಬರುವ ಸಾಧ್ಯತೆ ಇರುವುದರಿಂದ ಪೋಲಿಯೋ ಮಾದರಿಯಲ್ಲಿ ಕೋವಿಡ್ ಲಸಿಕೆಯನ್ನು ಕುಟುಂಬದ ಎಲ್ಲ ಸದಸ್ಯರಿಗೂ 15 ದಿನಗಳಲ್ಲಿ ನೀಡಬೇಕು.

ಈ ಕಾರ್ಯಕ್ಕೆ ಸುಮಾರು 1,000 ಕೋಟಿ ರೂ. ಖರ್ಚಾಗಬಹುದು, ಇದರಿಂದ ಆರೋಗ್ಯವಂತರು ರೋಗಕ್ಕೆ ತುತ್ತಾಗುವುದನ್ನು ತಪ್ಪಿಸಬಹುದು ಎಂದರು.

ವಿಧಾನಮಂಡಲದ ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗುತ್ತಿಲ್ಲ, ಈ ಕಾರಣದಿಂದ ಅಧಿವೇಶನದಲ್ಲಿ ತಾವು ಭಾಗವಹಿಸಲಿಲ್ಲ.

ಸದನದಲ್ಲಿ ಜನರ ಸಮಸ್ಯೆಗಳಿಗಿಂತ ಬೇರೆ ವಿಷಯಗಳ ಚರ್ಚೆಯೇ ಆಗುತ್ತಿದೆ, ವಿರೋಧ ಪಕ್ಷದ ನಾಯಕರು ಬಜೆಟ್ ಮೇಲಿನ ಚರ್ಚೆ ಸಂದರ್ಭದಲ್ಲಿ ಬಟ್ಟೆ ಖರೀದಿ ವಿಚಾರ, ಚುನಾವಣೆಯ ಸೋಲು-ಗೆಲುವಿನ ವಿಚಾರದ ಬಗ್ಗೆ ಚರ್ಚೆ ಮಾಡಿದ್ದಾರೆ ಎಂದವರು ಇದೇ ಸಂದರ್ಭದಲ್ಲಿ ಟೀಕಿಸಿದ್ದಾರೆ.

ಕೆಪಿಎಸ್‌ಸಿ ಅಕ್ರಮ, ಬೆಂಗಳೂರಿನಲ್ಲಿ ಭೂ ಕಬಳಿಕೆ, ರಾಮನಗರದಲ್ಲಿ ರೇಷ್ಮೆಗೂಡು ಮಾರುಕಟ್ಟೆ ಅಧಿಕಾರಿಯೊಬ್ಬರು ಎರಡೂವರೆ ಕೋಟಿ ರೂ. ದುರ್ಬಳಕೆ ಮಾಡಿಕೊಂಡಿರುವ ಆರೋಪದ ಬಗ್ಗೆ ಚರ್ಚೆಯಾಗಬೇಕಿತ್ತು.

ಆಸ್ಪತ್ರೆ ವೆಚ್ಚ, ಶಾಲಾ-ಕಾಲೇಜು ಶುಲ್ಕ ಪಾವತಿಸಲಾಗದೆ ಜನರು ಪರಿತಪಿಸುತ್ತಿದ್ದಾರೆ, ಸದನದಲ್ಲಿ ಈ ಸಮಸ್ಯೆಗಳ ಚರ್ಚೆಗೆ ಆದ್ಯತೆ ನೀಡಬೇಕಿತ್ತು. ಬದಲಿಗೆ ಸಿ.ಡಿ. ವಿಚಾರವಾಗಿ ಧರಣಿ ನಡೆಯುತ್ತಿದೆ, ಭೂಮಿ ಮೇಲೆ ಹುಟ್ಟಿದ ಪ್ರತಿ ಜೀವಿಗೂ ಭಗವಂತ ಸಹಜ ಪ್ರಕ್ರಿಯೆ ಕೊಟ್ಟಿರುತ್ತಾನೆ, ಯಾರೂ ಸತ್ಯಹರಿಶ್ಚಂದ್ರರಲ್ಲ, ಎಲ್ಲರ ಮನೆ ದೋಸೆಯೂ ತೂತು ಎಂದು ಬಣ್ಣಿಸಿದರು.

# ಶಾಸಕರ 'ಏಕಪತ್ನಿತ್ವ' ಪ್ರಶ್ನಿಸಿದ ಸುಧಾಕರ್ ರಾಜೀನಾಮೆ ಆಗ್ರಹ

ಬೆಂಗಳೂರು, ಮಾ. 24 - ವಿಧಾನಸಭೆಯ 225 ಸದಸ್ಯರು ಏಕಪತ್ನಿ ವ್ರತಸ್ಥರೇ ಎಂಬುದಾಗಿ ಹೇಳಿಕೆ ನೀಡಿದ್ದ ಸಚಿವ ಡಾ.ಕೆ. ಸುಧಾಕರ್ ಪ್ರತಿಪಕ್ಷಗಳ ತೀವ್ರ ಆಕ್ರೋಶಕ್ಕೆ ಗುರಿಯಾಗಿದ್ದಲ್ಲದೇ, ಅವರು ರಾಜೀನಾಮೆ ನೀಡಬೇಕೆಂಬ ಒತ್ತಾಯವೂ ಕೇಳಿ ಬಂತು.

ವಿಧಾನಸಭೆಯ ಮಧ್ಯಾಹ್ನದ ಕಲಾಪ ಆರಂಭವಾಗುತ್ತಿದ್ದಂತೆ, ಕಾಂಗ್ರೆಸ್‌ನ ಹಿರಿಯ ಸದಸ್ಯ ಆರ್.ವಿ. ದೇಶಪಾಂಡೆ, ಸಚಿವ ಡಾ. ಸುಧಾಕರ್ ಹೇಳಿಕೆಯನ್ನು ತೀವ್ರವಾಗಿ ಟೀಕಿಸಿದ್ದಲ್ಲದೆ, ತಮ್ಮ 32 ವರ್ಷಗಳ ಶಾಸನ ಸಭೆಯ ಸದಸ್ಯತ್ವದ ಇತಿಹಾಸದಲ್ಲೇ ಸಚಿವರೊಬ್ಬರು ಇಂತಹ ಮಟ್ಟಕ್ಕೆ ಇಳಿದಿದ್ದನ್ನು ನೋಡಿರಲಿಲ್ಲ.

ಸದನದ ಹೆಣ್ಣು ಮಕ್ಕಳ ಬಗೆಗೂ ಈ ಹೇಳಿಕೆ ಅನ್ವಯವಾಗುತ್ತದೆ ಎನ್ನುತ್ತಿದ್ದಂತೆ, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ನಮ್ಮ 225 ಸದಸ್ಯರ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ, ಈ ಬಗ್ಗೆ ತನಿಖೆ ಆಗಬೇಕು ಎಂದು ಒತ್ತಾಯಿಸಿದರು.

ನಾನೂ ಸೇರಿದಂತೆ ಸದನದ ನಾಲ್ಕು ಮಂದಿ ಹೆಸರನ್ನು ಪ್ರಸ್ತಾಪಿಸಿದ್ದಾರೆ, ಇದು ಹಕ್ಕುಬಾಧ್ಯತಾ ವಿಷಯ ಆಗುತ್ತದೆ, ತಕ್ಷಣವೇ ಅವರ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದರು.

ಮಧ್ಯ ಪ್ರವೇಶಿಸಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಡಾ. ಸುಧಾಕರ್ ಹೇಳಿಕೆಗೂ, ಸರ್ಕಾರಕ್ಕೂ ಸಂಬಂಧ ಇಲ್ಲ. ಅವರು ಸದನದ ಹೊರಗೆ ಹೇಳಿಕೆ ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಸದನದ ಯಾವುದೇ ಸದಸ್ಯರು, ಸದನ ಮತ್ತು ಸದಸ್ಯರ ಗೌರವಕ್ಕೆ ಚ್ಯುತಿ ಬರದಂತೆ ನಡೆದುಕೊಳ್ಳಬೇಕು, ಸಚಿವರೊಬ್ಬರು ಆವೇಶದಿಂದ ಹಗುರವಾಗಿ ಮಾತನಾಡಿದ್ದಾರೆ ಎಂಬುದಾಗಿ ಕೇಳಿದ್ದೇನೆ, ಸದನದ ಎಲ್ಲಾ ಸದಸ್ಯರ ರಕ್ಷಣೆ ನನ್ನ ಮೇಲಿದೆ, ಇದನ್ನು ಅರ್ಥ ಮಾಡಿಕೊಂಡು ಸದಸ್ಯರು ನಡೆದುಕೊಳ್ಳಬೇಕು ಎಂದು ಹೇಳಿ, ಪ್ರತಿಪಕ್ಷಕ್ಕೆ ಹೆಚ್ಚು ಮಾತನಾಡಲು ಅವಕಾಶ ನೀಡದೆ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

# ದುಪ್ಪಟ್ಟು ಮ್ಯುಟೇಟ್ ಆದ ಕೊರೊನಾ ಪತ್ತೆ

ನವದೆಹಲಿ, ಮಾ. 24 – ದೇಶದ 18 ರಾಜ್ಯಗಳಲ್ಲಿ ಹೊಸ ರೀತಿಯ ದುಪ್ಪಟ್ಟು ಮ್ಯುಟೇಟ್ ಆಗಿರುವ ಕೊರೊನಾ ವೈರಸ್ ಪತ್ತೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆಯಾದರೂ, ದೇಶದಲ್ಲಿ ವೈರಸ್ ಹರಡುವಿಕೆ ಹೆಚ್ಚಾಗಲು ಇದೇ ಕಾರಣ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ ಎಂದು ತಿಳಿಸಿದೆ.

ದುಪ್ಪಟ್ಟು ಮ್ಯುಟೇಟ್ ಆಗಿರುವ ವೈರಸ್ ಅನ್ನು ಸಾರ್ಸ್ - ಸಿಒವಿ - 2 ಕನ್ಸೋರ್ಟಿಯ್ ಆನ್ ಜಿನೆಮಿಕ್ಸ್ ಪತ್ತೆ ಮಾಡಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇತ್ತೀಚೆಗೆ ಪರೀಕ್ಷೆ ಮಾಡಲಾದ ಕೊರೊನಾ ವೈರಸ್ ಮಾದರಿಗಳಲ್ಲಿ ಶೇ.15-20ರಷ್ಟು ಹಿಂದಿನ ಮಾದರಿಗಳಿಗೆ ಹೋಲುತ್ತಿಲ್ಲ ಎಂದು ತಿಳಿಸಲಾಗಿದೆ. ಈ ನಡುವೆ, ದೇಶದಲ್ಲಿ ಬುಧವಾರ ಒಂದೇ ದಿನ 47,262 ಸೋಂಕಿತರು ಪತ್ತೆಯಾಗಿದ್ದಾರೆ. ಇದರಿಂದಾಗಿ ಸಕ್ರಿಯ ಸೋಂಕಿತರ ಸಂಖ್ಯೆ 3.68 ಲಕ್ಷಕ್ಕೆ ಏರಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

# ಮಹಾರಾಷ್ಟ್ರ ಸಚಿವ ವಿರುದ್ಧದ ಸಿಂಗ್ ಆರೋಪ ಗಂಭೀರ : ಸುಪ್ರೀಂ

ನವದೆಹಲಿ ಮಾ. 24 – ಮುಂಬೈ ಪೊಲೀಸ್ ಮಾಜಿ ಮುಖ್ಯಸ್ಥ ಪರಮ್ ಬೀರ್ ಸಿಂಗ್ ಅವರು ಮಹಾರಾಷ್ಟ್ರ ಗೃಹ ಸಚಿವ ಅನಿಲ್ ದೇಶ್‌ಮುಖ್ ವಿರುದ್ಧ ಮಾಡಿರುವ ಆರೋಪಗಳು ಗಂಭೀರವಾಗಿವೆ. ಆದರೆ, ಈ ಬಗ್ಗೆ ಅವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬೇಕಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಪೊಲೀಸರು ಪ್ರತಿ ತಿಂಗಳು 100 ಕೋಟಿ ರೂ. ಹಣ ವಸೂಲಿ ಮಾಡಲು ಗೃಹ ಸಚಿವ ದೇಶಮುಖ್ ಸೂಚನೆ ನೀಡಿದ್ದಾರೆ. ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಪರಮ್ ಬೀರ್ ಸಿಂಗ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಈ ಅರ್ಜಿಯನ್ನು ವಾಪಸ್ ಪಡೆಯಲು ಸುಪ್ರೀಂ ಕೋರ್ಟ್ ಅವಕಾಶ ನೀಡಿದೆ.

ಅರ್ಜಿದಾರರು ಬಾಂಬೆ ಹೈಕೋರ್ಟ್‌ನಲ್ಲಿ ಈ ಬಗ್ಗೆ ಅರ್ಜಿ ಸಲ್ಲಿಸಬಹುದು ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಆರ್.ಎಸ್. ರೆಡ್ಡಿ ಅವರನ್ನು ಒಳಗೊಂಡ ಪೀಠ ಹೇಳಿದೆ.

# ಹಬ್ಬಗಳ ವೇಳೆ ಗುಂಪು ನಿಯಂತ್ರಣಕ್ಕೆ ಕೇಂದ್ರದ ಸೂಚನೆ

ನವದೆಹಲಿ, ಮಾ. 24 – ಕೊರೊನಾ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ಹಬ್ಬ – ಉತ್ಸವಗಳ ಸಂದರ್ಭದಲ್ಲಿ ಜನರು ಸೇರುವುದರ ಮೇಲೆ ನಿಯಂತ್ರಣ ಹೇರುವಂತೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ತಿಳಿಸಿದೆ.

ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಆರತಿ ಅಹುಜ, ಓಕಳಿ, ಶಬ್ ಎ ಬಾರಾತ್, ಬಿಹು ಈಸ್ಟರ್, ಈದ್ ಉಲ್ ಫಿತರ್ ಮುಂತಾದ ಹಬ್ಬಗಳು ಬರುತ್ತಿವೆ. ರಾಜ್ಯಗಳು ಈ ಸಂದರ್ಭಗಳಲ್ಲಿ ಹೆಚ್ಚು ಜನ ಸೇರದಂತೆ ನಿರ್ಬಂಧಿಸಬೇಕು ಎಂದು ತಿಳಿಸಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಹೋಟೆಲ್ ಬಾಡಿಗೆಗೆ ಬೇಕಾಗಿದೆ**
ದಾವಣಗೆರೆಯಲ್ಲಿ ರನ್ನಿಂಗ್ ಸ್ಥಿತಿಯಲ್ಲಿರುವ ಫರ್ನೀಚರ್ ಹೊಂದಿರುವ ಸಸ್ಯಹಾರಿ ಹೋಟೆಲ್ ಬಾಡಿಗೆಗೆ ಬೇಕಾಗಿದೆ. ಸಂಪರ್ಕಿಸಿ :
ಮೊ. : 90601 72745

**ಐನಳ್ಳಿ ದೈವೀಕ್**
ಕಾರ್ ಏಜೆಂಟ್, ದಾವಣಗೆರೆ.
ಎಲ್ಲಾ ಕಂಪನಿಯ ಕಾರುಗಳನ್ನು ನೇರ ಪಾರ್ಟಿಯಿಂದ ನೇರ ಕಸ್ಟಮರ್‌ಗೆ ಮಾರಿಸಿಕೊಡುತ್ತೇವೆ. ವಿಚಾರಿಸಿ :
ಮೊ. 99456 43223

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, ವಾಜಪೇಯಿ ಲೇ ಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x50 West, 30x55 East, 40x60 East, 30x40 West, 30x45 North East Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166-12110

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 98440-63409

**ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಎ' ಬ್ಲಾಕ್ ನಲ್ಲಿ 30x120 ಪಶ್ಚಿಮ
ಕುಂದುವಾಡ ಕೆರೆ ರಸ್ತೆ, ಬಂಟರ ಭವನ ಸಮೀಪ 30x50 ಪೂರ್ವ, 30x40 ದಕ್ಷಿಣ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421-44715

**ಗಾರ್ಡನ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ**
ಸಂಪರ್ಕಿಸಿ : ನೂತನ ಕಾಲೇಜ್,
6000/- ಸಂಬಳ
ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ
ಮೊ. : 97417 23358

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, ವಿವೇಕಾನಂದ ಬಡಾವಣೆಯಲ್ಲಿ 30x38 East, 30x38 ಅಕ್ಕಪಕ್ಕ, 30x50 North, 30x40 South, 40x84 North, 40x60 North
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166-12110

**ಸೈಟುಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ 60×40 North, 30×50 North, 40×56 South, 50×50 West, 40x60 North ಸೆಮಿ ಕಮರ್ಷಿಯಲ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166-12110

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ, 4ನೇ ಮೇನ್, 3ನೇ ಕ್ರಾಸ್, ಐಟಿಐ ಕಾಲೇಜು ಎದುರು ರೋಡ್, ಮೊದಲನೇ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ.
ಮೊ. : 94814 52642

**ಮನೆ ಮತ್ತು ರೂಂ ಬಾಡಿಗೆಗೆ**
ಫಸ್ಟ್ ಫ್ಲೋರ್‌ನಲ್ಲಿ 2 BHK, ಮುನ್ಸಿಪಲ್ ಮತ್ತು ಬೋರ್ ನೀರಿನ ವ್ಯವಸ್ಥೆ ಇರುವ ಮನೆ ಮತ್ತು ವಿದ್ಯಾರ್ಥಿಗಳಿಗೆ 1 ರೂಂ (#1926A/3) ತರಳಬಾಳು ಬಡಾವಣೆ (ವಿದ್ಯಾನಗರ), 1st ಬಸ್ ಸ್ಟಾಪ್, ಕಾಫಿ ಡೇ ಹಿಂಭಾಗ ಬಾಡಿಗೆಗಿದೆ. ಸಂಪರ್ಕಿಸಿ:
99019 03072

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೆಕ್ಯೂರಿಟಿ ಸೂಪರ್‌ವೈಜರ್‌ಗಳು ಕೆಲಸಕ್ಕೆ ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ :
NDF Security Solutions India Pvt Ltd
ಕುರುಬರ ಹಾಸ್ಟೆಲ್, ಜಯದೇವ ಸರ್ಕಲ್, ದಾವಣಗೆರೆ-2.
98448 08903, 96631 43409

**ಮನೆ ಮಾರಾಟಕ್ಕಿದೆ**
ಸರಸ್ವತಿ ಬಡಾವಣೆಯಲ್ಲಿ ತುಳಸಿ ಆಯುರ್ವೇದಾಲಯದ ಹತ್ತಿರ 20x30 ಅಳತೆಯುಳ್ಳ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
90198 88512
97405 93969

**ಮನೆ ಬಾಡಿಗೆಗೆ ಇದೆ**
4ನೇ ಮೇನ್, 12ನೇ ಕ್ರಾಸ್, ಎಸ್.ಎಸ್. ಲೇ ಔಟ್, 'ಬಿ' ಬ್ಲಾಕ್, ದಾವಣಗೆರೆ.
99804 46822

**COMMERCIAL SPACE FOR RENT**
1st, 2nd and 3rd floor, New Building, LIFT Installed, Good 45ft exposure to main road. Beside Royal Enfield showroom, Hadadi Main Road, Davangere.
8660214677

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ANM, GNM ಹಾಗೂ ಆಯಾ ಬೇಕಾಗಿದ್ದಾರೆ. ತಮ್ಮ ಬಯೋಡಾಟಾದೊಂದಿಗೆ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಿರಿ
98450 35710, 99024 52312
ಡಾ. ಎಂ.ಎಸ್. ಹಿರೇಮಠ್

**ಜಾಗ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 3ನೇ ಮುಖ್ಯರಸ್ತೆ, ಚೇತನ ಹೋಟೆಲ್ ಹತ್ತಿರ, 80×30 ಅಡಿ ಅಳತೆಯ ಜಾಗ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
ಮೊ. : 97310 55765

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 82173 52453

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಬೇಕಾಗಿದ್ದಾರೆ**
ಸೈಂಟಿಫಿಕ್ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
1) ಸೇಲ್ಸ್ / ಆರ್ಡರ್ ಬುಕ್ಕಿಂಗ್ ಗೆ - 02
2) Tally ಬಿಲ್ಲಿಂಗ್ ಗೊತ್ತಿರುವವರು - 02
ಕೆಲಸದಲ್ಲಿ ಅನುಭವವಿರುವವರಿಗೆ ಆದ್ಯತೆ
ವಿಶ್ವಾಸ್ ಸೈಂಟಿಫಿಕ್ ಕಂ.
ಹದಡಿ ರಸ್ತೆ, ದಾವಣಗೆರೆ
9620586349

**ಬೇಕಾಗಿದ್ದಾರೆ**
ಬೇಕರಿಯಲ್ಲಿ ಕೌಂಟರ್‌ನಲ್ಲಿ ಕೆಲಸ ಮಾಡಲು SSLC/PUC ಆಗಿರುವ ಹುಡುಗರು ಪಾರ್ಟ್‌ಟೈಮ್/ಫುಲ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ
99002 65620

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗರು/ಹುಡುಗಿಯರು ತಕ್ಷಣ ಬೇಕಾಗಿದ್ದಾರೆ.
94803 43063

**ಮನೆ ಬಾಡಿಗೆಗೆ ಇದೆ**
#3367/49, ಶಾಮನೂರು ರಸ್ತೆ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ಪೆಟ್ರೋಲ್ ಬಂಕ್ ಎದುರು ಗ್ರೌಂಡ್ ಫ್ಲೋರ್ 2 ಬೆಡ್ ರೂಂ ಮನೆ, ಕಾರ್ ಪಾರ್ಕಿಂಗ್ ಇದೆ ಮತ್ತು ಎರಡನೇ ಮಹಡಿಯಲ್ಲಿ ಅಟ್ಯಾಚ್ ಬಾತ್‌ರೂಂ ಇರುವ ರೂಂ ಸಹ ಬಾಡಿಗೆಗೆ ಇದೆ.
94487 58967

**ಬೇಕಾಗಿದ್ದಾರೆ**
ಹೆಲ್ಪರ್ಸ್/ಸೇಲ್ಸ್‌ಗೆ ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ನಾಗಣೇಚಿ ಕಟ್ ಫೀಸ್ ಸೆಂಟರ್
#19/1, ಕಾಳಿಕಾದೇವಿ ರೋಡ್, ದಾವಣಗೆರೆ-1.
81055 53341

**GROUND FLOOR SPACE FOR RENT**
Suitable for Office/Clinic Behind Vishweshwariah Park, 4th Main, 9th Cross, P.J. Extension, Davangere.
Mob. : 97429 75764
98862 35516

**ಕೆಲಸಕ್ಕೆ ಬೇಕಾಗಿದ್ದಾರೆ**
ಪಿ.ಯು.ಸಿ ಓದಿರುವ ಹುಡುಗರು ಮಾರ್ಕೆಟಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ
90192 68891
89513 97381

**ಬೇಕಾಗಿದ್ದಾರೆ**
ಜ್ಯೋತಿ ಎಲೆಕ್ಟ್ರಿಕಲ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಎಸ್.ಎಸ್. ಎಲ್. ಸಿ ಪಾಸ್/ಫೇಲ್. ಸಂಪರ್ಕಿಸಿ :
98452 62192

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಜಗಳೂರಿನಲ್ಲಿ ಜಮೀನು ಬೇಕಾಗಿದೆ**
ಜಗಳೂರು ಅಕ್ಕಪಕ್ಕದಲ್ಲಿ ಜಮೀನು (ಹೊಲ) ಬೇಕಾಗಿದೆ. ಸಂಪರ್ಕಿಸಿ :
ಮೊ. : 99643 99129

**ಸೈಟ್/ಮನೆ ಮಾರಾಟಕ್ಕೆ ಬಾಡಿಗೆಗೆ / ಲೀಸ್‌ಗೆ**
ಜಯನಗರದಲ್ಲಿ 20x30 Duplex, ಪೂರ್ವ ಬಾಗಿಲಿನ ದೂಡಾ ಅಪ್ರೂವ್ಡ್ ಮನೆ ಮತ್ತು KHBನಲ್ಲಿ 30x40 ಪಶ್ಚಿಮ ಸೈಟ್ ಮಾರಾಟಕ್ಕೆ, ಜಯನಗರದಲ್ಲಿ 1BHK, 2BHK ಮತ್ತು 3 BHK ಮನೆ ಬಾಡಿಗೆಗೆ/ಲೀಸ್‌ಗೆ ಇವೆ.
80505 33389, 90354 85198

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಚಲೋ ಪ್ರತಿಷ್ಠಿತ ಕಂಪನಿಗೆ ಪ್ರಮೋಟರ್ಸ್ ಹಾಗೂ ಎಕ್ಸಿಕ್ಯೂಟಿವ್ ಹುದ್ದೆಗೆ ಪಿಯುಸಿ/ಡಿಗ್ರಿ ಆದವರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. (ಪುರುಷರಿಗೆ ಮತ್ತು ಮಹಿಳೆಯರಿಗೆ ಆದ್ಯತೆ) ಬಯೋಡೇಟಾದೊಂದಿಗೆ ಸಂಪರ್ಕಿಸುವ ಸಮಯ : ಬೆಳಿಗ್ಗೆ : 10 ರಿಂದ ಸಂಜೆ 5ರವರೆಗೆ.
96068 18611

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**2 BHK ಮನೆ ಬಾಡಿಗೆಗೆ ಇದೆ**
ಪೂರ್ವ ಬಾಗಿಲು, ದಕ್ಷಿಣಕ್ಕೆ ರಸ್ತೆ, ಅಶೋಕ ನಗರ, 1ನೇ ಕ್ರಾಸ್, ಬಲಭಾಗ ಯರಗುಂಟಿ, ಹೆಚ್.ಪಿ ಗ್ಯಾಸ್ ಗೋಡೌನ್ ಎದುರು, ಕೊಂಡಜ್ಜಿ ರಸ್ತೆ, ದಾವಣಗೆರೆ.
ಮೊ: 88841 67704

**ಸೈಟ್ ಮಾರಾಟಕ್ಕಿವೆ**
ಬಿಸ್ಮಿಲ್ಲಾ ಲೇಔಟ್ 15x45 ಉತ್ತರ, ಮಹಾಲಕ್ಷ್ಮಿ ಲೇಔಟ್ 30x40 ದಕ್ಷಿಣ, ಬಸವೇಶ್ವರ ಲೇಔಟ್ 40x60 ದಕ್ಷಿಣ
86181 82332

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

# ರಂಭಾಪುರಿ ಪೀಠದಲ್ಲಿ ಇಂದಿನಿಂದ ಜಗದ್ಗುರು ರೇಣುಕಾಚಾರ್ಯರ ಯುಗಮಾನೋತ್ಸವ


ಕರ್ನಾಟಕದ ಮಲಯಾಚಲ ತಪೋಭೂಮಿ ಸೃಷ್ಟಿ ಸೌಂದರ್ಯದ ಮಡಿಲಿನಲ್ಲಿ ಕಣ್ಮನಗಳಿಗೆ ಆನಂದವನ್ನುಂಟು ಮಾಡುವ, ಮನಸ್ಸಿಗೆ ದಿವ್ಯವಾದ ಶಾಂತಿಯನ್ನು ಕರುಣಿಸುವ ಆಕರ್ಷಕ ಪ್ರವಾಸಿ ತಾಣವಾಗಿ ಜ್ಞಾನ ಗಂಗೋತ್ರಿಯಾಗಿ ನೆಲೆನಿಂತ ಪುಣ್ಯಸ್ಥಳವೇ ಬಾಳೆಹೊನ್ನೂರಿನ ಶ್ರೀರಂಭಾಪುರಿ ವೀರಸಿಂಹಾಸನ ಮಹಾಪೀಠ.

ಭೂಲೋಕದಲ್ಲಿ ಧರ್ಮದ ಅವನತಿಯಾದಾಗ ಧರ್ಮದ ಅಭ್ಯುದಯಕ್ಕಾಗಿ - ಲೋಕ ಕಲ್ಯಾಣಾರ್ಥವಾಗಿ ನಿರ್ಗುಣ, ನಿರಾಕಾರನಾದ ಪರಶಿವನು ದಿವ್ಯ ಪರಂಜ್ಯೋತಿಯಾಗಿ ಪ್ರಕಟವಾಗುವುದನ್ನೇ ಅವತಾರವೆನ್ನುತ್ತಾರೆ.

ಇಹ - ಪರಗಳ ಸುಖ ಸಾಧನೆಯೇ ಧರ್ಮದ ಪರಮ ಗುರಿಯಾಗಿದ್ದು, ಆ ಸುಖಗಳನ್ನು ಮನುಜ ಸುಲಭ ಮಾರ್ಗದಲ್ಲಿ ಸಂಪಾದಿಸಲು ಹಾಗೂ" ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ "ತತ್ವದ ಮೂಲಕ ಸನಾತನ ಧರ್ಮದ ಪುನರುತ್ಥಾನಕ್ಕಾಗಿ ಅಲ್ಲದೇ ಭಾರತದ ಸಮಗ್ರತೆಯನ್ನು ನಿರಾತಂಕವಾಗಿ ಮುನ್ನಡೆಸಲು ಪರಶಿವನ ಪಂಚಮುಖಗಳಿಂದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಅವತರಿಸಿ ವೀರಶೈವ ಧರ್ಮವನ್ನು ಸಂಸ್ಥಾಪಿಸಿದರು.

ಆಂಧ್ರಪ್ರದೇಶ - ತೆಲಂಗಾಣದ ಶ್ರೀ ಕೊಲ್ಲಿಪಾಕಿ ಸುಕ್ಷೇತ್ರದಲ್ಲಿ ಪರಶಿವನ ಸದ್ಯೋಜಾತಮುಖ ಶ್ರೀ ಸೋಮೇಶ್ವರ ಮಹಾಲಿಂಗದಿಂದ ಪ್ರಾದುರ್ಭವಿಸಿದ ಆದಿ ಜಗದ್ಗುರು ರೇಣುಕಾಚಾರ್ಯರು ಭೂಲೋಕದಲ್ಲಿ ತಮ್ಮ ಲೀಲೆಗಳ ಮೂಲಕ ಧಾರ್ಮಿಕ - ಸಾಮಾಜಿಕ ಸತ್ಕ್ರಾಂತಿಗಳನ್ನು ಮಾಡುತ್ತಾ ಜಗವ ಜಾಗೃತಗೊಳಿಸುತ್ತಾ, ದ್ವಾಪರ ಯುಗದಲ್ಲಿ ಮಹಾಮುನಿ ಅಗಸ್ತ್ಯರಿಗೆ ವೀರಶೈವ ಸಿದ್ಧಾಂತವನ್ನು ಅರುಹಿ ಬಾಳೆಹೊನ್ನೂರಿನ ಭದ್ರಾ ನದಿ ತಟದಲ್ಲಿ ಶ್ರೀ ಜಗದ್ಗುರು ವೀರಸಿಂಹಾಸನ ಮಹಾಪೀಠವನ್ನು ಸಂಸ್ಥಾಪಿಸಿ ಆದರ್ಶ ಪರಂಪರೆಯ ಪರಮಾಚಾರ್ಯರನ್ನು ಅನುಗ್ರಹಿಸಿದ ಕೀರ್ತಿ ಆದಿ ರೇಣುಕರದ್ದಾಗಿದೆ.

ಶ್ರೀ ಜಗದ್ಗುರು ರೇಣುಕರು ಮಾಡಿದ ಪವಾಡ, ತೋರಿದ ಲೀಲೆಗಳು ಅನಂತ. ಅದರಲ್ಲಿ ತ್ರಿಕೋಟಿ ಲಿಂಗ ಸ್ಥಾಪನೆಯೂ ಒಂದಾಗಿದೆ. ದ್ವಾಪರ ಯುಗದಲ್ಲಿ ರಾವಣನು ನವಕೋಟಿ ಲಿಂಗಗಳನ್ನು ಪ್ರತಿಷ್ಠಾಪಿಸುವ ಮಹಾಸಂಕಲ್ಪ ಹೊಂದಿದವನಾಗಿದ್ದು ಆರು ಕೋಟಿ ಲಿಂಗ ಸ್ಥಾಪಿಸಿ ಉಳಿದ ತ್ರಿಕೋಟಿ ಲಿಂಗ ಸ್ಥಾಪನೆಯು ನೆರವೇರದಿದ್ದಾಗ ಯುದ್ಧ ಭೂಮಿಯಲ್ಲಿ ಶ್ರೀರಾಮಚಂದ್ರನಿಂದ ಮರಣಾವಸ್ಥೆಯಲ್ಲಿದ್ದ ಸಂದರ್ಭದಲ್ಲಿ ಉಳಿದ ತ್ರಿಕೋಟಿ ಲಿಂಗ ಸ್ಥಾಪನೆಯ ಕಾರ್ಯವನ್ನು ಪೂರ್ಣಗೊಳಿಸಲು ತನ್ನ ಸಹೋದರ ವಿಭೀಷಣನಿಗೆ ನೀಡಿದ ಕೋರಿಕೆಯಂತೆ ಕ್ಷಣಮಾತ್ರದಲ್ಲಿ ಗಗನ ಮಾರ್ಗದಲ್ಲಿ ಸಂಚರಿಸುತ್ತಿದ್ದ ಶ್ರೀ ರೇಣುಕರು ಶ್ರೀಲಂಕಾದಲ್ಲಿ ಏಕಕಾಲದಲ್ಲಿ ತ್ರಿಕೋಟಿ ಗುರು ರೂಪ ಧರಿಸಿ ತ್ರಿಕೋಟಿ ಲಿಂಗ ಸ್ಥಾಪನೆ ಮಾಡಿ ಘನಲೀಲೆಯನ್ನು ತೋರಿದ್ದಾರೆ. ಇದಕ್ಕೆ ಪೂರಕವೆಂಬಂತೆ ಶ್ರೀಲಂಕಾದ ಜಾಫ್ನಾ ಸಮೀಪದ "ಕಿರುಮಲೈ" ಎಂಬ ಗ್ರಾಮದಲ್ಲಿ ರೇಣುಕಾಶ್ರಮ ರೇಣುಕ ವನ ಮಠಗಳಿರುವ ಬಗ್ಗೆ ಖ್ಯಾತ ಸಂಶೋಧಕ ಡಾ. ಚಿದಾನಂದಮೂರ್ತಿಯವರು ಶೋಧಿಸಿ ಪ್ರಸ್ತಾಪಿಸಿದ ಅಧಿಕೃತ ನಿದರ್ಶನಗಳಿವೆ.



ಅಧರ್ಮದ ವಿರುದ್ಧ ಧರ್ಮದ ದಂಡಯಾತ್ರೆ ಕೈಗೊಂಡು ದೇಶದ ಮೂಲೆ ಮೂಲೆಗಳಲ್ಲಿ ಸಂಚರಿಸಿ ವೀರಶೈವ ಧರ್ಮ ಕೇಂದ್ರಗಳನ್ನು ಸ್ಥಾಪಿಸಿ ಭೂರುದ್ರ ಭಕ್ತ ಸಂಘಗಳನ್ನು ಸ್ಥಾಪಿಸಿದ್ದೂ ಅಲ್ಲದೇ ಕೊಲ್ಲಿಪಾಕಿಯ ಲಿಂಗೋದ್ಭವ ಶ್ರೀ ಸೋಮೇಶ್ವರ ದೇಗುಲದ ಪ್ರಾಂಗಣದಲ್ಲಿ ಹದಿನೆಂಟು ಮಠಗಳನ್ನು ಕಟ್ಟಿಸಿ ಸರ್ವ ಕುಲದವರಿಗೂ ಶ್ರೇಷ್ಠ ಶಿವಜ್ಞಾನ ಪಡೆಯಲು ಅಂದಿನ ಕಾಲದಲ್ಲೇ ಅನುವು ಮಾಡಿಕೊಡುವ ಮೂಲಕ ಸಮಾನತೆಯ ಸಂದೇಶ ಸಾರಿದ್ದಾರೆ.

ಜೀವಾತ್ಮನು ಶಿವನಲ್ಲಿ ಸಮರಸವಾಗುವ ಮಾರ್ಗವನ್ನು ಉಪದೇಶಿಸುವ ವೀರಶೈವ ದಾರ್ಶನಿಕ ಸಿದ್ಧಾಂತವನ್ನು "ಶಕ್ತಿ ವಿಶಿಷ್ಟಾದ್ವೈತ"ವೆಂದು ಕರೆಯಲಾಗುತ್ತದೆ. ಆದಿ ರೇಣುಕರು ಅಗಸ್ತ್ಯ ಮಹರ್ಷಿಗಳಿಗೆ ಅನುಗ್ರಹಿಸಿದ ಮಹಾ ಉಪದೇಶವನ್ನು ಶ್ರೀ ಶಿವಯೋಗಿ ಶಿವಾಚಾರ್ಯರು ಸಂಗ್ರಹಿಸಿ ಬರೆದ ಪವಿತ್ರ ಸಂಪುಟವೇ " ಸಿದ್ಧಾಂತ ಶಿಖಾಮಣಿ " ಎಂಬ ವೀರಶೈವ ಧರ್ಮದ ಸದ್ಗ್ರಂಥವಾಗಿ ಪ್ರಖ್ಯಾತಿಯನ್ನು ಪಡೆದಿದೆ.

ಸಹಸ್ರಾರು ವರ್ಷಗಳ ಮಹಾಪ್ರವಾಹದಲ್ಲಿ ಈ ಅಪೂರ್ವ ಅವಿಚ್ಛಿನ್ನ ಪರಂಪರೆಯ ಧರ್ಮಪೀಠವನ್ನು ಸಮರ್ಥವಾಗಿ ಮುನ್ನಡೆಯಿಸಿಕೊಂಡು ಬಂದಿರುವ ಕಲಿಯುಗದ ಪೂರ್ವಾಚಾರ್ಯರುಗಳಲ್ಲಿ ಲಿಂ. ಶ್ರೀ ಶಿವಾನಂದ ಜಗದ್ಗುರುಗಳು, ಲಿಂ. ಶ್ರೀ ವೀರ ಗಂಗಾಧರ ಜಗದ್ಗುರುಗಳು ಅಲ್ಲದೇ ಲಿಂ. ಶ್ರೀ ವೀರರುದ್ರಮುನಿ ಜಗದ್ಗುರುಗಳವರು ಮಾನವ ಧರ್ಮಕ್ಕೆ ಜಯವಾಗಲಿ। ಧರ್ಮದಿಂದಲೇ ವಿಶ್ವಕ್ಕೆ ಶಾಂತಿ। ಎಂಬ ಉದ್ಘೋಷದಂತೆ ಧಾರ್ಮಿಕ ಮಹಾವಿಪ್ಲವ ನಡೆಯುತ್ತಿದ್ದ ಕಾಲದಲ್ಲೂ ತಮ್ಮ ಜ್ಞಾನ ಮತ್ತು ಘೋರ ತಪಸ್ಸುಗಳಿಂದ ಪೂಜ್ಯ ತೇಜೋಮೂರ್ತಿಗಳವರು ಮಾಡಿದ ಸತ್ಕಾರ್ಯ ತಾಳಿದ ದೃಢ ನಿರ್ಧಾರಗಳು ಅದ್ವಿತೀಯ - ಅವಿಸ್ಮರಣೀಯ.

ಈ ಹಿಂದಿನ ಪೂರ್ವಾಚಾರ್ಯರ ಕರ್ತೃತ್ವ ಶಕ್ತಿ - ತಪಃ ಶಕ್ತಿಯ ಫಲವಾಗಿ ಶ್ರೀ ರಂಭಾಪುರಿ ವೀರಸಿಂಹಾಸನದ ವೀರ ಪೀಠದ ಒಡೆಯರಾಗಿ ಪೀಠಾರೋಹಣ ಹೊಂದಿರುವ ಜ್ಞಾನ, ತಪಸ್ಸು, ನೈತಿಕತೆ, ಆದರ್ಶ ಮೌಲ್ಯಗಳ ಪ್ರತಿಪಾದನೆ - ಪರಂಪರೆ ನಿಯಮ ಪಾಲನೆಗೆ ಹೆಸರಾದಂತವರು ಹಾಗೂ 'ಜಗದ್ಗುರು' ಎಂಬ ಶಬ್ಧಕ್ಕೆ ಸಾರ್ಥಕತೆಯನ್ನು ತಂದು ಕೊಟ್ಟಿರುವ ಪ್ರಸ್ತುತ ಜಗದ್ಗುರುಗಳಾದ ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದಂಗಳವರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆ ಮಾಡುತ್ತಿದ್ದಾರೆ. ಆದಿ ರೇಣುಕರು ಅವತರಿಸಿದ ಪವಿತ್ರ ದಿನ ಫಾಲ್ಗುಣ ಶುದ್ಧ ತ್ರಯೋದಶಿಯಾಗಿದ್ದು ದಿನಾಂಕ 26 - 03 - 2021 ನೇ ಶುಕ್ರವಾರ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವ ಅಲ್ಲದೇ ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ. ಈ ನಿಮಿತ್ತ ಶ್ರೀ ಪೀಠದ ಪರಿಸರದಲ್ಲಿ ದಿನಾಂಕ 25.03.2021 ರಿಂದ 30. 03.2021 ರವರೆಗೆ ಕಾರ್ಯಕ್ರಮಗಳು ಜರುಗಲಿವೆ.

**-ಶ್ರೀಮಲ್ಲಿಕಾರ್ಜುನ ಸ್ವಾಮಿ ಕಲ್ಮಠ, ಚಿರಸ್ತಹಳ್ಳಿ.**

## 27, 28 ರಂದು ಶಿವಸಂಚಾರ ಕಲಾ ತಂಡದಿಂದ ನಾಟಕ ಪ್ರದರ್ಶನ

ದಾವಣಗೆರೆ, ಮಾ.24- ತರಳಬಾಳು ಬಡಾವಣೆಯಲ್ಲಿನ ಶ್ರೀ ಶಿವಕುಮಾರ ಸ್ವಾಮಿ ಮಂಟಪದಲ್ಲಿ ಇದೇ ದಿನಾಂಕ 27 ಹಾಗೂ 28 ರಂದು ಸಂಜೆ 7 ಗಂಟೆಗೆ ಶಿವಸಂಚಾರ ಕಲಾ ತಂಡದಿಂದ ನಾಟಕ ಪ್ರದರ್ಶನಗಳು ನಡೆಯಲಿವೆ ಎಂದು ಸಾದರ ನೌಕರರ ಬಳಗದ ಅಧ್ಯಕ್ಷ ಕೆ.ನಾಗಪ್ಪ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ದಿನಾಂಕ 27 ರಂದು ರಾಮಚಂದ್ರ ಕಲ್ಲೋ ನಾಯಕ ರಚಿಸಿ, ಮಾಲತೇಶ ಬಡಿಗೇರ ನಿರ್ದೇಶಿಸಿರುವ ಡೋಹರ ಕಕ್ಕಯ್ಯ ನಾಟಕ ಪ್ರದರ್ಶನ ನಡೆಯಲಿದೆ. 28 ರಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ರಚಿಸಿರುವ, ವೈ.ಡಿ. ಬದಾಮಿ ನಿರ್ದೇಶನದ 'ಜೀವ ಇದ್ದರೆ ಜೀವನ' ನಾಟಕ ಪ್ರದರ್ಶನ ಏರ್ಪಾಡಾಗಿದೆ ಎಂದು ಹೇಳಿದರು.

**ಸಾದರ ಲಿಂಗಾಯತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು:** ಸರ್ಕಾರಿ ಕೋಟಾದಲ್ಲಿ ಸೀಟು ಪಡೆದು ವೈದ್ಯಕೀಯ ವಿದ್ಯಾಭ್ಯಾಸ ಮಾಡುತ್ತಿರುವ, ಆರ್ಥಿಕ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ 5 ವರ್ಷದ ಅಧ್ಯಯನದ ಅವಧಿಗೆ ಆರ್ಥಿಕ ನೆರವು ನೀಡಲು ಸಾದರ ನೌಕರರ ಬಳಗೆ ಮುಂದಾಗಿದೆ ಎಂದು ಕೆ.ನಾಗಪ್ಪ ಹೇಳಿದರು.

ಇದೇ ದಿನಾಂಕ 30ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ 98443 69744, 94484 39662, 9844501366 ಗೆ ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಕೆಂಚನಗೌಡ, ಎ.ಸಿದ್ದಲಿಂಗನಗೌಡ, ಎಸ್.ಆರ್. ಸೋಮಶೇಖರ್ ಉಪಸ್ಥಿತರಿದ್ದರು.

## ಹೊನ್ನಾಳಿಯಲ್ಲಿ ಶೈಕ್ಷಣಿಕ ಕಾರ್ಯಾಗಾರ



ಹೊನ್ನಾಳಿ, ಮಾ.24- ತಾಲ್ಲೂಕಿನ ಪ್ರೌಢಶಾಲಾ ಮಟ್ಟದ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ವಿಷಯಗಳ ಶೈಕ್ಷಣಿಕ ಕಾರ್ಯಾಗಾರವನ್ನು ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪದನಿಮಿತ್ತ ಸಹ ನಿರ್ದೇಶಕ ಹೆಚ್. ಮಂಜುನಾಥ್ ಉದ್ಘಾಟಿಸಿದರು.

ವಿದ್ಯಾರ್ಥಿಗಳಲ್ಲಿ ಕಲಿಕೆಯ ಗುಣಮಟ್ಟ ಸುಧಾರಿಸಿ ತಾಲ್ಲೂಕಿನ ಶೈಕ್ಷಣಿಕ ಪ್ರಗತಿ ವೃದ್ಧಿಸುವ ನಿಟ್ಟಿನಲ್ಲಿ ವಿಷಯ ಶಿಕ್ಷಕರಿಗೆ ನೂತನ ಮಾದರಿಯ ಬೋಧನಾ ಕಲೆಯ ಬಗ್ಗೆ ವಿವರಿಸಲಾಯಿತು. ತಾಲ್ಲೂಕಿನ ವಿಷಯವಾರು ಶಿಕ್ಷಕರುಗಳು ಭಾಗವಹಿಸಿದ್ದರು. ಬಿಇಒ ರಾಜೀವ್, ಬಿಆರ್‌ಸಿ ಉಮಾಶಂಕರ್, ಇಸಿಓ ಬಸವರಾಜ್, ಸಹ ಶಿಕ್ಷಕರ ಸಂಘದ ಅಧ್ಯಕ್ಷ ರವಿಗೌಡ, ಪ್ರಸನ್ನಕುಮಾರ್, ಚಂದ್ರಶೇಖರ್ ವಿಷಯ ಪರಿವೀಕ್ಷಕರಾದ ವಸಂತಕುಮಾರಿ, ಸುರೇಶ್, ಶಶಿಕಲಾ ಭಾಗವಹಿಸಿದ್ದರು.

# ದೇಶದ ಶಕ್ತಿಗೆ ಆರೋಗ್ಯವೇ ಮುಖ್ಯ

### ವಿಶ್ವ ಕ್ಷಯ ರೋಗ ದಿನಾಚರಣೆಯಲ್ಲಿ ಮೇಯರ್ ಎಸ್.ಟಿ. ವೀರೇಶ್



ದಾವಣಗೆರೆ, ಮಾ. 23 - ದೇಶ ಶಕ್ತಿಶಾಲಿಯಾಗಲು ಆರೋಗ್ಯವೇ ಮುಖ್ಯ ಎಂದಿರುವ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಆರೋಗ್ಯ ಕಾಪಾಡುವಲ್ಲಿ ಆರೋಗ್ಯ ಕಾರ್ಯಕರ್ತರು ಹಾಗೂ ಮುಂಚೂಣಿ ಕಾರ್ಯಕರ್ತರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ವಿಶ್ವ ಕ್ಷಯ ರೋಗ ದಿನಾಚರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಕಳೆದ ವರ್ಷ ಕಾಣಿಸಿಕೊಂಡ ಕೊರೊನಾ ಎದುರಿಸುವಲ್ಲಿ ಯಶಸ್ಸು ಕಾಣಲು ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರು ಕಾರಣರಾಗಿದ್ದಾರೆ. ಹೀಗಾಗಿಯೇ ಅವರನ್ನು ಕೊರೊನಾ ಯೋಧರು ಎಂದು ಪರಿಗಣಿಸಲಾಗುತ್ತಿದೆ. ಯೋಧರ ರೀತಿಯಲ್ಲೇ ಇವರೆಲ್ಲಾ ವೈಯಕ್ತಿಕ ಜೀವನ ಬದಿಗೊತ್ತಿ ಸೇವೆ ಮತ್ತು ತ್ಯಾಗದಿಂದ ಕಾರ್ಯ ನಿರ್ವಹಿಸಿದ್ದಾರೆ ಎಂದವರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವಿಜಯ ಮಹಾಂತೇಶ್ ಬಿ ದಾನಮ್ಮನವರ್ ಮಾತನಾಡಿ, ಕ್ಷಯ ರೋಗ ನಿರ್ಮೂಲನೆ ಹಳ್ಳಿಗಳಿಂದ ಆಗಬೇಕು. ಈ ನಿಟ್ಟಿನಲ್ಲಿ ಹಳ್ಳಿಗಳಲ್ಲಿ ಕ್ಷಯರೋಗ ಪತ್ತೆ, ಸೂಕ್ತ ಸಮಯದಲ್ಲಿ ತಪಾಸಣೆ ಮತ್ತು ಚಿಕಿತ್ಸೆ ನೀಡುವುದರೊಂದಿಗೆ ಈ ರೋಗದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪರಿಣಾಮಕಾರಿ ಕ್ರಮ ಜರುಗಿಸಬೇಕು ಎಂದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಕೆ.ಹೆಚ್. ಗಂಗಾಧರ ಮಾತನಾಡಿ, ವಿಶ್ವದ ಒಟ್ಟು ಕ್ಷಯ ಸೋಂಕಿನಲ್ಲಿ ಶೇ.25ರಷ್ಟು ಭಾರತದಲ್ಲಿದ್ದಾರೆ ಮತ್ತು ಒಟ್ಟು ಸಾವುಗಳಲ್ಲಿ ಶೇ.30ರಷ್ಟು ಸಂಭವಿಸುತ್ತಿವೆ. ಈ ಹಿನ್ನೆಲೆಯಲ್ಲಿ 2025ರ ವೇಳೆಗೆ ಕ್ಷಯ ಸೋಂಕು ಹಾಗೂ ಸಾವುಗಳನ್ನು ಶೇ.80ರಷ್ಟು ಕಡಿಮೆ ಮಾಡುವ ಗುರಿ ಭಾರತದ್ದಾಗಿದೆ ಎಂದರು.

ಕ್ಷಯ ರೋಗದ ವೈರಾಣು ದೇಹಕ್ಕೆ ಸೇರಿದ ತಕ್ಷಣ ರೋಗ ಬರುವುದಿಲ್ಲ. ಅಪೌಷ್ಠಿಕತೆ, ಸಕ್ಕರೆ ಕಾಯಿಲೆ, ಹೆಚ್.ಐ.ವಿ. ಸೋಂಕು, ಧೂಮಪಾನ, ಮದ್ಯಪಾನ, ಕ್ಯಾನ್ಸರ್ ಮುಂತಾದ ಕಾರಣಗಳಿಂದ ರೋಗ ನಿರೋಧಕ ಶಕ್ತಿ ಕಡಿಮೆಯಾದಾಗ ಕ್ಷಯ ಬರುತ್ತದೆ ಎಂದವರು ಹೇಳಿದರು.

ಡಿ.ಹೆಚ್.ಓ. ಡಾ. ನಾಗರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, 2020 ರಲ್ಲಿ ಕೋವಿಡ್ ಕಾರಣದಿಂದ ಜಿಲ್ಲೆಯಲ್ಲಿ ಕಡಿಮೆ ಅಂದರೆ 1,898 ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಈ ಪೈಕಿ 1540 ಜನರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಕ್ಷಯ ರೋಗದಿಂದ ಸಂಭವಿಸಿರುವ ಮರಣ ಪ್ರಮಾಣ ಶೇ.10 ರಷ್ಟಿದ್ದು, ಇದನ್ನು ಕಡಿಮೆ ಮಾಡಲು ಎಲ್ಲರೂ ಶ್ರಮವಹಿಸಬೇಕು ಎಂದು ತಿಳಿಸಿದರು.

ಟಿಬಿ ರೋಗ ಗೆದ್ದವರನ್ನು ಟಿಬಿ ಚಾಂಪಿಯನ್ಸ್ ಎಂದು ಗುರುತಿಸಿ ವೇದಿಕೆಯಲ್ಲಿ ಗೌರವಿಸಲಾಯಿತು. ಇದೇ ವೇಳೆ ಜಿ.ಪಂ ಸಿಇಓ ಸೇರಿದಂತೆ, ವೇದಿಕೆಯಲ್ಲಿದ್ದ ಗಣ್ಯರು ಕ್ಷಯರೋಗ ಜಾಗೃತಿ ಮತ್ತು ನಿರ್ಮೂಲನೆ ಕುರಿತಾದ ಐಇಸಿ ಸಾಮಗ್ರಿಗಳನ್ನು ಬಿಡುಗಡೆಗೊಳಿಸಿದರು.

ತಾಲ್ಲೂಕು ವೈದ್ಯಾಧಿಕಾರಿ ಡಾ. ವೆಂಕಟೇಶ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್, ಆರ್.ಸಿ.ಹೆಚ್. ಅಧಿಕಾರಿ ಡಾ.ಮೀನಾಕ್ಷಿ, ನೋಡಲ್ ಅಧಿಕಾರಿ ಡಾ.ನಂದ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಜಯಪ್ರಕಾಶ್, ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಕಾರಾಧ್ಯ, ಡಿಎಲ್‌ಓ ಡಾ.ಮುರುಳೀಧರ್, ಜೆ.ಜೆ.ಎಂ ವೈದ್ಯಕೀಯ ಮಹಾವಿದ್ಯಾಲಯದ ಕಮ್ಯುನಿಟಿ ಮೆಡಿಸಿನ್ ವಿಭಾಗದ ಮುಖ್ಯಸ್ಥರು ಮತ್ತು ನೋಡೆಲ್ ಅಧಿಕಾರಿ ಹಾಗೂ ಸ್ಟೇಟ್ ಟಾಸ್ಕ್‌ಫೋರ್ಸ್ (ಟಿ.ಬಿ) ಅಧ್ಯಕ್ಷ ಡಾ. ಪಿ.ಎಸ್.ಬಾಲು, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಅಧೀಕ್ಷಕ ಡಾ. ನೀಲಕಂಠ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ.ಸುರೇಶ್ ಬಾರ್ಕಿ, ಉಮಾಪತಿ ಮತ್ತಿತರರು ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ಗಂಧದ ಮೆರವಣಿಗೆ




ಮಲೇಬೆನ್ನೂರು, ಮಾ.24- ಇಲ್ಲಿನ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಉರುಸು ಅಂಗವಾಗಿ ಬುಧವಾರ ಸಂಜೆ ಪಟ್ಟಣದಲ್ಲಿ ಗಂಧ (ಸಂದಲ್)ದ ಮೆರವಣಿಗೆ ಶ್ರದ್ಧಾಭಕ್ತಿಯಿಂದ ನಡೆಯಿತು.

ಫಕೀರ ಸ್ವಾಮಿಗಳ ಪವಾಡಗಳು ಮತ್ತು ಕುದುರೆ ಕುಣಿತ ಮೆರವಣಿಗೆಯಲ್ಲಿ ಗಮನ ಸೆಳೆದವು. ಮೆರವಣಿಗೆ ವೇಳೆ ಹಿಂದೂ-ಮುಸ್ಲಿಂ ಬಾಂಧವರು ಗಂಧದ ಪೂಜೆ ಮಾಡಿ, ಭಕ್ತಿ ಸಮರ್ಪಿಸಿದರು.

ಗುರುವಾರ ದರ್ಗಾದಲ್ಲಿ ಉರುಸು ಜರುಗಲಿದ್ದು, ರಾತ್ರಿ 9 ಗಂಟೆಯಿಂದ ಪ್ರಸಿದ್ಧ ಖವ್ವಾಲರಿಂದ ಖವ್ವಾಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಉರುಸು ಕಾರ್ಯಕ್ರಮವನ್ನು ಸರಳವಾಗಿ ಏರ್ಪಡಿಸಲಾಗಿದೆ.

## ಮೇಯರ್ ವೀರೇಶ್‌ಗೆ ಅಭಿನಂದನೆ



ದಾವಣಗೆರೆ, ಮಾ. 24- ಇಲ್ಲಿನ ವಿದ್ಯಾನಗರದ ಮುಖ್ಯ ರಸ್ತೆಯಲ್ಲಿರುವ ಆರೇಂಜ್ ಕಾರ್ ಕೇರ್-ಅಧಿಕೃತ ಬ್ರಿಡ್ಜ್ ಸ್ಟೋನ್ ಟೈರ್ ಮಾರಾಟಗಾರರ ವತಿಯಿಂದ ದಾವಣಗೆರೆಯ ನೂತನ ಮಹಾಪೌರ ಎಸ್.ಟಿ ವೀರೇಶ್ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ಇದೇ ವೇಳೆ ಉಚಿತ ನೋಟ್ ಬುಕ್‌ಗಳನ್ನು ಆರೇಂಜ್ ಕಾರ್ ಕೇರ್ ವತಿಯಿಂದ ವಿತರಿಸಲು ಮೇಯರ್ ಅವರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ವೀರೇಶ್ ಬಾಡ, ಸುಪ್ರೀತ್, ಪ್ರಭುದೇವ್ ಹಾಗೂ ಶಿವರಾಜ್ ಕಬ್ಬೂರು, ಸಂತೋಷ್ ಮತ್ತು ಆರೇಂಜ್ ಕಾರ್ ಕೇರ್‌ನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಜಿಗಳಿಯಲ್ಲಿ ಇಂದು ಕಳಸಧಾರಣೆ

ಮಲೇಬೆನ್ನೂರು ಸಮೀಪದ ಜಿಗಳಿ ಗ್ರಾಮದ ಶ್ರೀ ರಂಗನಾಥಸ್ವಾಮಿ ರಥೋತ್ಸವದ ಅಂಗವಾಗಿ ಇಂದು ರಾತ್ರಿ 8.30 ಕ್ಕೆ ಮಹಾರಥಕ್ಕೆ ಕಳಸಧಾರಣೆ ಮಾಡಲಾಗುವುದು. ಶುಕ್ರವಾರ ಬೆಳಿಗ್ಗೆ ಗಜ ಉತ್ಸವ, ಸಂಜೆ ಶಸ್ತ್ರ ಕಾರ್ಯಕ್ರಮ, ಇದೇ ದಿನ ತಡರಾತ್ರಿ ಶ್ರೀ ರಂಗನಾಥ ಸ್ವಾಮಿಯ ರಥೋತ್ಸವ ಜರುಗಲಿದೆ.

## ದೊಡ್ಡಾಲಘಟ್ಟದಲ್ಲಿ ಇಂದು ಹೂವಿನ ಅಡ್ಡಪಲ್ಲಕ್ಕಿ ಉತ್ಸವ

ಚಿತ್ರದುರ್ಗ ತಾಲ್ಲೂಕಿನ ದೊಡ್ಡಾಲಘಟ್ಟ ಗ್ರಾಮದ ಶ್ರೀ ರಂಗನಾಥ ಸ್ವಾಮಿಯ ರಥೋತ್ಸವದ ಅಂಗವಾಗಿ ಇಂದು ರಾತ್ರಿ 8 ಗಂಟೆಗೆ ಶ್ರೀ ರಂಗನಾಥ ಸ್ವಾಮಿ ಹಾಗೂ ಶ್ರೀ ಬಸವೇಶ್ವರ ಸ್ವಾಮಿಯ ಹೂವಿನ ಅಡ್ಡಪಲ್ಲಕ್ಕಿ ಉತ್ಸವ ನಡೆಯುವುದು. ರಾತ್ರಿ 11 ಗಂಟೆಗೆ ಶ್ರೀ ರಂಗನಾಥ ಸ್ವಾಮಿ ಓಕಳಿ ಇದೆ. ನಾಳೆ ದಿನಾಂಕ 26 ರ ಶುಕ್ರವಾರ ಬೆಳಿಗ್ಗೆ 10.30 ಕ್ಕೆ ಭೂತನ ಸೇವೆ (ದೊಡ್ಡ ಎಡೆ) ನಡೆಯುವುದು.

## ನಂದಿಗುಡಿ : ಇಂದು ಅಡ್ಡಪಲ್ಲಕ್ಕಿ ಉತ್ಸವ, ರಥೋತ್ಸವ

ಮಲೇಬೆನ್ನೂರು ಸಮೀಪದ ನಂದಿಗುಡಿ ಗ್ರಾಮದಲ್ಲಿ ಶ್ರೀ ಬಸವೇಶ್ವರ ದೇವರ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8.30 ಕ್ಕೆ ರುದ್ರ ಗುಗ್ಗಳ ಹಾಗೂ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ನಡೆಯಲಿದ್ದು, ನಂತರ ಶ್ರೀ ಬಸವೇಶ್ವರ ದೇವರ ಬೃಹತ್ ಮಹಾರಥೋತ್ಸವ ಜರುಗಲಿದೆ. ಸಂಜೆ ದೊಡ್ಡ ಬಡ್ಡಿ ಪ್ರದರ್ಶನ, ಓಕಳಿ, ಕಂಕಣ ವಿಸರ್ಜನೆಯೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ.

## ಕಟ್ಟಿಗೆಹಳ್ಳಿಯಲ್ಲಿ ಇಂದು ಓಕುಳಿ, ಗಂಗಾ ಪೂಜೆ

ಜಗಳೂರು ತಾಲ್ಲೂಕು ಕಟ್ಟಿಗೆಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಬಸವೇಶ್ವರ ಸ್ವಾಮಿಯ ಮಹಾರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8.30 ಕ್ಕೆ ಓಕುಳಿ ಮತ್ತು ಗಂಗಾ ಪೂಜೆ ನಡೆಯುವುದು.

## ಲೇಡಿಸ್ ಕ್ಲಬ್‌ನಿಂದ ಇಂದು ಮಹಿಳಾ ದಿನಾಚರಣೆ

ದಾವಣಗೆರೆ ಲೇಡಿಸ್ ಕ್ಲಬ್‌ನಿಂದ ಇಂದು ಸಂಜೆ 4 ಗಂಟೆಗೆ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಸೂಪರ್ ಮಾಮ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸೂಪರ್ ಮಾಮ್ ಕಾರ್ಯಕ್ರಮದಲ್ಲಿ 65 ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಳ್ಳುತ್ತಿದ್ದು, ಮನರಂಜನೆ ಹಾಗೂ ಸಾಧಕಿಯರಾದ ಶಾರದ ರಾಯ್ಕರ್, ರೇಣುಕಮ್ಮ, ಕಾಮಾಕ್ಷಿ, ಪಾರ್ವತಮ್ಮ ಅವರನ್ನು ಸನ್ಮಾನಿಸಿ, ಗೌರವಿಸಲಾಗುವುದು. ಮುಖ್ಯ ಅತಿಥಿಗಳಾಗಿ ವೀಣಾ ನಂಜಪ್ಪ ಹಾಗೂ ಆಶಾ ಉಮೇಶ್ ಆಗಮಿಸಲಿದ್ದು, ತೀರ್ಪುಗಾರರಾಗಿ ಶುಭ ಚಂದ್ರಶೇಖರ್ ಮತ್ತು ಹೇಮ ಕಿರಸಗೂರು ಆಗಮಿಸಲಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕಿ ಅಮೀರಾ ಬಾನು ಹಾಗೂ ಅಧ್ಯಕ್ಷೆ ದ್ರಾಕ್ಷಾಯಣಿ ತಿಳಿಸಿದ್ದಾರೆ.


## ಕಾಣೆಯಾಗಿದ್ದಾನೆ



ಮೋಹನ್ ಹೆಚ್.ಜೆ. ಎಂಬ ಭಾವಚಿತ್ರದಲ್ಲಿರುವ 25 ವರ್ಷದ ಯುವಕ ಎಂ.ಸಿ.ಸಿ.'ಬಿ' ಬ್ಲಾಕ್, 11ನೇ ಕ್ರಾಸ್, ನಂ.3253/3, ದಾವಣಗೆರೆಯ ನಿವಾಸದಿಂದ ದಿ: 13-3-2021ರಂದು ರಾತ್ರಿ 10-30ರ ಸುಮಾರಿನಲ್ಲಿ ಹೋದವನು ಹಿಂದಿರುಗಿರುವುದಿಲ್ಲ. ಈತನು ಕಪ್ಪು ಬಣ್ಣ ಹೊಂದಿದ್ದು, ಹಸಿರು ಪ್ಯಾಂಟ್, ಲೈಟ್ ಹಸಿರು ಚೆಕ್ಸ್ ಶರ್ಟ್ ಧರಿಸಿರುತ್ತಾನೆ.ಈತನ ಸುಳಿವು ಸಿಕ್ಕಲ್ಲಿ ಹತ್ತಿರದ ಪೋಲಿಸ್ ಠಾಣೆಗಾಗಲೀ, ಮೇಲ್ಕಂಡ ವಿಳಾಸಕ್ಕಾಗಲೀ ಅಥವಾ ಕೆಳಕಂಡ ಮೊಬೈಲ್ ನಂಬರ್‌ಗೆ ತಿಳಿಸಲು ಕೋರುತ್ತೇವೆ.

**ಜಗದೀಶ್ ಹೆಚ್., ಮೊ : 7338132755**



## ನಗರಸಭಾ ಕಾರ್ಯಾಲಯ, ಹರಿಹರ-577601

ಜಿಲ್ಲೆ: ದಾವಣಗೆರೆ ರಾಜ್ಯ: ಕರ್ನಾಟಕ

Website: www.hariharcity.mrc.gov.in Email: itstaff_ulb_harihara@yahoo.com

Phone: 08192-244266 Fax: 08192-241024

ನಂ.ನಸಹ/ಕಂ.ಶಾ/ಸಿಆರ್/17/2020-21 ದಿನಾಂಕ: 18-03-2021

### ದರಪಟ್ಟಿ ಕೋರಿ ಪ್ರಕಟಣೆ

**ವಿಷಯ:** 2021-22ನೇ ಸಾಲಿಗೆ ಆಸ್ತಿ ತೆರಿಗೆಯಲ್ಲಿ ಶೇ.5% ರಿಯಾಯಿತಿ ಇರುವುದನ್ನು ಸಾರ್ವಜನಿಕರಿಗೆ ಪ್ರಚಾರ ಪಡಿಸಲು ಬ್ಯಾನರ್ ಬೋರ್ಡ್ ತಯಾರಿಸಿ ಅಳವಡಿಸುವ ಬಗ್ಗೆ.

ಈ ಮೂಲಕ ಬ್ಯಾನರ್ ಬೋರ್ಡ್ ಮುದ್ರಣಗಾರರು ಹಾಗೂ ಅಳವಡಿಕೆದಾರರಿಗೆ ತಿಳಿಯಪಡಿಸುವುದೇನೆಂದರೆ, 2021-22ನೇ ಸಾಲಿನ ಆರ್ಥಿಕ ವರ್ಷವು ದಿನಾಂಕ:01-04-2021ರಿಂದ ಆರಂಭವಾಗುತ್ತಿದ್ದು, ಏಪ್ರಿಲ್ ಮಾಹೆಯಲ್ಲಿ ಆಸ್ತಿ ತೆರಿಗೆಯ ಮೇಲೆ ಶೇ.5% ರಿಯಾಯಿತಿ ಇರುವುದರಿಂದ ಆಸ್ತಿ ತೆರಿಗೆ ಪಾವತಿಸಲು ಸಾರ್ವಜನಿಕರಿಗೆ ಪ್ರಚಾರ ಪಡಿಸಲು ಬ್ಯಾನರ್ ಬೋರ್ಡ್ ತಯಾರಿಸಿ ಅಳವಡಿಸಲು ದರ ಪಟ್ಟಿ ಕರೆಯಲಾಗಿದ್ದು, ಆಸಕ್ತಿವುಳ್ಳ ಸರಬರಾಜುದಾರರು ಈ ಪ್ರಕಟಣೆ ಹೊರಡಿಸಿದ 07 ದಿವಸದೊಳಗಾಗಿ ದರಪಟ್ಟಿಯನ್ನು ಕಛೇರಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕಂದಾಯ ವಿಭಾಗದಲ್ಲಿ ಪಡೆಯಲು ಸೂಚಿಸಲಾಗಿದೆ.

| ಕ್ರ. ಸಂ | ಸಾಮಾಗ್ರಿಗಳ ವಿವರ | ದರ (ಪ್ರತಿ ಚದರ ಅಡಿಗೆ) |
|---|---|---|
| 1 | ಬ್ಯಾನರ್ ಬೋರ್ಡ್‌ಗಳನ್ನು ಮುದ್ರಿಸುವುದು ಹಾಗೂ ನಗರದ ಪ್ರಮುಖ ಸ್ಥಳಗಳಲ್ಲಿ ಬ್ಯಾನರ್ ಬೋರ್ಡ್‌ಗಳನ್ನು ಅಳವಡಿಸುವುದು. | |
| 2 | ಬ್ಯಾನರ್ ಬೋರ್ಡ್‌ಗಳನ್ನು ಮುದ್ರಿಸಿ ನೀಡುವುದು. | |

ವಾಸಾಸಂಇ/ದಾವಣಗೆರೆ/ಎಸ್‌ಎಸ್‌ಸಿ/791/2020-21

ಸಹಿ/- ಪೌರಾಯುಕ್ತರು, ನಗರಸಭೆ, ಹರಿಹರ.



## ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (ದಿನಾಂಕ: 01.01.2014ರಿಂದ ಜಾರಿಗೆ ಬಂದ ಅಧಿಸೂಚನೆ ಪ್ರಕಾರ)ರೊಂದಿಗೆ ಓದಲಾದ ಕಲಂ-11(1)ರಲ್ಲಿ ಮಾಡಿದ**

### ಅಧಿಸೂಚನೆ

ಸಂಖ್ಯೆ: ಭೂಸ್ವಾಧೀನ/ಸಿಆರ್/96/2020-21 ದಿನಾಂಕ: 19.03.2021

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಸ್ವತ್ತನ್ನು ಭೂಸ್ವಾಧೀನ ಮಾಡಿಕೊಳ್ಳಲು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 41344/2015 ದಿನಾಂಕ: 17.09.2019ರಂತೆ ಆದೇಶ ಹೊರಡಿಸಿರುತ್ತದೆ. ಪ್ರಯುಕ್ತ ಸಾರ್ವಜನಿಕ ಉದ್ದೇಶವಾಗಿರುವ ದಾವಣಗೆರೆ ನಗರದ ಪಿ.ಬಿ. ರಸ್ತೆಯ ಅಗಲೀಕರಣದ ಭಾಗವಾಗಿ ತಾತ್ಕಾಲಿಕ ಯೋಜನಾ ಕಛೇರಿಯ ನಿರ್ಮಾಣಕ್ಕಾಗಿ ದಾವಣಗೆರೆ ನಗರದ 5ನೇ ವಾರ್ಡ್, 7ನೇ ಡಿವಿಜನ್, ಪಿ.ಬಿ. ರಸ್ತೆಯ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಸ್ವತ್ತನ್ನು ಈ ಮೇಲಿನಂತೆ ವಿವರಿಸಿದ ಉದ್ದೇಶಕ್ಕೆ ಭೂಸ್ವಾಧೀನ ಮಾಡುವುದು ಅವಶ್ಯವಿರುತ್ತದೆ.

ಈ ಮೂಲಕ ತಿಳಿಸುವುದೇನಂದರೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (ದಿನಾಂಕ: 01.01.2014ರಿಂದ ಜಾರಿಗೆ ಬಂದ ಅಧಿಸೂಚನೆ ಪ್ರಕಾರ)ರ ಕಲಂ 11ರ ಸೌಲಭ್ಯದ ಮೇರೆಗೆ (2013 ಕೇಂದ್ರದ 30ನೇ ಕಾಯ್ದೆ) ಸದರಿ ಕಾನೂನಿನ ಕಲಂ-12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ರವರು ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ಉಪವಿಭಾಗಾಧಿಕಾರಿಗಳು, ದಾವಣಗೆರೆ ಇವರಿಗೆ ನೀಡಲಾಗಿದೆ ಹಾಗೂ ಕಲಂ-43ರ ಮೇರೆಗೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಅಧಿಕೃತ ಪ್ರಾಧಿಕಾರದ ಕಾರ್ಯಪಾಲನೆಯನ್ನು ಅಪರ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರಿಗೆ ನೀಡಲಾಗಿದೆ.

2013ರ ಕಾಯ್ದೆ ಕಲಂ-15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ತಂಟೆ, ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನದೊಳಗೆ ಈ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ವಿಲೇಗೆ ಹಾಕಲಾಗುವುದು.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ-4ರಂತೆ ಸಾಮಾಜಿಕ ಪರಿಣಾಮ ನಿರ್ಧರಣೆಯ ಅಧಿಸೂಚನೆ ಸಂಖ್ಯೆ ಕಂಇ 07 ಎಕ್ಯೂಸಿ 2021 ದಿನಾಂಕ: 18.03.2021 ಈ ಆದೇಶದಂತೆ ಸ್ವತ್ತಿನ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು 2013ರ ಮೂಲ ಭೂಸ್ವಾಧೀನ ಕಾಯ್ದೆಯ ಅಧ್ಯಾಯ-IIರಡಿ ಸಾಮಾಜಿಕ ಪರಿಣಾಮ ನಿರ್ಧರಣೆ (SIA) ಅಧ್ಯಯನ ಮಾಡುವುದರಿಂದ ಹಾಗೂ ಅಧ್ಯಾಯ-IIIರ ಕಲಂ-10ನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಆದೇಶಿಸಲಾಗಿದೆ.

ಈ ಸ್ವತ್ತಿನ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಿಣಿದಾರರಿಗಾಗಲೀ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ-11(4) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಅನುಸೂಚಿ**

ಜಿಲ್ಲೆ : ದಾವಣಗೆರೆ ತಾಲ್ಲೂಕು : ದಾವಣಗೆರೆ ಹೋಬಳಿ : ಕಸಬಾ ಗ್ರಾಮ : ದಾವಣಗೆರೆ

| ಕ್ರ. ಸಂ. | ಖಾತೆದಾರರ ಹೆಸರು | ಸ್ವತ್ತಿನ ನಂ. | ಚೆಕ್ಕುಬಂದಿ: ಉತ್ತರ | ಚೆಕ್ಕುಬಂದಿ: ದಕ್ಷಿಣ | ಚೆಕ್ಕುಬಂದಿ: ಪೂರ್ವ | ಚೆಕ್ಕುಬಂದಿ: ಪಶ್ಚಿಮ | ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ ಚ.ಅಡಿ | ಷರಾ |
|---|---|---|---|---|---|---|---|---|
| 1 | ಶ್ರೀ ಡಿ.ಎಸ್. ಕುಮಾರಸ್ವಾಮಿ ಬಿನ್ ಡಿ. ಶೇಖರಪ್ಪ ಮತ್ತು ಶ್ರೀಮತಿ ರೇಖಾ ಕುಮಾರ್ ಕೋಂ. ಡಿ.ಎಸ್. ಕುಮಾರಸ್ವಾಮಿ. | 239 1ಎ, 2, 3ಬಿ | ಪಿ.ಬಿ. ರಸ್ತೆ | ಕುಮಾರಸ್ವಾಮಿಯವರ ಉಳಿದ ಸ್ವತ್ತು (ಡೋರ್ ನಂ. 239 1ಎ, 2, 3ಬಿ) | ಕನ್ಸರ್ ವೆನ್ಸಿ | ರವಿಕುಮಾರ್ ರವರಿಗೆ ಸೇರಿದ ಸ್ವತ್ತು | 255 | |

**ಘೋಷ್ವಾರೆ**

| ದಾವಣಗೆರೆ | 255 ಚದರ ಅಡಿಗಳು |
|---|---|

**ಸಹಿ/-**
**ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು**
ದಾವಣಗೆರೆ ಉಪವಿಭಾಗ, ದಾವಣಗೆರೆ.

**ಸಹಿ/-**
**ಜಿಲ್ಲಾಧಿಕಾರಿಗಳು**
ದಾವಣಗೆರೆ ಜಿಲ್ಲೆ, ದಾವಣಗೆರೆ.

# ಭಾಷಾ ನಗರದಲ್ಲೊಂದು ಸ್ಮಾರ್ಟ್ ಹೆರಿಗೆ ಆಸ್ಪತ್ರೆ

ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ

ದಾವಣಗೆರೆ, ಮಾ.23- ಬಡತನ ರೇಖೆಗಿಂತ ಕಡಿಮೆ ಇರುವ ಹಾಗೂ ಮಧ್ಯಮ ವರ್ಗದವರೇ ಹೆಚ್ಚಾಗಿರುವ ದಾವಣಗೆರೆಯ ಭಾಷಾ ನಗರದಲ್ಲಿ 1.30 ಕೋಟಿ ರೂ. ವೆಚ್ಚದಲ್ಲಿ ಸ್ಮಾರ್ಟ್ ಹೆರಿಗೆ ಆಸ್ಪತ್ರೆ ನಿರ್ಮಾಣಗೊಂಡಿದ್ದು, ಶೀಘ್ರವೇ ಉದ್ಘಾಟನೆಗೊಳ್ಳಲು ಸಿದ್ಧತೆ ನಡೆಯುತ್ತಿದೆ.

ನಗರದ ಹಳೇ ಭಾಗದಲ್ಲಿ ಅತಿ ಹೆಚ್ಚಿನ ಜನಸಂದಣಿ ಪ್ರದೇಶ ಎಂದು ಗುರುತಿಸಲ್ಪಡುವ ಭಾಷಾ ನಗರದಲ್ಲಿ ಪ್ರಸ್ತುತ ಇದ್ದ ಹೆರಿಗೆ ಆಸ್ಪತ್ರೆಯ ಕಟ್ಟಡದ ಗಾತ್ರ ಚಿಕ್ಕದಾಗಿತ್ತು. ಅಲ್ಲದೆ, ಕಟ್ಟಡ ಹಳೆಯದಾಗಿದ್ದರಿಂದ ಇಲ್ಲಿಗೆ ಬರುವ ಗರ್ಭಿಣಿಯರು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು.

**ಜಿ+1 ಮಾದರಿಯಲ್ಲಿ ಆಸ್ಪತ್ರೆ ನಿರ್ಮಾಣ**
**18 ಬೆಡ್, 2 ವಾರ್ಡ್‌ಗಳು**
**ಸುಸಜ್ಜಿತ ರ್‍ಯಾಂಪ್ ವ್ಯವಸ್ಥೆ**

ಇದೀಗ ಇಲ್ಲಿನ ಜನಾನುಕೂಲ ಪರಿಗಣಿಸಿ, ಚಿಕಿತ್ಸೆಗೆ ಅನುಕೂಲವಾಗುವಂತೆ ಪ್ರಸ್ತುತ ಇರುವ ಹೆರಿಗೆ ಆಸ್ಪತ್ರೆ ಆವರಣದ ಜಾಗದಲ್ಲಿಯೇ ಮತ್ತೊಂದು ಸುಸಜ್ಜಿತವಾದ ಪ್ರಸೂತಿ ಆರೋಗ್ಯ ಕೇಂದ್ರವನ್ನು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನಿರ್ಮಿಸಲಾಗಿದ್ದು, ಶೀಘ್ರವೇ ಲೋಕಾರ್ಪಣೆಗೆ ಸಜ್ಜಾಗಿದೆ.

ಸುಮಾರು 486 ಚದರ ಮೀಟರ್ ವಿಸ್ತೀರ್ಣದಲ್ಲಿ ಈ ಆಸ್ಪತ್ರೆಯನ್ನು ಕಟ್ಟಲಾಗಿದ್ದು, ಜಿ+1 ಮಾದರಿಯಲ್ಲಿ 2 ಮಹಡಿಯಲ್ಲಿ ನಿರ್ಮಾಣವಾಗಿದೆ.

ಮೊದಲ ಮಹಡಿಯಲ್ಲಿ 18 ಬೆಡ್‌ಗಳ ಸಾಮರ್ಥ್ಯವುಳ್ಳ ವಾರ್ಡ್ ವ್ಯವಸ್ಥೆ ಕಲ್ಪಿಸಲಾಗಿದೆ. ವೈದ್ಯರ ಕೊಠಡಿ, ಆಪರೇಷನ್ ಥಿಯೇಟರ್, ನಿರೀಕ್ಷಣಾ ಕೊಠಡಿ, ಲೇಬರ್ ರೂಂ, ವಿಶ್ರಾಂತಿ ಕೊಠಡಿ ಸೇರಿದಂತೆ 2 ಪ್ರತ್ಯೇಕ ವಾರ್ಡ್‌ಗಳಿವೆ.

ಮೊದಲ ಮಹಡಿಗೆ ಸುಸಜ್ಜಿತ ರ್‍ಯಾಂಪ್ ಮತ್ತು ಮೆಟ್ಟಿಲುಗಳ ವ್ಯವಸ್ಥೆ ಕಲ್ಪಿಸಿರುವುದು ಇಲ್ಲಿನ ವಿಶೇಷತೆ.




ಬಡವರೇ ಹೆಚ್ಚಾಗಿರುವ ಭಾಷಾನಗರದ ಭಾಗದಲ್ಲಿ ಉತ್ತಮ ಆಸ್ಪತ್ರೆಯ ಅಗತ್ಯವಿದೆ ಎಂಬುದನ್ನು ಮನಗಂಡು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಸುಸಜ್ಜಿತ ಹೆರಿಗೆ ಆಸ್ಪತ್ರೆ ಕಟ್ಟಿಸಿಕೊಡಲಾಗಿದೆ. ಗರ್ಭಿಣಿಯರಿಗೆ ತೊಂದರೆಯಾದರೆ ಅವರು ಹೊಸ ಭಾಗದಲ್ಲಿನ ಆಸ್ಪತ್ರೆಗಳಿಗೆ ಬರಬೇಕಾಗಿತ್ತು. ಮಾರ್ಗ ಮಧ್ಯೆ ಸಾಕಷ್ಟು ತೊಂದರೆಗಳನ್ನು ಅನುಭವಿಸುವ ಸಾಧ್ಯತೆಯೂ ಇತ್ತು. ಇದೀಗ ಇಂತಹ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿದಂತಾಗಿದೆ.

- ರವೀಂದ್ರ ಬಿ.ಮಲ್ಲಾಪುರ, ವ್ಯವಸ್ಥಾಪಕ ನಿರ್ದೇಶಕರು, ಸ್ಮಾರ್ಟ್ ಸಿಟಿ ಲಿ.,

# ಹತ್ತು ವರ್ಷಗಳಾದರೂ ಪೆಟ್ರೋಲ್, ಡೀಸೆಲ್ ಜಿಎಸ್‌ಟಿಗೆ ಬರದು: ಸುಶೀಲ್

ನವದೆಹಲಿ, ಮಾ. 24 – ಪೆಟ್ರೋಲ್ ಹಾಗೂ ಡೀಸೆಲ್‌ಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತಂದರೆ ರಾಜ್ಯಗಳಿಗೆ 2 ಲಕ್ಷ ಕೋಟಿ ರೂ. ನಷ್ಟವಾಗುತ್ತದೆ. ಹೀಗಾಗಿ ಮುಂದಿನ ಹತ್ತು ವರ್ಷಗಳವರೆಗೆ ಇವುಗಳನ್ನು ಜಿ.ಎಸ್.ಟಿ.ಗೆ ತರುವ ಸಾಧ್ಯತೆ ಇಲ್ಲ ಎಂದು ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ.

ಬಜೆಟ್ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಎನ್.ಡಿ.ಎ.ಯೇತರ ಯಾವುದೇ ರಾಜ್ಯದ ಮುಖ್ಯಮಂತ್ರಿ ಇಲ್ಲವೇ ಹಣಕಾಸು ಸಚಿವ ಜಿ.ಎಸ್.ಟಿ. ಮಂಡಳಿಯ ಯಾವುದೇ ನಿರ್ಧಾರವನ್ನು ವಿರೋಧಿಸಿಲ್ಲ. ಪ್ರತಿಪಕ್ಷಗಳ ಆಡಳಿತದ ರಾಜ್ಯಗಳು ತೈಲವನ್ನು ಜಿ.ಎಸ್.ಟಿ.ಗೆ ತರುವ ಬಗ್ಗೆ ಜಿಎಸ್‌ಟಿ ಮಂಡಳಿಯಲ್ಲಿ ಪ್ರಸ್ತಾಪಿಸಲಿ ಎಂದು ಸವಾಲೆಸೆದಿದ್ದಾರೆ.

ಕೇಂದ್ರ ಹಾಗೂ ರಾಜ್ಯಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯಿಂದ 5 ಲಕ್ಷ ಕೋಟಿ ರೂ. ಪಡೆಯುತ್ತಿವೆ ಎಂದು ಮೋದಿ ತಿಳಿಸಿದ್ದಾರೆ. ಪೆಟ್ರೋಲ್ ಹಾಗೂ ಡೀಸೆಲ್‌ಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕೆಂಬ ಒತ್ತಾಯ ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಮೋದಿ ಹೇಳಿಕೆ ಪ್ರಾಮುಖ್ಯತೆ ಪಡೆದುಕೊಂಡಿದೆ. ಜಿಎಸ್‌ಟಿ ವ್ಯಾಪ್ತಿಗೆ ತೈಲ ತರುವ ಕುರಿತು ಚರ್ಚಿಸಲು ಸಂತೋಷಪಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ತಿಳಿಸಿದ್ದರು.

**ಯಾವುದೇ ರಾಜ್ಯ 2 ಲಕ್ಷ ಕೋಟಿ ರೂ. ಆದಾಯ ಕಳೆದುಕೊಳ್ಳಲು ಬಯಸದು**
**- ಸುಶೀಲ್ ಕುಮಾರ್**

ಸದನದ ಹೊರಗೆ ಪ್ರತಿಪಕ್ಷಗಳ ನಾಯಕರು ಹೇಳಿಕೆ ನೀಡುವುದು ಸುಲಭ. ಆದರೆ, ಜಿ.ಎಸ್.ಟಿ. ಮಂಡಳಿಯಲ್ಲಿ ಯಾರೊಬ್ಬರೂ ಈ ವಿಷಯ ಪ್ರಸ್ತಾಪಿಸುವುದಿಲ್ಲ. ಒಂದು ವೇಳೆ ಜಿಎಸ್‌ಟಿ ವ್ಯಾಪ್ತಿಗೆ ಪೆಟ್ರೋಲ್ ಹಾಗೂ ಡೀಸೆಲ್ ತಂದರೆ ರಾಜ್ಯಗಳಿಗೆ 2 ಲಕ್ಷ ಕೋಟಿ ರೂ. ನಷ್ಟವಾಗುತ್ತದೆ. ಯಾವುದೇ ರಾಜ್ಯ ಹಣ ಕಳೆದುಕೊಳ್ಳಲು ಸಿದ್ಧವಿಲ್ಲ ಎಂದು ಮೋದಿ ಹೇಳಿದ್ದಾರೆ.

ಮುಂದಿನ ಎಂಟರಿಂದ ಹತ್ತು ವರ್ಷಗಳವರೆಗೆ ಪೆಟ್ರೋಲ್ ಹಾಗೂ ಡೀಸೆಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲು ಸಾಧ್ಯವಾಗದು ಎಂಬುದನ್ನು ನಾನು ಈ ಸದನಕ್ಕೆ ತಿಳಿಸಲು ಬಯಸುತ್ತೇನೆ. ಕಾಂಗ್ರೆಸ್ಸೇ ಆಗಲಿ ಬೇರೆ ಸರ್ಕಾರವೇ ಆಗಲಿ ಆದಾಯ ಕಳೆದುಕೊಳ್ಳಲು ಬಯಸುವುದಿಲ್ಲ ಎಂದವರು ತಿಳಿಸಿದ್ದಾರೆ.

ಜಿ.ಎಸ್.ಟಿಯನ್ನು ಪ್ರತಿಪಕ್ಷಗಳಲ್ಲಿರುವವರು 'ಗಬ್ಬರ್ ಸಿಂಗ್ ಟ್ಯಾಕ್ಸ್' ಎಂದು ಲೇವಡಿ ಮಾಡುತ್ತಾರೆ. ಆದರೆ, ಜಿಎಸ್‌ಟಿ ಮಂಡಳಿಯಲ್ಲಿ ಕಾಂಗ್ರೆಸ್ ಆಡಳಿತದ ಛತ್ತೀಸ್‌ಘಡವೇ ಆಗಲಿ, ರಾಜಸ್ಥಾನವೇ ಆಗಲಿ, ಯಾವ ಮುಖ್ಯಮಂತ್ರಿ ಇಲ್ಲವೇ ಹಣಕಾಸು ಸಚಿವರೂ ಜಿಎಸ್‌ಟಿ ಸ್ವರೂಪವನ್ನು ವಿರೋಧಿಸಿಲ್ಲ ಎಂದು ಮೋದಿ ಹೇಳಿದ್ದಾರೆ.

ಹೊರಗಡೆ ಹೇಳಿಕೆ ನೀಡುವುದು ಸುಲಭ. ಆದರೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಇದ್ದ ದಿಟ್ಟತನದ ಕಾರಣದಿಂದಾಗಿಯೇ ಜಿ.ಎಸ್.ಟಿ. ಜಾರಿಗೆ ಬಂತು ಎಂದವರು ಹೇಳಿದ್ದಾರೆ.

ಪೆಟ್ರೋಲ್ ಹಾಗೂ ಡೀಸೆಲ್ ಮೇಲೆ ತೆರಿಗೆ ಹೇರುವುದರಿಂದ ಬರುವ ಹಣ ಕೇಂದ್ರ ಸರ್ಕಾರದ ಜೇಬಿಗೆ ಹೋಗುತ್ತದೆ ಎಂದು ಟೀಕಿಸಲಾಗುತ್ತದೆ. ಆದರೆ, ಈ ತೆರಿಗೆಯಲ್ಲಿ ಶೇ.42ರಷ್ಟು ರಾಜ್ಯಗಳಿಗೆ ಹೋಗುತ್ತದೆ. ಕೇಂದ್ರ ಸರ್ಕಾರ ಯಾವುದೇ ಪ್ರತ್ಯೇಕ ಜೇಬು ಹೊಂದಿಲ್ಲ. ತೆರಿಗೆಯಿಂದ ಬಂದ ಹಣದಲ್ಲಿ ಎಲ್ಲಾ ಮನೆಗಳಿಗೆ ವಿದ್ಯುತ್ ಹಾಗೂ ನಲ್ಲಿ ನೀರಿನಂತಹ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದೂ ಅವರು ಹೇಳಿದ್ದಾರೆ.

## ರಸ್ತೆ ಸಂಪರ್ಕವಿಲ್ಲದ ಭೂಮಿ ಮಾರಲು ನಿರ್ಧಾರ

ಬೆಂಗಳೂರು, ಮಾ. 24 - ಸರ್ಕಾರಿ ರಸ್ತೆ ಇಲ್ಲದೆ ಮಧ್ಯಭಾಗದಲ್ಲಿ ಸಿಲುಕಿರುವ ಲ್ಯಾಂಡ್‌ಲಾಕ್ ಭೂಮಿಯನ್ನು ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ ಮಾರಲು ಸರ್ಕಾರ ನಿರ್ಧರಿಸಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರದ ವೇಳೆಯಲ್ಲಿ ಸದಸ್ಯ ಪಿ.ಆರ್.ರಮೇಶ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಒತ್ತುವರಿಯಿಂದ ತೆರವಾದ ಭೂಮಿ ಪೈಕಿ 5,160 ಎಕರೆಯನ್ನು ಸರ್ಕಾರದ ಉದ್ದೇಶಕ್ಕೆ ಬಳಕೆ ನೀಡಲಾಗಿದೆ. ಕೆಲವೆಡೆ ಸುತ್ತಲೂ ಖಾಸಗಿ ಜಮೀನುಗಳಿವೆ, ಮಧ್ಯಭಾಗದಲ್ಲಿ ಒಂದೆರಡು ಗುಂಟೆಯಷ್ಟು ಸರ್ಕಾರಿ ಭೂಮಿ ಇದೆ, ಇಂತಹ ಭೂಮಿಯನ್ನು ಅಕ್ಕಪಕ್ಕದ ಜಮೀನುಗಳ ಮಾಲೀಕರಿಗೆ ಮಾರಾಟ ಮಾಡಲು ನಿರ್ಧರಿಸಲಾಗಿದೆ ಎಂದರು.

ಇಂತಹ ಭೂಮಿ ಒತ್ತುವರಿಯಾಗಿದ್ದರೂ ಅಕ್ಕಪಕ್ಕದವರಿಗೆ ಮಾರಾಟ ಮಾಡಲಾಗುವುದು. ಉಳಿದಂತೆ ಕೆರೆ, ಕಟ್ಟೆ ಹಾಗೂ ಇತರೆ ಒತ್ತುವರಿಗಳನ್ನು ಬಿಟ್ಟು ಕೊಡುವುದಿಲ್ಲ, ಸರ್ಕಾರ ಸ್ವಾಧೀನಕ್ಕೆ ಪಡೆದುಕೊಳ್ಳಲಿದೆ. ಒತ್ತುವರಿಯಿಂದ ತೆರವು ಮಾಡಿದ 15 ದಿನಗಳಲ್ಲಿ ಮತ್ತೆ ಒತ್ತುವರಿಯಾಗುತ್ತಿದೆ, ಇದನ್ನು ತಪ್ಪಿಸಲು ಶಾಶ್ವತ ಸರಪಳಿ ಬೇಲಿ ನಿರ್ಮಿಸಲು 100 ಕೋಟಿ ರೂ. ಅನುದಾನ ನೀಡುವಂತೆ ಮುಖ್ಯಮಂತ್ರಿ ಬಳಿ ಮನವಿ ಮಾಡಿದ್ದೇವೆ ಎಂದರು.

## ನಗರಕ್ಕೆ 10-12 ದಿನಗಳಿಗೊಮ್ಮೆ ನೀರು ಸರಬರಾಜು : ಸರಿಪಡಿಸಲು ಒತ್ತಾಯ



ದಾವಣಗೆರೆ, ಮಾ.24 - ನಗರದಲ್ಲಿ ನೀರಿನ ಹಾಹಾಕಾರ ಪ್ರಾರಂಭವಾಗಿದ್ದು, ದಾವಣಗೆರೆ ನಗರದ ಬಹುತೇಕ ಎಲ್ಲಾ ಭಾಗಗಳಲ್ಲೂ 10-12 ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದ್ದು, ಸಾರ್ವಜನಿಕರು ಪರದಾಡುವ ಪರಿಸ್ಥಿತಿ ಬಂದಿದೆ.

ಆದರೂ ಮೇಯರ್ ಅವರು ಇಂದು ಪತ್ರಿಕೆಗಳಲ್ಲಿ ನೀಡಿರುವ ಹೇಳಿಕೆ ಬೇಸರ ತರಿಸುವಂತಿದ್ದು. ಯಾವ ಭಾಗದಲ್ಲಿ 5-6 ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ ಎಂಬುದನ್ನು ತಿಳಿಸಲಿ ಎಂದು ಸವಾಲು ಹಾಕಿದ್ದಾರೆ.

ಮೇಯರ್ ಅವರು ವಾಸ್ತವಾಂಶವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೇ ಹೊರತು, ಯಾವುದೋ ಅಧಿಕಾರಿಗಳು ಹೇಳಿದ ರೀತಿಯಲ್ಲಿ ಹೇಳಿಕೆ ನೀಡಬಾರದೆಂದು ಸಲಹೆ ನೀಡಿದ್ದಾರೆ.

ಬೇಸಿಗೆಯಲ್ಲಿ ನೀರಿನ ಅವಶ್ಯಕತೆ ಹೆಚ್ಚು ಎಂಬುದನ್ನು ಮನಗಂಡು ಮೇಯರ್ ಅವರು ಕನಿಷ್ಠ 3-4 ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲು ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

## ಸಂಭ್ರಮದಿಂದ ನಡೆದ ದೊಡ್ಡಾಲಘಟ್ಟ ಶ್ರೀ ರಂಗನಾಥಸ್ವಾಮಿ ರಥೋತ್ಸವ



ಚಿತ್ರದುರ್ಗ, ಮಾ. 24 - ತಾಲ್ಲೂಕಿನ ದೊಡ್ಡಾಲಘಟ್ಟ ಗ್ರಾಮದ ಶ್ರೀ ರಂಗನಾಥ ಸ್ವಾಮಿ ರಥೋತ್ಸವವವು ಬುಧವಾರದಂದು ನೆರವೇರಿತು.

ಈ ಸಂದರ್ಭದಲ್ಲಿ ಶ್ರೀ ರಂಗನಾಥ ಸ್ವಾಮಿ ಬಾವುಟವನ್ನು ಒಂದು ಲಕ್ಷದ ಅರವತ್ತೊಂದು ಸಾವಿರ ರೂ. ದಾವಣಗೆರೆ ಗೊಬ್ಬರ ವ್ಯಾಪಾರಿ ಅಣಬೇರು ಗಂಗಾಧರ್ ಹರಾಜಿನಲ್ಲಿ ಪಡೆದರು.

# ಕೊರೊನಾ ತಿಂಗಳಲ್ಲಿ ಹೆಚ್ಚಾಗುವ ಸಾಧ್ಯತೆ

## ಜಿಲ್ಲಾಡಳಿತ ಸಭೆ - ಸಮಾರಂಭಗಳಿಗೆ ಕಡಿವಾಣ ಹಾಕಲು ಸೂಚನೆ : ಸುಧಾಕರ್

ಬೆಂಗಳೂರು, ಮಾ. 24 - ರಾಜ್ಯದಲ್ಲಿ ಕೊರೊನಾ ಸೋಂಕಿನ ಪ್ರಮಾಣ ಮುಂದಿನ ಒಂದು ತಿಂಗಳು ಹೆಚ್ಚಾಗುವ ಸಾಧ್ಯತೆ ಇದ್ದು, ಜಿಲ್ಲಾಡಳಿತ ಸಭೆ-ಸಮಾರಂಭ, ಮನರಂಜನೆ, ಧಾರ್ಮಿಕ ಕಾರ್ಯಕ್ರಮಗಳಿಗೆ ಕಡಿವಾಣ ಹಾಕಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಸೂಚಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ಒಂದು ತಿಂಗಳು ಅತ್ಯಂತ ಸವಾಲಿನ ಪರಿಸ್ಥಿತಿ ಎದುರಾಗುವ ಸಂಭವವಿದೆ, ಪಾಸಿಟಿವ್ ಪ್ರಕರಣಗಳ ಸಂಖ್ಯೆ ಶೇ.2ರಷ್ಟು ಹೆಚ್ಚಾಗುತ್ತಿದೆ, ಮನರಂಜನೆ, ಧಾರ್ಮಿಕ ಕಾರ್ಯಕ್ರಮಗಳು, ರಾಜಕೀಯ ಚಟುವಟಿಕೆಗಳು, ಸಭೆ-ಸಮಾರಂಭಗಳಿಗೆ ಅವಕಾಶ ನೀಡದಂತೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದರು.

ಈಗಾಗಲೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಜಿಲ್ಲಾಧಿಕಾರಿಗಳ ಜೊತೆ ಮಾತುಕತೆ ನಡೆಸಲಾಗಿದೆ. ಗಡಿ ಭಾಗಗಳಲ್ಲಿ ಹೊರರಾಜ್ಯಗಳಿಂದ ಬಂದವರನ್ನು ತಪಾಸಣೆ ಮಾಡುವುದು, ಕೊರೊನಾ ನೆಗೆಟಿವ್ ಪ್ರಮಾಣಪತ್ರ ನೀಡುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಂಡಿದ್ದೇವೆ.

ಧಾರ್ಮಿಕ ಮುಖಂಡರು ಜನರಲ್ಲಿ ಕೋವಿಡ್ ಕುರಿತಂತೆ ಅರಿವು ಮೂಡಿಸುವ ಕಾರ್ಯ ಮಾಡಬೇಕು. ಹೆಚ್ಚು ಜನರು ಸೇರದಂತೆ ಸ್ವಾಮೀಜಿಗಳು ಭಕ್ತರಿಗೆ ಸೂಚಿಸಬೇಕು ಎಂದು ಸುಧಾಕರ್ ಮನವಿ ಮಾಡಿದರು.

ರಾಜ್ಯದಲ್ಲಿ ಲಸಿಕೆ ಕೊರತೆ ಎದುರಾಗಿಲ್ಲ, ರಾಜ್ಯದಲ್ಲಿ ಪ್ರಸ್ತುತ 4 ಲಕ್ಷ ಡೋಸ್ ಲಸಿಕೆ ಅಗತ್ಯವಿತ್ತು, ಸಾಕಷ್ಟು ಲಸಿಕೆ ಸಂಗ್ರಹ ಇದೆ. ವಾರಾಂತ್ಯಕ್ಕೆ ಕೇಂದ್ರದಿಂದ ಹನ್ನೆರಡೂವರೆ ಲಕ್ಷ ಡೋಸ್ ಲಸಿಕೆ ರಾಜ್ಯಕ್ಕೆ ಬರಲಿದೆ, ಕರ್ನಾಟಕಕ್ಕೆ ಅಗತ್ಯವಿರುವಷ್ಟು ಕೋವಿಡ್ ಲಸಿಕೆ ನೀಡುವ ಭರವಸೆಯನ್ನು ಕೇಂದ್ರ ಸಚಿವರು ನೀಡಿದ್ದಾರೆ.

ವದಂತಿಗಳಿಗೆ ಕಿವಿಗೊಡದೆ 45 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ನಿಗದಿಪಡಿಸಿರುವ ಆರೋಗ್ಯ ಕೇಂದ್ರಗಳಲ್ಲಿ ಕಡ್ಡಾಯವಾಗಿ ಕೋವಿಡ್ ಲಸಿಕೆ ಪಡೆದುಕೊಳ್ಳಬೇಕು ಎಂದು ಡಾ. ಸುಧಾಕರ್ ಮನವಿ ಮಾಡಿದರು.

## ರಾಷ್ಟ್ರೀಯ ಕಬಡ್ಡಿಗೆ ಕರ್ನಾಟಕ ತಂಡಕ್ಕೆ ಆಯ್ಕೆ



ದಾವಣಗೆರೆ, ಮಾ. 24 - ಜಿಲ್ಲಾ ಅಮಚೂರ್ ಕಬ್ಬಡಿ ಸಂಸ್ಥೆ ಆಶ್ರಯದಲ್ಲಿ ನಡೆದ ಉದಯೋನ್ಮುಖ ಕಬಡ್ಡಿ ಕ್ರೀಡಾಪಟು ಚಂದ್ರಾನಾಯ್ಕ್ ರಾಷ್ಟ್ರಮಟ್ಟದ ಜೂನಿಯರ್ ಚಾಂಪಿಯನ್ ಶಿಪ್‌ನಲ್ಲಿ ದಾವಣಗೆರೆಯಿಂದ ಪ್ರತಿನಿಧಿಸುತ್ತಿದ್ದಾರೆ. ತೆಲಂಗಾಣದ ಸೂರ್ಯಂ ಪೇಟ್‌ನಲ್ಲಿ ನಡೆಯಲಿರುವ 47ನೇ ರಾಷ್ಟ್ರೀಯ ಜ್ಯೂನಿಯರ್ ಕಬಡ್ಡಿ ತಂಡದಲ್ಲಿ ಕರ್ನಾಟಕದಿಂದ ಭರವಸೆ ನಾಯಕನಾಗಿ ಆಯ್ಕೆಯಾಗಿದ್ದಾರೆ. ಇವರಿಗೆ ದಾವಣಗೆರೆ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯ ಕಾರ್ಯದರ್ಶಿಗಳಾದ ಎಂ. ನಾರಾಯಣಸ್ವಾಮಿ, ಜಿಲ್ಲಾಧ್ಯಕ್ಷರಾದ ಎಂ.ನಾಗರಾಜ್, ಅಮೆಚೂರ್ ಕಬಡ್ಡಿ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ವರ್ಷದ ನಂತರ ಮೊದಲ ಬಾರಿಗೆ ತೈಲ ಬೆಲೆ ಇಳಿಕೆ

ನವದೆಹಲಿ, ಮಾ. 24 – ಕಳೆದ ಒಂದು ವರ್ಷದಲ್ಲಿ ಮೊದಲ ಬಾರಿಗೆ ಪೆಟ್ರೋಲ್ ಬೆಲೆ ಇಳಿಕೆಯಾಗಿದ್ದು, ಬುಧವಾರ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 18 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 17 ಪೈಸೆ ಇಳಿಸಲಾಗಿದೆ.

ಫೆಬ್ರವರಿ ನಂತರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಗಣನೀಯವಾಗಿ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಬೆಲೆ ಇಳಿಕೆಯಲ್ಲಿ ವ್ಯತ್ಯಾಸವಾಗಿದೆ. ಮಾರ್ಚ್ 16, 2020ರ ನಂತರ ಇದೇ ಮೊದಲ ಬಾರಿಗೆ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಇಳಿಕೆ ಮಾಡಲಾಗಿದೆ.

ರಾಜಸ್ಥಾನ, ಮಹಾರಾಷ್ಟ್ರ ಹಾಗೂ ಮಧ್ಯ ಪ್ರದೇಶ ಸೇರಿದಂತೆ ಹಲವೆಡೆ ಪೆಟ್ರೋಲ್ ಬೆಲೆ ಲೀಟರ್‌ಗೆ 100 ರೂ.ಗಳ ಗಡಿ ದಾಟಿದೆ. ಫೆಬ್ರವರಿ ಅಂತ್ಯದಲ್ಲಿ ನಾಲ್ಕು ರಾಜ್ಯ ಹಾಗೂ ಒಂದು ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಿಗೆ ಚುನಾವಣೆ ಘೋಷಿಸಿದ ನಂತರ ತೈಲ ಬೆಲೆ ಏರಿಕೆ ತಡೆಯಲಾಗಿತ್ತು

## ಎನ್.ಜಿ.ಒ.ಗಳಿಗೆ 50 ಸಾವಿರ ಕೋಟಿ ರೂ. ದೇಣಿಗೆ

ನವದೆಹಲಿ, ಮಾ. 24 – ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎನ್.ಜಿ.ಒ.ಗಳು ಕಳೆದ ನಾಲ್ಕು ವರ್ಷಗಳಲ್ಲಿ 50,975 ಕೋಟಿ ರೂ.ಗಳ ವಿದೇಶಿ ದೇಣಿಗೆ ಪಡೆದಿವೆ. ಈ ಪೈಕಿ ಅತಿ ಹೆಚ್ಚು 19,941 ಕೋಟಿ ರೂ.ಗಳು ಅಮೆರಿಕದಿಂದ ಬಂದಿದ ಎಂದು ರಾಜ್ಯಸಭೆಗೆ ತಿಳಿಸಲಾಗಿದೆ ಗೃಹ ಖಾತೆ ಅಧೀನ ಸಚಿವ ನಿತ್ಯಾನಂದ ರಾಯ್ ಈ ವಿವರ ನೀಡಿದ್ದು, 18 ಸಾವಿರದಷ್ಟು ಎನ್.ಜಿ.ಒ.ಗಳು 130 ದೇಶಗಳಿಂದ ವಿದೇಶಿ ದೇಣಿಗೆ ಪಡೆದಿವೆ ಎಂದು ತಿಳಿಸಿದ್ದಾರೆ.

## ಚುನಾವಣಾ ಬಾಂಡ್ ದುರ್ಬಳಕೆ : ಸುಪ್ರೀಂ ಎಚ್ಚರಿಕೆ

ನವದೆಹಲಿ, ಮಾ. 24 – ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳು ಪಡೆಯುವ ಹಣವನ್ನು ಉಗ್ರವಾದದಂತಹ ಅಕ್ರಮಗಳಿಗೆ ಬಳಸುವ ಅಪಾಯವಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ಹಣದ ಬಳಕೆಯ ಬಗ್ಗೆ ಏನಾದರೂ ನಿಯಂತ್ರಣ ಇದೆಯೇ? ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದೆ.

ಸರ್ಕಾರ ಚುನಾವಣಾ ಬಾಂಡ್‌ಗಳ ಬಳಕೆಯ ಕುರಿತು ಪರಿಶೀಲಿಸಬೇಕಿದೆ ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರಿಗೆ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಗಳಿಗಾಗಿ ಚುನಾವಣಾ ಬಾಂಡ್ ಮಾರಲು ಕೇಂದ್ರ ಸರ್ಕಾರ ಅನುಮತಿ ನೀಡಬಾರದು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದು ದಾಖಲಾಗಿದೆ. ಅರ್ಜಿಯ ವಿಚಾರಣೆ ನಡೆಸುವಾಗ ನ್ಯಾಯಾಲಯ ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ.

## ಪ್ರಧಾನ ಮಂತ್ರಿ ವಸತಿ ಯೋಜನೆಯಲ್ಲಿ ಅವ್ಯವಹಾರ : ಸಿಬಿಐ


ನವದೆಹಲಿ, ಮಾ. 24 – ದಿವಾನ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಡಿ.ಹೆಚ್.ಎಫ್.ಎಲ್.) ಪ್ರವರ್ತಕರಾದ ಕಪಿಲ್ ಹಾಗೂ ಧೀರಜ್ ವಾಧವಾನ್ ಪ್ರಧಾನ ಮಂತ್ರಿ ವಸತಿ ಯೋಜನೆಯಲ್ಲಿ ಅವ್ಯವಹಾರ ನಡೆಸಿದ್ದನ್ನು ಬಯಲಿಗೆ ಎಳೆದಿರುವುದಾಗಿ ಸಿಬಿಐ ತಿಳಿಸಿದೆ.

ಕಪಿಲ್ ಹಾಗೂ ಧೀರಜ್ ವಾಧವಾನ್ ಅವರು 14 ಸಾವಿರ ಕೋಟಿ ರೂ. ಮೊತ್ತದ ನಕಲಿ ಗೃಹ ಸಾಲದ ಖಾತೆಗಳನ್ನು ತೆರೆದು ಸರ್ಕಾರಕ್ಕೆ 1,880 ಕೋಟಿ ರೂ.ಗಳ ಸಬ್ಸಿಡಿ ವಂಚನೆ ಮಾಡಿದ್ದಾರೆ ಎಂದು ಸಿಬಿಐ ಆರೋಪಿಸಿದೆ. 2015ರ ಅಕ್ಟೋಬರ್‌ನಲ್ಲಿ ಪ್ರಧಾನ ಮಂತ್ರಿ ವಸತಿ ಯೋಜನೆ (ಪಿಎಂಎವೈ) ಆರಂಭಿಸಲಾಗಿತ್ತು. ಈ ಯೋಜನೆಯ ಅನ್ವಯ ಆರ್ಥಿಕವಾಗಿ ದುರ್ಬಲರು ಹಾಗೂ ಮಧ್ಯಮ ಆದಾಯದವರು ಮನೆ ಕಟ್ಟಲು ಸಾಲ ಪಡೆಯುವಾಗ ಸಬ್ಸಿಡಿ ನೀಡಲಾಗುತ್ತಿತ್ತು.

## ವಾಟ್ಸಾಪ್ ಖಾಸಗಿತನ : ಸಿಸಿಐ ತನಿಖೆ

ನವದೆಹಲಿ,ಮಾ.24-ವಾಟ್ಸ್‌ಆಪ್ ತನ್ನ ಖಾಸಗಿ ನೀತಿಗೆ ಬದಲಾವಣೆ ತಂದಿರುವುದು ಶೋಷಣೆಯದು ಹಾಗೂ ಪ್ರತ್ಯೇಕವಾಗಿರಿಸುವಂಥದ್ದು ಎಂಬುದು ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ತನಿಖೆ ನಡೆಸಲು ವ್ಯಾಪಾರಿ ನಿಯಂತ್ರಕ ಸಿ.ಸಿ.ಐ. ಆದೇಶಿಸಿದೆ. ಪೂರ್ಣ ಪ್ರಮಾಣದ ವಿವರಗಳನ್ನು ಅರಿಯಲು ತನಿಖೆ ನಡೆಸಬೇಕಿದೆ ಎಂದು ಭಾರತೀಯ ಸ್ಪರ್ಧಾ ಆಯೋಗ ತಿಳಿಸಿದ್ದು, ತನ್ನ ತನಿಖಾ ಸಂಸ್ಥೆಯಾದ ಪ್ರಧಾನ ನಿರ್ದೇಶನಾಲಯ 60 ದಿನಗಳಲ್ಲಿ ವರದಿ ಸಲ್ಲಿಸಬೇಕು ಎಂದು ತಿಳಿಸಿದೆ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte